ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 5 ಮಂಗಳವಾರ 2022

ಸಂಪುಟ: 43 | ಸಂಚಿಕೆ: 345 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗ್: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅಮಿತ್ ಷಾ ರಾಜ್ಯ ಭೇಟಿ ಹಿಂದೆಯೇ ಸಿಎಂ ಬೊಮ್ಮಾಯಿಗೆ ದೆಹಲಿ ಬುಲಾವ್

● ಇಂದು ಮುಖ್ಯಮಂತ್ರಿ ಎರಡು ದಿನದ ದೆಹಲಿ ಯಾತ್ರೆ ● ಈಗಾಗಲೇ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಕರೆಸಿಕೊಂಡು ಮಾತುಕತೆ ನಡೆಸಿರುವ ವರಿಷ್ಠ ನಾಯಕರು ● ದೆಹಲಿಯಲ್ಲೇ ಇರಲು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಗೂ ಸೂಚನೆ ● ತೀವ್ರ ಕುತೂಹಲ ಕೆರಳಿಸಿರುವ ವರಿಷ್ಠರ ನಡೆ



ಬೆಂಗಳೂರು,ಏ.4(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರು ಬುಲಾವ್ ಮಾಡಿದ್ದಾರೆ. ವರಿಷ್ಠರ ಆಹ್ವಾನದ ಮೇರೆಗೆ ಮುಖ್ಯಮಂತ್ರಿ ನಾಳೆ (ಏ.5)ಮಧ್ಯಾಹ್ನ ದೆಹಲಿಗೆ ತೆರಳುತ್ತಿದ್ದು, ಎರಡು ದಿನಗಳ ಕಾಲ ಅಲ್ಲಿಯೇ ಬಿಡಾರ ಹೂಡಲಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯಕ್ಕೆ ಭೇಟಿ ನೀಡಿ ಮರಳುತ್ತಿದ್ದಂತೆ ಮುಖ್ಯಮಂತ್ರಿ ಅವರನ್ನು ಕರೆಸಿಕೊಳ್ಳುತ್ತಿರುವುದು ಹಲವಾರು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ. ಮುಖ್ಯಮಂತ್ರಿ ಅವರು ದೆಹಲಿಗೆ ತೆರಳುವುದಕ್ಕೂ ಮುನ್ನವೇ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ವರಿಷ್ಠರು ಕರೆಸಿಕೊಂಡಿದ್ದಾರೆ. ಹುಬ್ಬಳ್ಳಿಯಲ್ಲಿದ್ದ ಶೆಟ್ಟರ್ ಅವರನ್ನು ತಡರಾತ್ರಿ ವರಿಷ್ಠರು ಸಂಪರ್ಕಿಸಿ ದೆಹಲಿಗೆ ಬರುವಂತೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಇಂದು ಅವರು ಬೆಳಗಾವಿ ಮೂಲಕ ದೆಹಲಿಗೆ ತೆರಳಿದ್ದಾರೆ.

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ನಂತರ ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳ ಕಡೆ ಗಮನ ಹರಿಸಿರುವ ವರಿಷ್ಠರು, ಈ ರಾಜ್ಯಗಳಲ್ಲಿ ಮತ್ತೆ ಅಧಿಕಾರಕ್ಕೆ ಬರಬೇಕೆಂದು ಪಣ ತೊಟ್ಟಿದ್ದಾರೆ. ಕರ್ನಾಟಕದಲ್ಲಿ ಪೂರ್ಣ ಬಹುಮತ ಗಳಿಸಿ ಎಂದೂ ಅಧಿಕಾರದ ಚುಕ್ಕಾಣಿ ಹಿಡಿಯಲು ಇನ್ನೂ ಸಾಧ್ಯವಾಗಿಲ್ಲ. 2023ರ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತರಬೇಕು ಎಂದು ಈಗಿನಿಂದಲೇ ಸಜ್ಜುಗೊಳಿಸಲು ಮುಂದಾಗಿದ್ದಾರೆ. ಆದರೆ, ಪಕ್ಷ ಮತ್ತು ಸರ್ಕಾರದಲ್ಲಿ ಕೆಲವು ಗೊಂದಲಗಳು ಸೃಷ್ಟಿಯಾಗಿ ಪಕ್ಷಕ್ಕೆ ಹಿನ್ನಡೆ ಯಾಗುತ್ತಿದೆ. ಇದನ್ನು ತಪ್ಪಿಸಿ ಸಂಘಟನಾತ್ಮಕವಾಗಿ ಚುನಾವಣೆ ಎದುರಿಸಲು ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಇದರ ಅಂಗವಾಗಿಯೇ ಮುಖ್ಯಮಂತ್ರಿ ಅವರನ್ನು ದೆಹಲಿಗೆ ಕರೆಸಿಕೊಳ್ಳಲಾಗುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಈ ಭೇಟಿಯ ಸಂದರ್ಭದಲ್ಲಿ ಸರ್ಕಾರದಲ್ಲಿ ಮಹತ್ತರ ಬದಲಾವಣೆ ಬಗ್ಗೆ ವರಿಷ್ಠರು ಚರ್ಚಿಸುವ ಸಾಧ್ಯತೆ ಇದೆ. ಒಂದು ವೇಳೆ ಅಂಥ ನಿರ್ಧಾರ ಕೈಗೊಂಡರೆ, ಏ.10ರ ವೇಳೆಗೆ ಎಲ್ಲವೂ ಪೂರ್ಣಗೊಳ್ಳುತ್ತದೆ.

ಒಂದು ವೇಳೆ ನಾಯಕತ್ವ ಬದಲಾವಣೆ ಇಲ್ಲವೆಂದರೆ, ಕೇಂದ್ರ ಬಿಜೆಪಿ ನಾಯಕರ ಮಾರ್ಗದರ್ಶನದಲ್ಲೇ ಉಳಿದ ಅವಧಿಯ ಆಡಳಿತ ನಡೆಯುತ್ತದೆ. ಬೊಮ್ಮಾಯಿ ಅವರ 2 ದಿನಗಳ ದೆಹಲಿ ಭೇಟಿ ಸಂದರ್ಭದಲ್ಲೇ ಎಲ್ಲವೂ ಇತ್ಯರ್ಥವಾಗಲಿದೆ. ಆದರೆ, ಮುಖ್ಯಮಂತ್ರಿ ಕಾರ್ಯಾಲಯ ಮಾತ್ರ ಕೇಂದ್ರ ಜಲಶಕ್ತಿ ಸಚಿವರ ಭೇಟಿಗಾಗಿ ದೆಹಲಿ ಪ್ರವಾಸ ಎನ್ನುತ್ತಿದೆ. ಆದರೆ, ಪಕ್ಷದ ಮೂಲಗಳ ಪ್ರಕಾರ ಪ್ರಮುಖ ರಾಜಕೀಯ ನಿರ್ಧಾರ ಕೈಗೊಳ್ಳಲು ಬೊಮ್ಮಾಯಿ ಅವರನ್ನು ದೆಹಲಿಗೆ ಕರೆಸಿಕೊಳ್ಳುತ್ತಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಶೆಟ್ಟರ್ ಕರೆಸಿಕೊಂಡು ಮಾತುಕತೆ ನಡೆಸಿರುವುದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ದೆಹಲಿಯಲ್ಲೇ ಉಳಿಯುವಂತೆ ನಿರ್ದೇಶನ ನೀಡಿರುವುದು ಹಲವು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ.

ಶೀಘ್ರವೇ ಮಾಸ್ಕ್ ರದ್ದು ನಿರ್ಧಾರ

ಬೆಂಗಳೂರು,ಏ.4(ಕೆಎಂಶಿ)– ರಾಜ್ಯದಲ್ಲಿ ಕೋವಿಡ್–19 ದೊಡ್ಡ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ಮಾಸ್ಕ್ ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆ.

ರಾಜ್ಯದಲ್ಲಿ ಕೇವಲ 50 ಕೋವಿಡ್ ಪ್ರಕರಣಗಳು ಮಾತ್ರ ಕಾಣಿಸಿಕೊಂಡಿವೆ. ಕೇಂದ್ರ ಸರ್ಕಾರ ಕೋವಿಡ್‌ನ ಬಹುತೇಕ ನಿಯಮಗಳನ್ನು ರದ್ದು ಮಾಡಿದೆ.

ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ, ದೆಹಲಿ, ಹರಿಯಾಣದಲ್ಲಿ ಮಾಸ್ಕ್ ರದ್ದು ಮಾಡಲಾಗಿದೆ. ರಾಜ್ಯದಲ್ಲೂ ಮಾಸ್ಕ್ ರದ್ದು ಮಾಡುವ ಸಂಬಂಧ ಶೀಘ್ರವೇ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಶೇ.90ರಷ್ಟು ಮಂದಿ ಮಾಸ್ಕ್ ಬಳಸುತ್ತಿಲ್ಲ. ಸರ್ಕಾರ ಕೂಡ ಅಂಥವರಿಗೆ ದಂಡ ಹಾಕುತ್ತಿಲ್ಲ ಎಂದರು.

ಎರಡ್ಮೂರು ದಿನದಲ್ಲಿ ಸರ್ಕಾರಿ ದಾಖಲೆ ಕಲ್ಪಿಸುವ ತತ್ಕಾಲ್ ಸೇವೆ

ಬೆಂಗಳೂರು,ಏ.4(ಕೆಎಂಶಿ)– ಕಾಲಮಿತಿಯಲ್ಲಿ ಸರ್ಕಾರಿ ಸೇವೆಗಳ ಭರವಸೆ ನೀಡುವ 'ಸಕಾಲ ಸೇವೆ' ಯೋಜನೆಯಡಿ 'ತತ್ಕಾಲ್ ಸೇವೆ'ಯನ್ನು ಜಾರಿಗೆ ತರುವ ಚಿಂತನೆ ಇದೆ ಎಂದು ಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ.ನಾಗೇಶ್ ಹೇಳಿದರು. ಸಕಾಲ ಸೇವೆ ಆರಂಭವಾಗಿ ಏಪ್ರಿಲ್ 2ಕ್ಕೆ 10 ವರ್ಷಗಳು ಪೂರ್ಣಗೊಂಡಿರುವ ● 9ನೇ ಪುಟಕ್ಕೆ

ಅಗತ್ಯ ವಸ್ತುಗಳು, ಪೆಟ್ರೋಲ್, ಡೀಸೆಲ್, ಸಿಲಿಂಡರ್ ಆಯ್ತು, ಈಗ

ಕರೆಂಟ್ ಶಾಕ್

ಯೂನಿಟ್‌ಗೆ 35 ಪೈಸೆ ಹೆಚ್ಚಳ: ಏ.1ರಿಂದ ಪೂರ್ವಾನ್ವಯ

ಬೆಂಗಳೂರು,ಏ.4(ಕೆಎಂಶಿ)–ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ದಿನನಿತ್ಯದ ಬಳಕೆಯ ವಸ್ತುಗಳ ಬೆಲೆ ಏರಿಕೆ ಬೆನ್ನಲ್ಲೇ ರಾಜ್ಯ ಸರ್ಕಾರ ಪ್ರತಿ ಯುನಿಟ್‌ಗೆ ಸರಾಸರಿ 35 ಪೈಸೆ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಏ.1ರಿಂದ ಪೂರ್ವಾನ್ವಯವಾಗುವಂತೆ ಪರಿಷ್ಕೃತ ದರ ಜಾರಿಗೆ ಬರಲಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಹಂಗಾಮಿ ಅಧ್ಯಕ್ಷ ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಲ್ಲದೆ, ವಿದ್ಯುತ್ ಕಂಪನಿಗಳು ಸರಸರಿ 1.85 ರೂ. ಹೆಚ್ಚಳಕ್ಕೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿದ್ದವು. ವಿದ್ಯುತ್ ಪೂರೈಕೆಯ ವ್ಯವಹಾರವನ್ನು ವಿದ್ಯುತ್ ಸರಬರಾಜು ಕಂಪನಿಗಳು ಸುಲಲಿತವಾಗಿ ನಡೆಸಲು ಅನುವು ಮಾಡಿಕೊಡುವ ಸಲುವಾಗಿ ವಿದ್ಯುತ್ ಪೂರೈಕೆ ಹೆಚ್ಚಳ ಅನಿವಾರ್ಯವೆಂದು ಆಯೋಗ ಸಮರ್ಥಿಸಿಕೊಂಡಿದೆ. 10 ಹೆಚ್‌ಪಿವರೆಗಿನ ಕೃಷಿ ಪಂಪ್‌ಸೆಟ್‌ಗಳಿಗೆ ಎಂದಿನಂತೆ ಉಚಿತ ವಿದ್ಯುತ್ ಸೌಲಭ್ಯ ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಪೂರೈಕೆ ಯಥಾಸ್ಥಿತಿ ಮುಂದುವರೆದಿದೆ. ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಕೋವಿಡ್–19ರ ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳಲು ಆಯೋಗವು 1 ವರ್ಷದವರೆಗೆ ಮಾಸಿಕ ಇಂಧನ ಬಳಕೆಯಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯ್ತಿ ನೀಡಲು ನಿರ್ಧರಿಸಿದೆ. ಅದೇ ರೀತಿ ಋತುಕಾಲಿಕ ಕೈಗಾರಿಕೆಗಳಾದ ಮಂಜುಗಡ್ಡೆ ಉತ್ಪಾದನಾ ಘಟಕ, ಶಿಥಲೀಕರಣ ● 5ನೇ ಪುಟಕ್ಕೆ



> ಕಲ್ಲಿದ್ದಲು ಬೆಲೆ ಹೆಚ್ಚಾಗಿದ್ದರಿಂದ ವಿದ್ಯುತ್ ಬೆಲೆಯನ್ನು ಏರಿಕೆ ಮಾಡಲಾಗಿದೆ. ಇದು ಕೇವಲ ತಾತ್ಕಾಲಿಕ ದರ ಹೆಚ್ಚಳವಾಗಿದ್ದು, ಕಲ್ಲಿದ್ದಲು ದರ ಇಳಿಕೆಯಾದ ನಂತರ ವಿದ್ಯುತ್ ದರ ಕೂಡ ಇಳಿಕೆ ಮಾಡಲಾಗುವುದು.
> –ಮುರುಗೇಶ್ ನಿರಾಣಿ, ಕೈಗಾರಿಕಾ ಸಚಿವ

ವಿದ್ಯುತ್ ಸರಬರಾಜು ಕಂಪನಿಗಳು	ಪ್ರಸ್ತಾವಿತ ಏರಿಕೆ ಪೈಸೆಗಳಲ್ಲಿ	ಶೇಕಡಾ ಏರಿಕೆ
ಬೆ.ವಿ.ಸ.ಕಂ	158	19.68
ಮ.ವಿ.ಸ.ಕಂ	132	17.60
ಚಾ.ವಿ.ಸ.ನಿ.ನಿ	227	30.45
ಹು.ವಿ.ಸ.ಕಂ	217	29.33
ಗು.ವಿ.ಸ.ಕಂ	236	30.52
ಒಟ್ಟು	185	23.83

ಏ.10ರಿಂದ ಮೈಸೂರಲ್ಲಿ ಹೋಟೆಲ್ ತಿಂಡಿ–ಊಟದ ದರ ಶೇ.5ರಷ್ಟು ಹೆಚ್ಚಳ

ಮೈಸೂರು,ಏ.4– ಅಡುಗೆ ಎಣ್ಣೆ, ಗ್ಯಾಸ್ ಸಿಲಿಂಡರ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ರಾಜ್ಯಾದ್ಯಂತ ಹೋಟೆಲ್ ಮಾಲೀಕರು ಊಟ, ತಿಂಡಿ ದರವನ್ನು ಹೆಚ್ಚಳ ಮಾಡಲು ತೀರ್ಮಾನ ಕೈಗೊಂಡಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ಊಟ, ತಿಂಡಿ ಹಾಗೂ ಕಾಫಿ–ಟೀ ದರವನ್ನು ಶೇ.10ರಷ್ಟು ಹೆಚ್ಚಳ ಮಾಡಲು ತೀರ್ಮಾನ ಕೈಗೊಂಡಿರುವುದಾಗಿಯೂ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.



ಇತ್ತ ಮೈಸೂರಿನಲ್ಲಿ ಏಪ್ರಿಲ್ 10ರಿಂದ ಊಟ, ತಿಂಡಿ. ಹಾಗೂ ಕಾಫಿ–ಟೀ ದರವನ್ನು ಶೇ.5ರಷ್ಟು ಹೆಚ್ಚಿಸಲು ಹೋಟೆಲ್ ಮಾಲೀಕರ ಸಂಘ ತೀರ್ಮಾನಿಸಿದೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ. ಎಲ್ಲಾ ತರಹದ ದಿನಸಿ ಪದಾರ್ಥ, ಅಡುಗೆ ಎಣ್ಣೆ, ಅನಿಲ ಸಿಲಿಂಡರ್, ಪ್ಯಾಕಿಂಗ್ ಮೆಟೀರಿಯಲ್ಸ್ ಹಾಗೂ ನೌಕರರ ವೇತನ ಶೇ.25ರಷ್ಟು ಹೆಚ್ಚಾಗಿದೆ. ನಂದಿನಿ ತುಪ್ಪ ಲೀಟರೊಂದಕ್ಕೆ 30 ರೂ., ಕಾಫಿ–ಟೀ ಪೌಡರ್ ಶೇ. 30ರಷ್ಟು, ಸಾಂಬಾರ ಪದಾರ್ಥಗಳು ಶೇ. 33ರಷ್ಟು ಹೆಚ್ಚಳವಾಗಿದೆ. ಟ್ರೇಡ್ ಲೈಸೆನ್ಸ್ ಶುಲ್ಕವು ಕೂಡ ಶೇ.20ರಷ್ಟು ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಹೋಟೆಲ್ ಉದ್ಯಮ ● 5ನೇ ಪುಟಕ್ಕೆ

ವಿದ್ಯುತ್ ಕೊರತೆಯೇ ಇಲ್ಲ ಎಂದ ಮೇಲೆ ದರ ಏರಿಕೆ ಮಾಡಿದ್ದು ಏಕೆ?

ಬೆಂಗಳೂರು: ವಿದ್ಯುತ್ ಕೊರತೆಯೇ ಇಲ್ಲ ಎನ್ನುವ ಸರಕಾರ, ಈಗ ದರ ಏರಿಕೆ ಮಾಡಿದ್ದು ಏಕೆ? ಜನರ ಮೇಲೆ ಭಾರ ಹೊರೆಸಿ ವಿದ್ಯುತ್ ಅನ್ನು ಸರಕಾರ ಕಳ್ಳ ಮಾರ್ಗದಲ್ಲಿ ಮಾರಿಕೊಳ್ಳುತ್ತಿದೆಯಾ? ಇಲ್ಲ ಎನ್ನುವುದಾದರೆ ದರ ಏರಿಕೆ ಹಿಂಪಡೆಯಲಿ ಎಂಬುದಾಗಿ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಬಿಜೆಪಿ ಬೆಲೆ ಏರಿಕೆಯ ಬರೆ ಹಾಕುವ ಹೀನ ಕೃತ್ಯ ಮುಂದುವರೆದಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಏರಿಕೆಯ ಜತೆ ಜತೆಗೇ, ಈಗ ಕರೆಂಟ್ ಶಾಕ್ ಅನ್ನೂ ಕೊಟ್ಟಿದೆ. ಆತ್ಮಸಾಕ್ಷಿ ಇಲ್ಲದ ಸರಕಾರಕ್ಕೆ ಹಣ ಮಾಡುವುದೇ ದಂಧೆ ಆಗಿಬಿಟ್ಟಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.



ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡಿ, ಸರಿಯಾಗಿ ವಿದ್ಯುತ್ ಪೂರೈಕೆ ಮಾಡದ ಸರಕಾರ, ಪ್ರತಿ ಯೂನಿಟ್‌ಗೆ 35 ಪೈಸೆ ಹೆಚ್ಚಳ ಮಾಡಿದೆ. ಗುಣಮಟ್ಟದ ವಿದ್ಯುತ್ ಕೊಡಲು ಕೈಲಾಗದ ಸರಕಾರವು ಬೆಲೆ ಏರಿಕೆಯಲ್ಲಿ ಮಾತ್ರ ರಾಕೆಟ್ ವೇಗದಲ್ಲಿದೆ ಎಂದು ಹೇಳಿದ್ದಾರೆ. ಬಡವರು ಮನೆ ಕಟ್ಟುವ ಹಾಗಿಲ್ಲ, ಹೊಟ್ಟೆ ತುಂಬಾ ಊಟ ಮಾಡುವಂತಿಲ್ಲ, ಬಡವ ಈಗ ● 5ನೇ ಪುಟಕ್ಕೆ

ಲಾಟರಿ ಮೂಲಕ ವಿವಿಗಳ ಕುಲಪತಿ ಆಯ್ಕೆ ಕಾಲ ಬಂದರೂ ಬರಬಹುದು...!

ಕಾಪಿ ಮಾಡಿದವರು, ಮಾಡಿಸಿದವರು, ಸೇವೆಯಿಂದ ಅಮಾನತ್ತಾದವರು ಕುಲಪತಿ, ಕುಲಸಚಿವ, ನಿರ್ದೇಶಕರಾಗುತ್ತಿದ್ದಾರೆ: ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಆತಂಕ; ವಿಷಾದ


ಪ್ರೊ. ಕೆ.ಎಸ್.ರಂಗಪ್ಪ

ಮೈಸೂರು, ಏ.4(ಎಸ್‌ಬಿಡಿ)– ವ್ಯವಸ್ಥೆ ಸರಿಹೋಗದಿದ್ದರೆ ಮುಂದಿನ ದಿನಗಳಲ್ಲಿ ಲಾಟರಿ ಮೂಲಕ ವಿಶ್ವವಿದ್ಯಾನಿಲಯ ಗಳಿಗೆ ಕುಲಪತಿಗಳ ಆಯ್ಕೆ ಮಾಡಬಹುದು ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನ ಮಾನಸಗಂಗೋತ್ರಿ ಪರಿಸರ ಅಧ್ಯಯನ ವಿಭಾಗ ಅಧ್ಯಯನ ಮಂಡಳಿಯ ಅಧ್ಯಕ್ಷರೂ ಆದ ಎಂಟೆಕ್ ಇನ್ ಮೆಟಿರಿಯಲ್ಸ್ ಸೈನ್ಸ್ ಸಂಯೋಜಕ ಪ್ರೊ.ಎಸ್.ಶ್ರೀಕಂಠಸ್ವಾಮಿ ಅವರು ಲಂಡನ್‌ನ ಪ್ರತಿಷ್ಠಿತ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ(ಎಫ್‌ಆರ್‌ಎಸ್‌ಸಿ) ಫೆಲೋಗೆ ಭಾಜನರಾಗಿರುವ ಹಿನ್ನೆಲೆಯಲ್ಲಿ ವಿಜ್ಞಾನ ಭವನ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಪಿ(ನಕಲು) ಮಾಡಿದವರು, ಮಾಡಿಸಿದವರು, ಸೇವೆಯಿಂದ ಅಮಾನತ್ತಾದವರು ವಿವಿಗಳ ಕುಲಪತಿ, ಕುಲಸಚಿವ ಹಾಗೂ ನಿರ್ದೇಶಕರಾಗುವ ದುಃಸ್ಥಿತಿ ಬಂದೊಂದಗಿದೆ. ಅರ್ಹರು ಕಣ್ಮರೆಯಾಗುತ್ತಿ ದ್ದಾರೆ. ಮುಂದಿನ ದಿನಗಳಲ್ಲಿ ಲಾಟರಿ ಮೂಲಕ ಕುಲಪತಿಯನ್ನು ಆಯ್ಕೆ ಮಾಡಿ ದರೂ ಆಶ್ಚರ್ಯವಿಲ್ಲ. ನಾನು ಗಮನಿಸಿರುವುದರಿಂದ ಅತ್ಯಂತ ನೋವಿನಿಂದ ಅನಿವಾರ್ಯವಾಗಿ ಹೇಳುತ್ತಿದ್ದೇನೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಅಧೋಗತಿಗೆ ಹೋಗುತ್ತಿದೆ. ಬುದ್ಧಿವಂತರು ಮಾತ್ರ ಸಂಶೋಧನಾ ಪ್ರಬಂಧ ಪ್ರಕಟಿಸಲು ಸಾಧ್ಯ. ನನ್ನ ಮಾರ್ಗದರ್ಶನದಲ್ಲಿ ಪಿ.ಹೆಚ್‌ಡಿ ಮಾಡಿದ 60ರಲ್ಲಿ 40 ಮಂದಿ ವಿದೇಶಗಳಲ್ಲಿದ್ದಾರೆ. ಪ್ರತಿಭಾವಂತರಾದರೂ ಇಲ್ಲಿ ನೆಲೆ ಸಿಗದ ಕಾರಣಕ್ಕೆ ಬೇರೆ ದೇಶಗಳಿಗೆ ತೆರಳಿದ್ದಾರೆ. ನಿನ್ನೆ ಎಂಎಸ್ಸಿ ಪದವಿ ಮುಗಿಸಿದವರಿಗೂ ಶಿಫಾರಸ್ಸಿನ ಮೇಲೆ ಬೋಧನೆ ಮಾಡುತ್ತಿದ್ದಾರೆ. ಭಾರತದಲ್ಲಿ ಶ್ರೇಷ್ಠ ಸಂಸ್ಕೃತಿ ಹಾಗೂ ಹೆಚ್ಚು ಬುದ್ಧಿವಂತರಿದ್ದಾರೆ. ಬೇರೆ ದೇಶಗಳಲ್ಲೂ ಸಾಕಷ್ಟು ಮಂದಿ ಪ್ರತಿಭಾನ್ವಿತರಾಗಿ ಗುರುತಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರತಿಭಾವಂತರಿಗೆ ಅವಕಾಶ ಸಿಗುತ್ತಿಲ್ಲ. ಆದರೆ ಇಂತಹವರಿಗೆ ಖಾಸಗಿ ಸಂಸ್ಥೆಗಳಲ್ಲಿ ಪ್ರೋತ್ಸಾಹ ಸಿಗುತ್ತಿದೆ. ಹಾಗಾಗಿ ಖಾಸಗೀಕರಣ ಮಾಡಿದರೆ ಒಳ್ಳೆಯದು ಎನ್ನಿಸುತ್ತದೆ. 80 ಜನ ವಿಶ್ರಾಂತ ಕುಲಪತಿಗಳನ್ನೊಳಗೊಂಡ ಸಂಘದ ಅಧ್ಯಕ್ಷನಾಗಿ ನಾನು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆ. ಆದರೆ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ನಮ್ಮಲ್ಲಿರುವ ಬುದ್ಧಿವಂತರಿಗೆ ಪ್ರಾಶಸ್ತ್ಯ ನೀಡಬೇಕು. ವಿದ್ವತ್ತನ್ನು ಗೌರವಿಸಿ, ಪ್ರೋತ್ಸಾಹಿಸಬೇಕು. ಈ ನಿಟ್ಟಿನಲ್ಲಿ ಅರ್ಹರನ್ನು ಬೆಂಬಲಿಸಬೇಕು ಎಂದು ಆಶಯ ವ್ಯಕ್ತಪಡಿಸಿದ ಪ್ರೊ.ಕೆ.ಎಸ್.ರಂಗಪ್ಪ, ಯಾವ ಸರ್ಕಾರವಾದರೂ ಸ್ವಾಮೀಜಿಗಳ ಮಾತನ್ನು ತಳ್ಳಿ ಹಾಕುವುದಿಲ್ಲ. ಹಾಗಾಗಿ ಶೈಕ್ಷಣಿಕ ಕ್ಷೇತ್ರದ ಸುಧಾರಣೆಗೆ ಸರ್ಕಾರವನ್ನು ಆಗ್ರಹಿಸಬೇಕೆಂದು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಲ್ಲಿ ಮನವಿ ಮಾಡಿಕೊಂಡರು.

ಮುಡಾ ಆಸ್ತಿ ಕಬಳಿಕೆ ಪತ್ತೆಗೆ ಲ್ಯಾಂಡ್ ಆಡಿಟ್

● ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಘೋಷಣೆ ● ಬದಲಿ ನಿವೇಶನವೆಂಬ 'ಭ್ರಷ್ಟಾಚಾರ ಬ್ರಹ್ಮಾಂಡ' ಬಯಲಿಗೂ ಕ್ರಮ ● ಇದಕ್ಕೆ ಅಗತ್ಯವಿರುವ ಸಿಬ್ಬಂದಿ ನೇಮಕಕ್ಕೆ ನಿರ್ಧಾರ

ಹಲವು ವರ್ಷಗಳಿಂದ ಮುಡಾದ ಆಸ್ತಿ ಕಬಳಿಕೆ, ಅದಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಗೆ ಮುಡಾ ಅಧಿಕಾರಿ ವರ್ಗವೇ ಬೆಂಬಲವಾಗಿ ನಿಲ್ಲುತ್ತಾ ಬಂದಿದೆ ಎಂಬ ವ್ಯಾಪಕವಾದ ದೂರುಗಳು ಕೇಳಿಬರುತ್ತಿದೆ. ಇಂತಹ ಅಧಿಕಾರಿ ವರ್ಗದಲ್ಲಿ ಬಹುತೇಕರು ಸ್ವಯಂ ನಿವೃತ್ತಿ ಪಡೆದಿದ್ದರೆ ಇನ್ನು ಕೆಲವರು ಸಹಜ ನಿವೃತ್ತಿ ಹೊಂದಿದ್ದಾರೆ. ಅವರನ್ನು ತನಿಖೆ ನಡೆಸಲು ಸಾಧ್ಯವೇ? ಮುಡಾ ಅಧ್ಯಕ್ಷ ರಾಜೀವ್ ಇದರಲ್ಲಿ ಯಶಸ್ವಿಯಾದರೆ ಬೇರೇನೂ ಮಾಡುವುದು ಬೇಡ ಮುಡಾ ಆಸ್ತಿ ಉಳಿಸಿದ ಪುಣ್ಯಕ್ಕೆ ಪಾತ್ರರಾಗುತ್ತಾರೆ.


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಸೋಮವಾರ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸುದ್ದಿಗೋಷ್ಠಿ ನಡೆಸಿದರು. ಚಿತ್ರದಲ್ಲಿ ಆಯುಕ್ತ ಡಾ. ಡಿ.ಬಿ.ನಟೇಶ್, ಸದಸ್ಯರಾದ ಲಕ್ಷ್ಮಿದೇವಿ, ನವೀನ್‌ಕುಮಾರ್ ಇದ್ದಾರೆ.

ಮೈಸೂರು, ಏ.4(ಆರ್‌ಕೆ)– ಕಬಳಿಕೆಯಾಗಿದೆ ಎನ್ನಲಾದ ಸಾವಿರಾರು ಕೋಟಿ ರೂ. ತನ್ನ ಆಸ್ತಿ ಪತ್ತೆ ಮಾಡಿ, ಅದನ್ನು ರಕ್ಷಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು 'ಲ್ಯಾಂಡ್ ಆಡಿಟ್' ನಡೆಸಲು ಮುಂದಾಗಿದೆ.

ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಲ್ಯಾಂಡ್ ಆಡಿಟ್ ನಡೆಸಿ ಕಬಳಿಕೆಯಾಗಿರುವ ಮುಡಾ ಭೂಮಿಯನ್ನು ವಶಕ್ಕೆ ಪಡೆಯಲು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 1 ಕೋಟಿ ರೂ. ಅನುದಾನವನ್ನು ಮೀಸಲಿಡಲಾಗಿದೆ ಎಂದರು.

ವಸತಿ ಬಡಾವಣೆ ಅಭಿವೃದ್ಧಿಪಡಿಸಲು ವಶಪಡಿಸಿಕೊಂಡಿರುವ ನೂರಾರು ಎಕರೆ ಭೂಮಿಗೆ ಪರಿಹಾರ ವಿತರಿಸಿದ್ದರೂ, ಕೆಲವು ಭೂಮಿ ಅನ್ಯರ ವಶದಲ್ಲಿರುವುದು ಕಂಡುಬಂದಿದೆ. ಅಂತಹ ನೂರಾರು ಕೋಟಿ ರೂ ಬೆಲೆಬಾಳುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಬಡಾವಣೆ ನಿರ್ಮಾಣಕ್ಕೆ ಬಳಕೆಯಾಗಿರುವ ಬಗ್ಗೆ ಲ್ಯಾಂಡ್ ಆಡಿಟ್ ಮಾಡಿದಲ್ಲಿ ಪ್ರಾಧಿಕಾರಕ್ಕೆ ಆ ಆಸ್ತಿ ಪ್ರಾಪ್ತವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭ ದಾಖಲಾತಿಗಳನ್ನು ಪರಿಶೀಲಿಸಿ, ಸ್ಥಳಕ್ಕೆ ತೆರಳಿ ಭೌತಿಕವಾಗಿ ಪರಿಶೀಲಿಸಲು 20 ಮಂದಿ ಪರವಾನಗಿ ಪಡೆದ ಭೂ ಮಾಪಕರು, ಇಬ್ಬರು ನಿವೃತ್ತ ಸರ್ವೆ ಸೂಪರ್‌ವೈಸರ್‌ಗಳು ಹಾಗೂ ಇಬ್ಬರು ನಿವೃತ್ತ ಶಿರಸ್ತೇದಾರರನ್ನು ನೇಮಿಸಿ ಕೊಂಡು ಲ್ಯಾಂಡ್ ಆಡಿಟ್ ಮಾಡಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಪ್ರಾಧಿಕಾರವು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 100 ಲಕ್ಷ ರೂ. ಗಳನ್ನು ಮೀಸಲಿರಿಸಿದೆ ಎಂದು ತಿಳಿಸಿದರು.

ಬದಲಿ ನಿವೇಶನ ಅಕ್ರಮ

ಹಂಚಿಕೆಯಾದ ಮೂಲ ನಿವೇಶನಕ್ಕೆ ಪರ್ಯಾಯವಾಗಿ ಬದಲಿ ನಿವೇಶನ ಮಂಜೂರು ಮಾಡುವ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಅಧ್ಯಯನ ನಡೆಸಲು ವಿಶೇಷ ಸಮಿತಿ ರಚಿಸಲಾಗುವುದು ಎಂದರು. ಬೇರೆ ಬೇರೆ ಕಾರಣಗಳಿಗಾಗಿ ಬದಲಿ ನಿವೇಶನ ನೀಡಿದ್ದರೂ, ಮಂಜೂರಾಗಿದ್ದ ಮೂಲ ನಿವೇಶನಗಳು ಹಂಚಿಕೆದಾರರ ಹೆಸರಿನಲ್ಲೇ ಮುಂದುವರಿದು, ಅವು ಅನ್ಯರ ಪಾಲಾಗುತ್ತಿರುವ ಹಲವು ಪ್ರಕರಣಗಳು ಬೆಳಕಿಗೆ ಬಂದಿರುವುದರಿಂದ ಸಮಗ್ರ ಅಧ್ಯಯನ ನಡೆಸಿ ಮೂಲ ನಿವೇಶನ ರದ್ದತಿಯಾಗಿ ಪ್ರಾಧಿಕಾರದ ವಶದಲ್ಲಿರುವ ಬಗ್ಗೆ ಪರಿಶೀಲನೆ ನಡೆಸಿ ವರದಿ ತಯಾರಿಸಿದಲ್ಲಿ ಮುಡಾಗೆ ನೂರಾರು ಕೋಟಿ ರೂ. ಬೆಲೆಬಾಳುವ ನಿವೇಶನಗಳು ಲಭ್ಯವಾಗುತ್ತವೆ ಎಂಬ ಉದ್ದೇಶದಿಂದ ವಿಶೇಷ ತಂಡ ರಚಿಸಲು ನಿರ್ಧರಿಸಲಾಗಿದೆ ಎಂದರು.

ಅದಕ್ಕಾಗಿ ಮುಡಾ ಕಾರ್ಯದರ್ಶಿ ನೇತೃತ್ವದಲ್ಲಿ ಇಬ್ಬರು ನಿವೃತ್ತ ತಹಸೀಲ್ದಾರ್ ಮಟ್ಟದ ಅಧಿಕಾರಿಗಳನ್ನು ನೇಮಿಸಿ ಕಾರ್ಯಯೋಜನೆ ಜಾರಿಗೆ ತರಲು ಈ ವರ್ಷದ ಆಯವ್ಯಯದಲ್ಲಿ 50 ಲಕ್ಷ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದು ತಿಳಿಸಿದರು.

ಕುಡಿಯುವ ನೀರು ಯೋಜನೆ

ಬಿದರಗೂಡು ಕುಡಿಯುವ ನೀರಿನ ಯೋಜನೆಯನ್ನು 60 ಎಂಎಲ್‌ಡಿಯಿಂದ 120 ಎಂಎಲ್‌ಡಿ ಸಾಮರ್ಥ್ಯಕ್ಕೇರಿಸಲು 150 ಕೋಟಿ ರೂ. ● 9ನೇ ಪುಟಕ್ಕೆ

ಮೈಸೂರಿಗೆ ಮೆಟ್ರೋ ಯೋಜನೆ

ಮೈಸೂರು: ಬೆಂಗಳೂರು ಹೊರತುಪಡಿಸಿ ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರಲ್ಲಿ ಮೆಟ್ರೋ ಯೋಜನೆ ಅನುಷ್ಠಾನಕ್ಕೆ ಮುಡಾ ನಿರ್ಧರಿಸಿದೆ.



ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಈಗಾಗಲೇ ಮೈಸೂರು–ಬೆಂಗಳೂರು ದಶಪಥ ರಸ್ತೆ, ವಿಮಾನ ನಿಲ್ದಾಣ ವಿಸ್ತರಣೆ, ಕೈಗಾರಿಕಾ ಪ್ರದೇಶಾಭಿವೃದ್ಧಿ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿರುವುದಲ್ಲದೆ ಬುಲೆಟ್ ರೈಲು ಸಂಪರ್ಕ ಕಲ್ಪಿಸಲು ಉದ್ದೇಶಿಸಿರುವುದರಿಂದ ಮುಂದಿನ 10 ವರ್ಷಗಳ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಮೈಸೂರು ನಗರಕ್ಕೆ ಮೆಟ್ರೋ ಯೋಜನೆಯನ್ನು ತರಲು ಪ್ರಸ್ತಾಪಿಸಲಾಗಿದ್ದು, ನಿಯೋ ಮೆಟ್ರೋ ಅಥವಾ ಮೆಟ್ರೋ ಲೈಟ್ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಆ ಉದ್ದೇಶಕ್ಕಾಗಿ ನೈಪುಣ್ಯತೆ ಹೊಂದಿರುವ ಸಂಸ್ಥೆಗಳಿಂದ ಕಾರ್ಯಸಾಧ್ಯತಾ ವರದಿ ತಯಾರಿಸಲು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರಾಧಿಕಾರವು 1 ಕೋಟಿ ಅನುದಾನ ಕಾಯ್ದಿರಿಸಿದೆ. ಯೋಜನೆಗೆ ಡಿಪಿಆರ್ ತಯಾರಿಸಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿದ ಬಳಿಕ ಸರ್ಕಾರದ ಮಟ್ಟದಲ್ಲಿ ಅನುಮೋದನೆ ಪಡೆಯಲಾಗುವುದು ಎಂದರು.

ರಿಂಗ್ ರೋಡ್, ಮುಡಾ ಬಡಾವಣೆಗಳಲ್ಲಿ LED

ಮೈಸೂರು: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸುತ್ತಿರುವಂತೆ ಮುಡಾ ಬಡಾವಣೆಗಳಲ್ಲೂ ಎಲ್‌ಇಡಿ ಬಲ್ಬ್ ಅಳವಡಿಸಲಾಗುವುದು ಎಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ. ಹಾಲಿ ಮುಡಾ ವ್ಯಾಪ್ತಿಯಲ್ಲಿರುವ ವಸಂತನಗರ, ಲಾಲ್‌ಬಹದ್ದೂರ್ ನಗರ, ಶಾಂತವೇರಿ ಗೋಪಾಲಗೌಡ ನಗರ, ವಿಜಯನಗರ 4ನೇ ಹಂತ ಬಡಾವಣೆಗಳ ಸ್ಟ್ರೀಟ್‌ಲೈಟ್‌ಗಳಿಗೆ ಎಲ್‌ಇಡಿ ಬಲ್ಬ್ ಅಳವಡಿಸಲು 5 ಕೋಟಿ ರೂ. ಮೀಸಲಿಡಲಾಗಿದೆ. ಅದೇ ರೀತಿ ರಿಂಗ್ ರಸ್ತೆಗೂ ಹೊಸದಾಗಿ ಕೇಬಲ್ ಹಾಕಿ, ಎಲ್‌ಇಡಿ ಬಲ್ಬ್ ಅಳವಡಿಸಲು ಮುಡಾ ಬಜೆಟ್‌ನಲ್ಲಿ 12 ಕೋಟಿ ರೂ. ಮೀಸಲಿರಿಸಲಾಗಿದೆ. ಉಳಿದಂತೆ ಕ್ರೀಡಾಂಗಣಗಳಿಗೆ ಮೂಲ ಸೌಕರ್ಯ ಕಲ್ಪಿಸಲು 9.2 ಕೋಟಿ ರೂ., ರಾಜಕಾಲುವೆ ದುರಸ್ತಿ, ● 9ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಜಿಪಂ ಸಿಇಓ ಪೂರ್ಣಿಮಾ ಭೇಟಿ;
ಸುಸೂತ್ರವಾಗಿ ಪರೀಕ್ಷೆ ಬರೆಯಲು ಅಭಯ

ಮೈಸೂರು, ಏ.4– ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ನಡೆಯುತ್ತಿರುವ ಎಸ್‌ಎಸ್ ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಸೋಮವಾರ ಭೇಟಿ ನೀಡಿ, ಪರಿಶೀಲಿಸಿದರು.



ನಗರದ ಮಹಾರಾಜ ಸರ್ಕಾರಿ ಪ್ರೌಢಶಾಲೆ, ಐಡಿಯಲ್ ಜಾವಾ ರೋಟರಿ ಶಾಲೆ ಮತ್ತು ಮರಿಮಲ್ಲಪ್ಪ ಪ್ರೌಢಶಾಲೆ ಸೇರಿ ವಿವಿಧ ಶಾಲೆಗಳಿಗೆ ಭೇಟಿ ನೀಡಿದರು. ಇದೇ ವೇಳೆ ವಿದ್ಯಾರ್ಥಿಗಳು ಯಾವುದೇ ಭಯ ಇಲ್ಲದೆ, ಆತಂಕಕ್ಕೂ ಒಳಗಾಗದೇ ಸುಸೂತ್ರವಾಗಿ ಪರೀಕ್ಷೆ ಬರೆಯುವ ದಿಸೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ತುಂಬುವಂತೆ ಹೇಳಿದರು.

ಇದರೊಟ್ಟಿಗೆ ಈಗಾಗಲೇ ನಡೆದಿರುವ ವಿಷಯಗಳ ಮಾಹಿತಿ ಹಾಗೂ ಇಂದಿನ ಗಣಿತ ಪರೀಕ್ಷೆಯ ಮಾಹಿತಿ ಸಂಗ್ರಹಿಸಿದರು. ಅಲ್ಲದೆ ಪರೀಕ್ಷೆಗೆ ಗೈರಾಗುವ ವಿದ್ಯಾರ್ಥಿಗಳ ಮಾಹಿತಿ ವಿವರವನ್ನು ಆಯಾ ಶಿಕ್ಷಕರು ಪಡೆದು, ಅಂದೆ ನಮೂದಿಸುವಂತೆಯೂ ಶಾಲಾ ಶಿಕ್ಷಕರಿಗೆ ಸೂಚಿಸಿದರು. ಶಾಲೆಯಲ್ಲಿ ಕೊರೊನಾ ನಿಯಂತ್ರಣಕ್ಕಾಗಿ ಅನುಸರಿಸಿರುವ ಮುಂಜಾಗ್ರತಾ ಕ್ರಮ, ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮುಂಜಾಗ್ರತಾ ಪ್ರಥಮ ಚಿಕಿತ್ಸೆ ವ್ಯವಸ್ಥೆ ಸೇರಿ ಇನ್ನಿತರೆ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಿದ ಬಳಿಕ ನಂತರ ಎಸ್.ಎಸ್.ಎಲ್.ಸಿ ಪರೀಕ್ಷಾ ಕೊಠಡಿಗಳಿಗೆ ಭೇಟಿ ನೀಡಿ ಶಾಲಾ ಶಿಕ್ಷಕರೊಂದಿಗೆ ಚರ್ಚಿಸಿದರು. ಈ ವೇಳೆ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ರಾಮಾರಾಧ್ಯ ಸೇರಿದಂತೆ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿ ಇದ್ದರು.

ಏ.7, ಬೃಹತ್ ಉದ್ಯೋಗ ಮೇಳ

ಮೈಸೂರು,ಏ.4–ಮೈಸೂರು ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳ ಸಂಯುಕ್ತಾಶ್ರಯದಲ್ಲಿ ಏ.7ರ ಗುರುವಾರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5ರವರೆಗೆ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, 80ಕ್ಕಿಂತ ಹೆಚ್ಚು ಉದ್ಯೋಗದಾತರು ಅಥವಾ ನಿಯೋಜಕರು (ಕಂಪನಿಗಳು) ಭಾಗವಹಿಸಿ ತಮ್ಮ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಉದ್ಯೋಗಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಬಿಇ, ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಉದ್ಯೋಗಾಕಾಂಕ್ಷಿಗಳು ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲಾತಿಗಳ ಪ್ರತಿಗಳು, 2 ಭಾವಚಿತ್ರಗಳು ಹಾಗೂ 5 ಸ್ವ–ವಿವರಗಳ ಪ್ರತಿಗಳೊಂದಿಗೆ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ಉದ್ಯೋಗಾಕಾಂಕ್ಷಿಗಳು http://skill connect.kaushalkar.com/app/student-jobfair ವೆಬ್‌ಸೈಟ್‌ನ ಮೂಲಕ ಆನ್‌ಲೈನ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.82778–95931, ದೂ.ಸಂ.87223–99936, 0821–2489972, 90363–56862 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ದೇವರ ದಾಸಿಮಯ್ಯ ಜಯಂತಿ

ಮೈಸೂರು, ಏ.4– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ದೇವರ ದಾಸಿಮಯ್ಯ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಏ.6ರ ಬುಧವಾರ ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಶ್ರೀ ದೇವರ ದಾಸಿಮಯ್ಯ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.



ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಚನಹಳ್ಳಿ ಪಾಳ್ಯದಲ್ಲಿದ್ದ ಡಿಇಐಸಿ ವಿಭಾಗ ಜಿಲ್ಲಾಸ್ಪತ್ರೆಗೆ ಸ್ಥಳಾಂತರ

ಮೈಸೂರು,ಏ.4(ಎಂಟಿವೈ)– ಮೈಸೂರಿನ ನಾಚನಹಳ್ಳಿಪಾಳ್ಯದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ (ಡಿಸ್ಟ್ರಿಕ್ಟ್ ಇಯರ್ಲಿ ಇಂಟರ್‌ವೆನ್ಷನ್ ಸೆಂಟರ್)ವನ್ನು ಕೆಆರ್‌ಎಸ್ ರಸ್ತೆಯಲ್ಲಿನ ಜಿಲ್ಲಾಸ್ಪತ್ರೆಯ ಕಟ್ಟಡಕ್ಕೆ ವರ್ಗಾವಣೆ ಮಾಡಲಾಗಿದೆ. ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ (ಡಿಇಐಸಿ)ದಲ್ಲಿ 0–18ವರ್ಷದ ಒಳಗಿನ ನ್ಯೂನತೆ ಹೊಂದಿದ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ಮತ್ತು ಥೆರಪಿಗಳನ್ನು ನೀಡಲಾಗುತ್ತಿತ್ತು. ನಾಚನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ಹಲವು ವರ್ಷದಿಂದ ಥೆರಪಿ ಚಿಕಿತ್ಸೆ ನೀಡಿ, ಆರೋಗ್ಯದಲ್ಲಿ ಚೇತರಿಕೆ ಉಂಟಾಗುವಂತೆ ಮಾಡಲಾಗುತ್ತಿತ್ತು. ಆದರೆ, ಕಳೆದ 1 ವಾರದಿಂದ ನಾಚನಹಳ್ಳಿ ಪಾಳ್ಯದಿಂದ ಜಿಲ್ಲಾಸ್ಪತ್ರೆ ಕಟ್ಟಡಕ್ಕೆ ಡಿಇಐಸಿ ವಿಭಾಗವನ್ನು ಸ್ಥಳಾಂತರಿಸಲಾಗಿದೆ.



ನಾಚನಹಳ್ಳಿ ಪಾಳ್ಯದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಿಇಐಸಿ ವಿಭಾಗವನ್ನು 2017–18ನೇ ಸಾಲಿನಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಪ್ರಾರಂಭಿಸಲಾಗಿತ್ತು. ಈ ಕೇಂದ್ರದಲ್ಲಿ ಮಕ್ಕಳ ತಜ್ಞರು, ಫಿಸಿಯೋಥೆರಫಿಸ್ಟ್, ಸ್ಪೀಚ್ ಥೆರಫಿಸ್ಟ್, ಸೈಕಾಲಿಸ್ಟ್, ಆಪ್ಟೋಮಾಲಜಿಸ್ಟ್ ಮತ್ತು ಆಪ್ತ ಸಮಾಲೋಚಕರಿದ್ದು ಮೈಸೂರು ಜಿಲ್ಲೆ ಹಾಗೂ ಇತರ ಜಿಲ್ಲೆಗಳಿಂದ ಬರುತ್ತಿದ್ದ 0–18 ವರ್ಷದ ನ್ಯೂನತೆಯುಳ್ಳ ಮಕ್ಕಳಿಗೆ ಥೆರಪಿ ಮೂಲಕ ಚಿಕಿತ್ಸೆ ನೀಡುತ್ತಿದ್ದರು. ಹೆಚ್ಚಿನ ಚಿಕಿತ್ಸೆ ಅಗತ್ಯ ಬಿದ್ದರೆ ವಿವಿಧ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಿ ಉಚಿತವಾಗಿ ಶಸ್ತ್ರಚಿಕಿತ್ಸೆ ಕೊಡಿಸಲಾಗುತ್ತಿತ್ತು. ಈ ಕೇಂದ್ರದಿಂದ ಮಕ್ಕಳಿಗೆ ಉಚಿತವಾಗಿ ತಪಾಸಣೆ, ಥೆರಪಿಗಳನ್ನು ನೀಡಿ ಮಕ್ಕಳನ್ನು ಗುಣಪಡಿಸಲಾಗುತ್ತಿತ್ತು.

ವಿದ್ಯಾರ್ಥಿನಿಲಯಗಳ ಉದ್ಘಾಟನಾ ಕಾರ್ಯಕ್ರಮ

ಮೈಸೂರು, ಏ.4– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಉದ್ಘಾಟನಾ ಸಮಾರಂಭವನ್ನು ಏ.8ರಂದು ಬೆಳಿಗ್ಗೆ 10 ಗಂಟೆಗೆ ಮಾನಸಗಂಗೋತ್ರಿಯಲ್ಲಿ ಹಾಗೂ ಬೆಳಗ್ಗೆ 11ಕ್ಕೆ ವಸಂತ ನಗರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಉಪಸ್ಥಿತರಿರುವರು.

ಎಂಎಲ್‌ಸಿ ಡಾ.ತಿಮ್ಮಯ್ಯರಿಗೆ ಪತ್ನಿ ವಿಯೋಗ

ಮೈಸೂರು, ಏ.4– ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅವರ ಪತ್ನಿ ಶ್ರೀಮತಿ ಮೀರಾಬಾಯಿ (70) ಅವರು ಇಂದು ಮಧ್ಯಾಹ್ನ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ನಿಧನರಾದರು.



ಇವರು ಪತಿ ಡಾ.ತಿಮ್ಮಯ್ಯ ಅವರಲ್ಲದೆ ಪುತ್ರ ಅರುಣ್ ಕುಮಾರ್, ಪುತ್ರಿಯರಾದ ಸವಿತಾ, ಡಾ.ಸಹನಾ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ನೆರವೇರಲಿದೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಿಳಿಸಿದ್ದಾರೆ. ಇವರ ಪಾರ್ಥಿವ ಶರೀರವನ್ನು ಮೈಸೂರಿನ ರಾಮಕೃಷ್ಣನಗರದ (ಪಂಡಿತ್ ಆರ್ಕಿಡ್ ಪಬ್ಲಿಕ್ ಶಾಲೆ ಎದುರು) ನಿವಾಸದಲ್ಲಿರಿಸಲಾಗಿದೆ. ಇವರ ನಿಧನಕ್ಕೆ ಮೈಸೂರು ಜಿಲ್ಲಾ ಕಾಂಗ್ರೆಸ್ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಮಾಜಿ ಶಾಸಕ ಡಾ.ಭಾರತೀ ಶಂಕರ್ ಕೂಡ ಅತೀವ ಸಂತಾಪ ಸೂಚಿಸಿದ್ದಾರೆ.

ಮಂಜುನಾಥ್



ಮೈಸೂರಿನ ಗಾಂಧಿನಗರ ಸಿದ್ದಪ್ಪಾಜಿ ದೇವಸ್ಥಾನ ರಸ್ತೆ ನಿವಾಸಿ, ಆರ್‌ಟಿಓ ಏಜೆಂಟ್ ಮಂಜುನಾಥ್ (52) ಭಾನುವಾರ ನಿಧನರಾದರು. ಮೃತರು ಪತ್ನಿ ಪೂರ್ಣಿಮಾ, ಮಕ್ಕಳಾದ ದಾಮಿನಿ, ಕೀರ್ತಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ಇಂದು (ಸೋಮವಾರ) ಮಧ್ಯಾಹ್ನ ಗಾಂಧಿನಗರ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜು.29ರಿಂದ ಆ.4ರವರೆಗೆ ನ್ಯಾಷನಲ್ ಜೂನಿಯರ್ ರ್‍ಯಾಂಕಿಂಗ್ ಸೇಲಿಂಗ್ ಕ್ರೀಡೆ

- ದೇಶದ ವಿವಿಧ ಭಾಗಗಳಿಂದ 150ಕ್ಕೂ ಹೆಚ್ಚು ಕಿರಿಯ ನಾವಿಕ ಪಟುಗಳು ಭಾಗಿ
- ರಾಯಲ್ ಮೈಸೂರು ಸೇಲಿಂಗ್ ಕ್ಲಬ್‌ನಿಂದ ಕೆಆರ್‌ಎಸ್ ಹಿನ್ನೀರಿನಲ್ಲಿ ಆಯೋಜನೆ





ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ರಾಯಲ್ ಮೈಸೂರು ಸೇಲಿಂಗ್ ಕ್ಲಬ್ ಸಂಸ್ಥಾಪಕ ಕ್ಯಾಪ್ಟನ್ ಅರವಿಂದ ಶರ್ಮ (ಎಡದಿಂದ 3ನೇಯವರು) ಮಾತನಾಡಿದರು. ಆರ್‌ಎಂಎಸ್‌ಸಿ ಸದಸ್ಯ ಮಹೇಂದ್ರ ಪಟ್ವಾರಿ, ಆರ್‌ಎಂಎಸ್‌ಸಿ ಅಧ್ಯಕ್ಷ ಆರ್.ಅಜಯ್‌ಕುಮಾರ್‌ಸಿಂಗ್, ಭಾರತೀಯ ನೌಕಾಪಡೆಯ ಕ್ಯಾಪ್ಟನ್ (ನಿವೃತ್ತ) ತ್ರಿಭುವನ್ ಜೈಸ್ವಾಲ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಆರ್‌ಎಂಎಸ್‌ಸಿ ಸದಸ್ಯರೂ ಆದ ಸಿದ್ಧಾರ್ಥ ಹೋಟೆಲ್ ಮಾಲೀಕ ಪಿ.ವಿ.ಗಿರಿ ಚಿತ್ರದಲ್ಲಿದ್ದಾರೆ. ಬಲಚಿತ್ರದಲ್ಲಿ ಕೆಆರ್‌ಎಸ್ ಹಿನ್ನೀರಿನಲ್ಲಿ ಕಳೆದ ಆಗಸ್ಟ್‌ನಲ್ಲಿ ನಡೆದ ರೆಗಟ್ಟಾ ಚಾಂಪಿಯನ್‌ಶಿಪ್‌ನ ಒಂದು ದೃಶ್ಯ.

ಮೈಸೂರು,ಏ.4(ಪಿಎಂ)–ರಾಯಲ್ ಮೈಸೂರು ಸೇಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ) ವತಿಯಿಂದ ಜುಲೈ 29ರಿಂದ ಆಗಸ್ಟ್ 4ರವರೆಗೆ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಹಿನ್ನೀರಿನಲ್ಲಿ ನ್ಯಾಷನಲ್ ಜೂನಿಯರ್ ರ್‍ಯಾಂಕಿಂಗ್ ಸೇಲಿಂಗ್ ಕ್ರೀಡೆ (ರಾಷ್ಟ್ರೀಯ ಕಿರಿಯರ ಶ್ರೇಯಾಂಕ ನೌಕ ಕ್ರೀಡೆ) ಆಯೋಜಿಸಲಾಗಿದೆ.

ದೇಶದ ವಿವಿಧ ಭಾಗಗಳಿಂದ 150ಕ್ಕೂ ಹೆಚ್ಚು ಕಿರಿಯ ನಾವಿಕ ಪಟುಗಳು ಇದರಲ್ಲಿ ಭಾಗವಹಿಸಲಿದ್ದು, 8ರಿಂದ 15 ವರ್ಷದೊಳಗಿನ ಆಪ್ಟಿಮಿಸ್ಟ್ (ಒಬ್ಬ ಪಟು) ಮತ್ತು 15ರಿಂದ 19 ವರ್ಷದೊಳಗಿನ ಲೇಸರ್ (ಇಬ್ಬರ ತಂಡ) ಎರಡು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಇದರಲ್ಲಿ ಪಡೆಯುವ ಉನ್ನತ ಶ್ರೇಯಾಂಕವು ಏಷ್ಯನ್ ಗೇಮ್ಸ್, ಯುರೋಪಿಯನ್ ಗೇಮ್ಸ್ ಮತ್ತು ಒಲಿಂಪಿಕ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಪರಿಗಣನೆಯಾಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಈ ವಿಷಯ ತಿಳಿಸಿದ ಆರ್‌ಎಂಎಸ್‌ಸಿ ಸಂಸ್ಥಾಪಕ ಕಾಪ್ಟನ್ ಅರವಿಂದ ಶರ್ಮ, ಸೇಲಿಂಗ್ ಕ್ರೀಡೆಯಲ್ಲಿ ಮೋಟಾರ್ ಬೋಟ್ ಬಳಕೆ ಮಾಡುವುದಿಲ್ಲ. ನೀರಿನಲ್ಲಿ ಗಾಳಿ ಶಕ್ತಿ ಬಳಸಿಕೊಂಡು ದೋಣಿ ಮುನ್ನಡೆಸುವ ಇದು ಒಂದು ನೈಸರ್ಗಿಕ ಕ್ರೀಡೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಆರ್‌ಎಂಎಸ್‌ಸಿ ಮೊದಲ ಬಾರಿಗೆ ರಾಷ್ಟ್ರೀಯ ರೆಗಟ್ಟಾ ಚಾಂಪಿಯನ್‌ಶಿಪ್ ಆಯೋಜನೆ ಮಾಡಿತ್ತು. ಇದೀಗ ಎರಡನೇ ಬಾರಿಗೆ ಈ ರ್‍ಯಾಂಕಿಂಗ್ ಕ್ರೀಡೆ ಆಯೋಜಿಸಿದೆ ಎಂದು ತಿಳಿಸಿದರು.

ದಿ ನ್ಯಾಷನಲ್ ಫೆಡರೇಷನ್–ಯಾಚ್ಟಿಂಗ್ (ವಿಹಾರ ನೌಕೆ) ಅಸೋಸಿಯೇಷನ್ ಆಫ್ ಇಂಡಿಯಾ (ವೈಎಐ) ರಾಷ್ಟ್ರೀಯ ಜೂನಿಯರ್ ಶ್ರೇಯಾಂಕದ ಈ ಕ್ರೀಡೆ ನಡೆಸಲು ಮಾನ್ಯತೆ ನೀಡಿದೆ. ಕೆಆರ್‌ಎಸ್ ಹಿನ್ನೀರಿನಲ್ಲಿ ಕರ್ನಾಟಕದ ಏಕೈಕ ನಾಗರಿಕ ನೌಕಾಯಾನ ಕೇಂದ್ರವನ್ನು ಕ್ಲಬ್‌ನಿಂದ ಸ್ಥಾಪಿಸಲು ಸರ್ಕಾರದಿಂದ ಅನುಮತಿಯನ್ನು ಪಡೆಯಲಾಗಿದೆ. ಅಲ್ಲದೆ, ಕರ್ನಾಟಕ ರಾಜ್ಯ ನೌಕಾಯಾನ ಸಂಘದಿಂದ ಆರ್‌ಎಂಎಸ್‌ಸಿ ಗುರುತಿಸಲ್ಪಟ್ಟಿದೆ ಎಂದು ಹೇಳಿದರು.

ಭಾರತದ ನೌಕಾಯಾನ ನಕ್ಷೆಯಲ್ಲಿ ಮೈಸೂರು ಅಗ್ರಸ್ಥಾನ ಪಡೆಯಬೇಕೆಂಬುದು ನಮ್ಮ ಕ್ಲಬ್‌ನ ಆಶಯ. ಈ ನಿಟ್ಟಿನಲ್ಲಿ ನೌಕಾ ಚಾಂಪಿಯನ್‌ಗಳನ್ನು ತಯಾರು ಮಾಡಲು ಮುಂದಾಗಿದ್ದೇವೆ. ಅದರ ಪ್ರಯತ್ನದಲ್ಲಿ ಈ ಶ್ರೇಯಾಂಕದ ಕ್ರೀಡೆಯೂ ಸೇರಿದೆ. 110 ವರ್ಷಗಳ ಇತಿಹಾಸ ಹೊಂದಿರುವ ರಾಯಲ್ ಮದ್ರಾಸ್ ಯಾಚಿಂಗ್ ಕ್ಲಬ್‌ನಿಂದ (ಆರ್‌ಎಂವೈಸಿ) ನಮ್ಮ ಆರ್‌ಎಂಎಸ್‌ಸಿಗೆ ಸಾಕಷ್ಟು ಸಹಕಾರ ದೊರೆತಿದೆ. ಉಪಕರಣಗಳ ಪೂರೈಕೆ ಹಾಗೂ ಪರಿಣತಿಯಲ್ಲಿ ಸಾಕಷ್ಟು ಬೆಂಬಲವನ್ನು ಆರ್‌ಎಂವೈಸಿ ನಮಗೆ ನೀಡಿದೆ. ನಾವು ಕಳೆದ ವರ್ಷ ನಡೆಸಿದ ರೆಗಟ್ಟಾ ಚಾಂಪಿಯನ್ ಶಿಪ್ ಮೈಸೂರಿಗೆ ಪ್ರಥಮವಾಗಿತ್ತು. ಅಲ್ಲದೆ, ಇದರಲ್ಲಿ ದೇಶದ ವಿವಿಧ ಭಾಗಗಳ ನಾವಿಕರು ಭಾಗವಹಿಸಿದ್ದರು ಎಂದು ತಿಳಿಸಿದರು.

ಈ ನೌಕಾ ಕ್ರೀಡೆಗೆ ಮೈಸೂರು ಹೋಟೆಲ್ ಮಾಲೀಕರ ಸಂಘವು ವಸತಿ, ಸಾರಿಗೆ ಸೇರಿದಂತೆ ಇನ್ನಿತರೆ ಸೌಕರ್ಯದ ಪ್ರಾಯೋಜನೆ ನೀಡಲು ಮುಂದೆ ಬಂದಿದೆ. ಇದಕ್ಕಾಗಿ ಸಂಘಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಇಂತಹ ಕ್ರೀಡೆಗಳಿಂದ ಮೈಸೂರು ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆಯಲಿದೆ. ಸಂಘದಿಂದ ಈ ಕ್ರೀಡೆಗೆ ಅಗತ್ಯ ಸಹಕಾರ ನೀಡುತ್ತಿದ್ದು, ರಿಯಾಯಿತಿ ದರದಲ್ಲಿ ಅನೇಕ ಸೇವೆಗಳನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

ಆರ್‌ಎಂಎಸ್‌ಸಿ ಸದಸ್ಯರು ಮತ್ತು ಉತ್ತೇಜಕರೂ ಆದ ಸಿದ್ಧಾರ್ಥ ಹೋಟೆಲ್ ಮಾಲೀಕ ಪಿ.ವಿ.ಗಿರಿ, ಆರ್‌ಎಂಎಸ್‌ಸಿ ಅಧ್ಯಕ್ಷ ಆರ್. ಅಜಯ್‌ಕುಮಾರ್ ಸಿಂಗ್, ಭಾರತೀಯ ನೌಕಾಪಡೆಯ ಕ್ಯಾಪ್ಟನ್ (ಮಾಜಿ) ಹಾಗೂ ವೈಎಐ ಮಾಜಿ ನಿರ್ದೇಶಕ ತ್ರಿಭುವನ್ ಜೈಸ್ವಾಲ್, ಆರ್‌ಎಂಎಸ್‌ಸಿ ಸದಸ್ಯ ಮಹೇಂದ್ರ ಪಟ್ವಾರಿ ಗೋಷ್ಠಿಯಲ್ಲಿದ್ದರು.

ಗಡಿ ಭದ್ರತಾ ಪಡೆ ಕಾರ್ಯ ಸಾಧನೆ ಪ್ರಶಂಸಿಸಿದ ರಾಜ್ಯಪಾಲ ಗೆಹ್ಲೋಟ್



ಬೆಂಗಳೂರು,ಏ.4(ಕೆಎಂಶಿ)–ದೇಶದ ಭದ್ರತೆ, ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ಹಾಗೂ ರಾಷ್ಟ್ರೀಯ ವಿಪತ್ತುಗಳ ಸಮಯದಲ್ಲಿ ನಾಗರಿಕರ ಸೇವೆಯಲ್ಲಿ ಗಡಿ ಭದ್ರತಾ ಪಡೆ ಮಹತ್ತರ ಪಾತ್ರ ವಹಿಸಿದೆ ಎಂದು ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದಲ್ಲಿರುವ ಸಹಾಯಕ ತರಬೇತಿ ಕೇಂದ್ರ, ಗಡಿ ಭದ್ರತಾ ಪಡೆ (ಬಿಎಸ್‌ಎಫ್)ಪರೇಡ್ ಮೈದಾನದಲ್ಲಿ ನಡೆದ ಬಿಎಸ್‌ಎಫ್ ಕಾನ್ಸ್‌ಟೇಬಲ್ ಟ್ರೈನಿಗಳ ಪರಿಶೀಲನಾ ಪರೇಡ್‌ನಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ದೇಶದ ಮೊದಲ ರಕ್ಷಣಾ ಪಡೆ ಮತ್ತು ವಿಶ್ವದ ಅತೀ ದೊಡ್ಡ ಗಡಿ ಕಾವಲು ಪಡೆ. ಇದು ಡಿಸೆಂಬರ್ 1, 1965ರಂದು ರೂಪುಗೊಂಡಿತು ಮತ್ತು ಅಂದಿನಿಂದ ಗಡಿ ಭದ್ರತಾ ಪಡೆ ದೇಶದ ಗೌರವವನ್ನು ಹೆಚ್ಚಿಸಿದೆ. 1971ರಲ್ಲಿ ಪಾಕಿಸ್ತಾನದ ವಿರುದ್ಧ ಮತ್ತು ಬಾಂಗ್ಲಾದೇಶದ ಯುದ್ಧದಲ್ಲಿ ಮತ್ತು 1999ರಲ್ಲಿ ಕಾರ್ಗಿಲ್ ಯುದ್ಧದಲ್ಲಿ, ಶೌರ್ಯ ಮತ್ತು ಪರಾಕ್ರಮದಲ್ಲಿ ಮೇಲುಗೈ ಸಾಧಿಸಿದೆ. ಕಾಶ್ಮೀರದ ಉಗ್ರವಾದದ ನಿರ್ಮೂಲನೆಗೆ ಗಡಿ ಭದ್ರತಾ ಪಡೆಯ ಕೊಡುಗೆ ಅವಿಸ್ಮರಣೀಯ ಎಂದು ಶ್ಲಾಘಿಸಿದರು.

ಗಡಿ ಭದ್ರತಾ ಪಡೆಯು ಗಡಿ ಸವಾಲುಗಳನ್ನು ಎದುರಿಸಲು ನೆಲಮಟ್ಟದಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಸಾಮರ್ಥ್ಯದ ಆಧಾರದ ಮೇಲೆ ದೇಶದ ವಿಶ್ವಾಸಾರ್ಹ ಸಶಸ್ತ್ರ ಪಡೆಗಳಲ್ಲಿ ಒಂದಾಗಿದೆ. ದೇಶದ ಸಾವಿರಾರು ಕಿಲೋಮೀಟರ್ ಅಂತಾರಾಷ್ಟ್ರೀಯ ಗಡಿಗಳ ಭದ್ರತೆಯನ್ನು ಗಡಿ ಭದ್ರತಾ ಪಡೆ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ನಿಮ್ಮ ಧೈರ್ಯ ಮತ್ತು ಶೌರ್ಯದಿಂದ ದೇಶ ಸುರಕ್ಷಿತವಾಗಿದೆ ಎಂದು ಹೇಳಿದರು.

ಯುಐಡಿ ಕೋರ್ಸ್‌ಗಳಿಗೆ ಎಸ್‌ಟಿಸಿಯನ್ನು ಸೆಂಟರ್ ಆಫ್ ಎಕ್ಸಲೆನ್ಸ್ ಎಂದು ಘೋಷಿಸಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಇದು ಡ್ರಿಲ್ ಮತ್ತು ಪಾಕಶಾಸ್ತ್ರದ ಕೋರ್ಸ್‌ಗಳನ್ನು ನೀಡುವ ಏಕೈಕ ತರಬೇತಿ ಕೇಂದ್ರವಾಗಿದೆ. ಈ ತರಬೇತಿ ಕೇಂದ್ರದಲ್ಲಿ ನೀವು ಪಡೆದ ಉನ್ನತ ಗುಣಮಟ್ಟದ ತರಬೇತಿಯು ಕರ್ತವ್ಯದ ಬಗ್ಗೆ ಜಾಗೃತವಾಗಿರಿಸುತ್ತದೆ ಮತ್ತು ನಿಮ್ಮಲ್ಲಿ ದೇಶಭಕ್ತಿ, ಧೈರ್ಯ, ಸಾಹಸ ಮತ್ತು ಶೌರ್ಯವನ್ನು ಬೆಳೆಸುತ್ತದೆ ಎಂಬ ಭರವಸೆ ಇದೆ ಎಂದು ಹೇಳಿದರು.

ದೇಶ ಸೇವೆಗೆ ತಮ್ಮ ಪುತ್ರರನ್ನು ಅರ್ಪಿಸಿದ ಕುಟುಂಬಗಳಿಗೆ ಧನ್ಯವಾದ ಸಲ್ಲಿಸಿದ ರಾಜ್ಯಪಾಲರು, ದೇಶ ಸೇವೆಗಾಗಿ ತಮ್ಮ ಕುಟುಂಬದಿಂದ ಯಾರನ್ನಾದರೂ ಸೇನೆಗೆ ಕಳುಹಿಸುವಂತೆ ಇಡೀ ದೇಶದ ನಾಗರಿಕರಿಗೆ ಮನವಿ ಮಾಡಿದರು. ನಂತರ ದೇಶದ ಗಡಿ ಭದ್ರತೆ ಮತ್ತು ರಕ್ಷಣೆಗಾಗಿ ದೃಢ ನಿಶ್ಚಯದ ತರಬೇತಿ ಪಡೆದವರಿಗೆ ಅಭಿನಂದಿಸಿದರು.



ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ದಾವಣಗೆರೆಯಲ್ಲಿ ಆಯೋಜಿಸಿದ್ದ ಪತ್ರಿಕಾ ವಿತರಕರ ಸಮಾವೇಶ ಸಮಾರಂಭ ಮತ್ತು ಕಾರ್ಯಕಾರಿಣಿ ಸಭೆಯಲ್ಲಿ ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ, ಪ್ರಧಾನ ಕಾರ್ಯದರ್ಶಿ ಸಿ. ಶಿವಣ್ಣ, ಸಹ ಕಾರ್ಯದರ್ಶಿ ಚಿನ್ನರಾಜು, ಖಜಾಂಚಿ ಸಿ.ಡಿ.ಹರೀಶ್, ಸಂಘಟನಾ ಕಾರ್ಯದರ್ಶಿ ಶಿವಕುಮಾರ್, ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ, ನಿರ್ದೇಶಕರಾದ ನಂಜುಂಡಯ್ಯ, ಮಹಾದೇವಸ್ವಾಮಿ, ಶಿವಲಿಂಗ ಎಂ.ಹರಿರಾವ್, ವಿ.ರವಿ, ಗೋವಿಂದ ಶೆಟ್ಟಿ ಇದ್ದರು.

ಮೈಸೂರು ಹಿರಿಯ ಪತ್ರಿಕಾ ವಿತರಕ ಹೋಮದೇವ ರಾಜ್ಯಾಧ್ಯಕ್ಷರ ಸಲಹೆಗಾರರಾಗಿ ಆಯ್ಕೆ



ಮೈಸೂರು, ಏ.4– ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಅವರು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷರ ಸಲಹೆಗಾರರು ಹಾಗೂ ಲೆಕ್ಕ ಪರಿಶೋಧಕರ ಸಲಹೆಗಾರರಾಗಿ ನಿಯೋಜಿತರಾಗಿದ್ದಾರೆ.

ಹಲವು ವರ್ಷಗಳಿಂದ ಪತ್ರಿಕಾ ವಿತರಕರಾಗಿ ಸೇವಾ ನಿಷ್ಠೆ ಮೆರೆದಿರುವ ಹೋಮದೇವ ಅವರು, ತಮ್ಮ ವೃತ್ತಿನಿರತರ ಕಲ್ಯಾಣಕ್ಕಾಗಿ ಸರ್ಕಾರವು ಸೇರಿದಂತೆ ಅನೇಕ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಶ್ರಮಿಸುತ್ತಾ ಬಂದಿದ್ದಾರೆ.

ಏ.10ರಿಂದ ಉಚಿತ ರಂಗ ಕಾರ್ಯಾಗಾರ

ಮೈಸೂರು,ಏ.4–ರಂಗಜಗಲಿ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ಏ.10ರಿಂದ 15 ದಿನಗಳ ಕಾಲ ಪ್ರತಿನಿತ್ಯ ಸಂಜೆ 5ರಿಂದ 8 ಗಂಟೆವರೆಗೆ ಧ್ವನ್ಯಾಲೋಕದಲ್ಲಿ ಆಯೋಜಿಸಿದೆ. 18 ವರ್ಷ ಮೇಲ್ಪಟ್ಟ ರಂಗಾಸಕ್ತರು ಮಾಹಿತಿಗಾಗಿ ಮೊ.94485–04312 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.04.2022 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ.ಬಾಬು ಜಗಜೀವನರಾಂ ಅವರ 115ನೇ ಜನ್ಮ ದಿನಾಚರಣೆ ಪ್ರಯುಕ್ತ 'ಪುಟವಿಟ್ಟ ಚಿನ್ನ ಬಾಬು ಜಗಜೀವನರಾಂ: ಜೀವನ–ವ್ಯಕ್ತಿತ್ವ–ಸಾಧನೆಗಳ ಯಶೋಗಾಥೆ' ಕುರಿತು ಕಾರ್ಯಾಗಾರ, ಅಧ್ಯಕ್ಷತೆ ಮತ್ತು ವಿಷಯ ಮಂಡನೆ: ಪ್ರಾಧ್ಯಾಪಕ ಪ್ರೊ.ನಾಯಕ್‌ವಾಡಿ, ಜೆಎಸ್‌ಎಸ್ ಮಹಿಳಾ ಕಾಲೇಜು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎನ್.ಮಹದೇವಸ್ವಾಮಿ, ಮಹಾರಾಜ ಕಾಲೇಜು ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ.ಆರ್.ತಿಮ್ಮರಾಯಪ್ಪ, ಇತಿಹಾಸ ಸಹ ಪ್ರಾಧ್ಯಾಪಕಿ ಡಾ.ಎಂ.ಕೆ.ಮಾಧವಿ, ಸ್ಥಳ: ಡಾ.ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ವಾಚಸ್ಪತಿ ಪ್ರಕಾಶನ:** ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ ಕೃತಿಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಉದ್ಘಾಟನೆ: ವಿದ್ವಾಂಸ ಪ್ರೊ.ರಾಮೇಗೌಡ, ಕೃತಿಗಳ ಬಿಡುಗಡೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ವಸಂತ ಕುಮಾರ್, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಮಂಜುನಾಥ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಬಾಬು ಜಗಜೀವನರಾಂ ಅವರ 115ನೇ ಜಯಂತಿ, ಉಪನ್ಯಾಸ, ಉದ್ಘಾಟನೆ: ಮಾಜಿ ಸಂಸದ ಆರ್.ಧ್ರುವನಾರಾಯಣ್, ಅಧ್ಯಕ್ಷತೆ: ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಉಪಸ್ಥಿತರು: ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಹೆಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಕೆ.ವೆಂಕಟೇಶ್, ವಾಸು, ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ಸ್ಥಳ: ರೈಲ್ವೆ ನಿಲ್ದಾಣ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದುಷಿ ಎಂ.ಎಸ್. ಕೀರ್ತನ ಅವರಿಂದ ಗಾಯನ, ಸಿ.ವಿ. ಶ್ರುತಿ–ಪಿಟೀಲು, ನಂದನ್ ಕಶ್ಯಪ್ –ಮೃದಂಗ, ಸಂಜೆ 6.15ಕ್ಕೆ ವಿದುಷಿ ಎಸ್.ವಿ. ಸಹನ ಅವರಿಂದ ವೀಣಾವಾದನ, ಅರ್ಜುನ್ ಕುಮಾರ್ –ಮೃದಂಗ, ಜಿ.ಎಸ್. ರಾಮಾನುಜಂ – ಘಟಂ. ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮಗಳು, ಶ್ರೀಮತಿ ಅನಸೂಯ ಸುದರ್ಶನ ತಂಡದಿಂದ ಭಜನೆ, ವಿದುಷಿ ಗೀತಾ ಹೆಬ್ಬಾರ್ ಅವರಿಂದ ಹಿಂದೂಸ್ಥಾನಿ ಸುಗಮ ಸಂಗೀತ, ಕು. ಮಹತೀ ರಘುರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀರ, ಸ್ಥಳ : ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಮಾತೃಶ್ರೀ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6 ರಿಂದ ವಿದ್ವಾನ್ ಮಲ್ಲಾಡ್ ಮುರಳಿ ಅವರಿಂದ ದಾಸವಾಣಿ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 5.30ರಿಂದ ವಿವಿಧ ಗಣಪತಿ ಮತ್ತು ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾಗಣೇಶ ಪರ್ಯಾಯ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು ಸಂಜೆ 5.00 ಅಕ್ಷರ ಮೈಸೂರು ಅನ್ನದ ಸೂರು–ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ– ಡಾ.ವಿ.ರಂಗನಾಥ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ರೋಹಿಣಿ ಸುಧಾಮ್ ಮತ್ತು ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ– ಡಾ. ಬೋರೇಗೌಡ ಚಿಕ್ಕಮರಳಿ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 7.45 ನಿತ್ಯ ವಿಜ್ಞಾನ–ಪ್ರಾಯೋಜಿತ ಕಾರ್ಯಕ್ರಮ, 10.00 ತಿಟ್ಟೆಕೃಷ್ಣ ಅಯ್ಯಂಗಾರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಬಿ.ಎನ್. ಮಂಜುಳಾ, 12.45 –ಮುದ್ರಣ ಮಾಧ್ಯಮಗಳು ಎಷ್ಟು ಸ್ವತಂತ್ರ, ಮಾತನಾಡುವವರು ಬಿ.ವಿ. ಮಹೇಶ್ ಚಂದ್ರ, 1.20 ಭಾವಗೀತೆ, 3.00 ಸಿ.ಎಂ. ಮಧುರನಾಥ್ – ವೇಣುವಾದನ, 4.00 ಕಥಾಕಾಲಕ್ಷೇಪ, ವಾಲಿ ಮೋಕ್ಷ, ಪ್ರಸ್ತುತಿ– ಸಂತ ಕೇಶವದಾಸರು, 6.50 ಕೃಷಿರಂಗ–ಕಿಸಾನ್ ವಾಣಿ, ಬೇಸಿಗೆಯಲ್ಲಿ ರಾಸುಗಳ ನಿರ್ವಹಣೆ ಕುರಿತು ಡಾ.ವಿ.ಎಂ. ರಕ್ಷಿತ್ ರಾಜ್ ಅವರೊಡನೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ, ನರಸಿಂಹಲು ವಾಡವಟ್ಟಿ–ಸಾಕ್ಸೋಫೋನ್ ವಾದನ 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ನಿರ್ಮಾಣ– ದಿವಾಕರ ಹೆಗಡೆ

ನಾನೂ ಕೇಸರಿ ಶಾಲು ಧರಿಸಿ ಹೋರಾಟಕ್ಕೆ ಬರ್ತೇನೆ, ನೀವು ರೆಡಿ ಇದ್ದೀರಾ: ಹೆಚ್‌ಡಿಕೆ



ಬೆಂಗಳೂರು,ಏ.4–ಹಲಾಲ್ ಕಟ್, ಜಟ್ಕಾ ಕಟ್ ಬಿಟ್ಟುಬಿಡಿ. ಬೆಲೆ ಏರಿಕೆ ವಿರುದ್ಧ ಹೋರಾಡಿ. ನಾನೂ ಕೇಸರಿ ಶಾಲು ಧರಿಸಿ ಹೋರಾಟಕ್ಕೆ ಬರುತ್ತೇನೆ. ಬೆಲೆ ಏರಿಕೆ ವಿರುದ್ಧ ಹೋರಾಟಕ್ಕೆ ನೀವು ರೆಡಿ ಇದ್ದೀರಾ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಬೆಂಗಳೂರಿನ ಜೆ.ಪಿ.ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಹಲಾಲ್ ಕಟ್, ಹಿಜಬ್ ವಿವಾದ ಸೇರಿದಂತೆ ಭಜರಂಗದಳ, ಹಿಂದೂಪರ ಸಂಘಟನೆಗಳ ವಿರುದ್ಧ ಟೀಕಾಪ್ರಹಾರ ಮುಂದುವರೆಸಿದರು. ಎಲ್ಲಿ ಇತ್ತು ಜಾತಿ ವ್ಯವಸ್ಥೆ? ಎಲ್ಲಿ ಇತ್ತು ಹಿಂದೂ ದೇಶ? ಎಲ್ಲವೂ ನಮ್ಮ ನಮ್ಮ ಅನುಕೂಲಕ್ಕೆ ಮಾಡಿಕೊಂಡದ್ದು. ಧರ್ಮ ವಿಭಜನೆ ಮಾಡಿ ಮಜಾ ತಗೊಳ್ಳುವವರು, ಉರಿಯುವ ಮನೆಯಲ್ಲಿ ಗಳ ಇರಿಯೋ ಕಾಯಕ ಮಾಡ್ತಿದ್ದೀರಿ. ಬಿಜೆಪಿ ಹಿಂದೂ ಧರ್ಮದಲ್ಲಿ ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡಿಲ್ಲ, ಅವರಿಗೆ ಬೇಕಾದಾಗ ಮಾತ್ರ ಒಟ್ಟಿಗೆ ತೆಗೆದುಕೊಳ್ಳುತ್ತಾರೆ. ಇದನ್ನೆಲ್ಲಾ ಇಲ್ಲಿಗೇ ನಿಲ್ಲಿಸಿ, ಬಡವರನ್ನು ರಕ್ಷಿಸಿ ಎಂದು ಕರೆ ನೀಡಿದ್ದಾರೆ.

ಬಿಜೆಪಿ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತಿದೆ. ಇದರಲ್ಲಿ ಕಾಂಗ್ರೆಸ್ ಪಾಲೂ ಇದೆ. ಎರಡು ರಾಷ್ಟ್ರೀಯ ಪಕ್ಷಗಳು 150ರ ರೋಡ್ ಮ್ಯಾಪ್ ಪ್ಲಾನ್ ಮಾಡಿಕೊಂಡು ಮನೆ ಮನೆಗೆ ಬೆಂಕಿ ಹಚ್ಚಲು ಹೊರಟ್ಟಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಬಿಜೆಪಿಯ ಬಿ–ಟೀಮ್ ಎಂದು ಸಾರಿದ್ದ ಸಿದ್ದರಾಮ್ಯಯ ಅವರೇ ಈಗೇನು ದೊಡ್ಡ ಸಾಧನೆ ಮಾಡಿದ್ದೀರಾ? ಹಿಜಬ್ ಹೆಸರು ಹೇಳ್ಬೇಡಿ ಹಿಂದೂ ಓಟ್ ಹೋಗುತ್ತೆ ಎಂದು ನಿಮ್ಮ ಅಧ್ಯಕ್ಷರೇ ಹೇಳಿದ್ದಾರೆ. ಹಿಂದೂ, ಮುಸ್ಲಿಂನವರು ದಡ್ಡರಲ್ಲ. ವಿಶ್ವ ಹಿಂದೂ ಪರಿಷತ್‌ನವರು ಬೆಂಕಿ ಹಚ್ಚಲು ಬರುತ್ತಾರೆ ಎಂದು ಕಿಡಿಕಾರಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಿರುಗೇಟು ನೀಡಿದ ಅವರು, ರಾಜ್ಯದಲ್ಲಿ ಸೌಹಾರ್ದತೆಗೆ ಧಕ್ಕೆ ಬಂದಾಗ ಮೌನವಾಗಿದ್ದವರು ಯಾರು? ಅಧಿವೇಶನದಲ್ಲಿ ಸುಮ್ಮನೆ ಕೂತವರು ಯಾರು? ಮತಾಂತರ ಬಿಲ್ ಬಗ್ಗೆ ಬೆಳಗಾವಿಯಲ್ಲಿ ಎದುರಿಸಲಾಗದೇ ಪಲಾಯನ ಮಾಡಿದ್ದು ಯಾಕೆ? ಗೋಹತ್ಯೆ ಬಿಲ್ ಬಂದಾಗ ಸದನದಲ್ಲಿ ಗೊಂದಲ ಸೃಷ್ಟಿಸಿದ್ದು ಯಾರು? ಗೋಹತ್ಯೆ ನಿಷೇಧ ಕಾಯ್ದೆ ವಿರುದ್ಧ ಮೊದಲು ರಾಷ್ಟ್ರಪತಿಗೆ ದೂರು ಕೊಟ್ಟಿದ್ದು ದೇವೇಗೌಡರು. ನಮ್ಮ ಪಕ್ಷವೇ ಮೊದಲು ಅದರ ಬಗ್ಗೆ ಧ್ವನಿ ಎತ್ತಿದ್ದು. ನಾವು ಅದರ ವಿರುದ್ಧ ಮತ ಚಲಾಯಿಸಲು ತಯಾರಿದ್ದೆವು. ಅವರ ತಪ್ಪು ಇಟ್ಕೊಂಡು ನಮ್ಮ ಬಗ್ಗೆ ಮತನಾಡಲು ಕಾಂಗ್ರೆಸ್‌ಗೆ ನೈತಿಕತೆ ಏನಿದೆ ಎಂದು ಹೇಳಿದರು.

ರಾಜ್ಯದಲ್ಲಿ ಬೆಂಕಿ ಹಚ್ಚಿದ್ದು ಕಾಂಗ್ರೆಸ್: ರಾಹುಲ್‌ಗಾಂಧಿ ಬಂದಾಗ ಸಿದ್ದರಾಮಯ್ಯ, ಹಲಾಲ್ ಹಾಗೂ ಹಿಜಬ್ ವಿಚಾರದಲ್ಲಿ ನಾವು ಮಾತನ್ನಾಡಬೇಕಿತ್ತು ಎಂದು ಹೇಳುತ್ತಾರೆ. ಇಷ್ಟಾದ ಮೇಲೂ ಜೆಡಿಎಸ್ ಬಿಜೆಪಿಯ ಬಿ–ಟೀಮ್ ಎಂದು ಹೇಳುತ್ತಾರೆ. ನೀವೆ ರಾಜ್ಯದಲ್ಲಿ ಬೆಂಕಿ ಹಚ್ಚಿದ್ದು, ನೀವೇ ಬಿಜೆಪಿ ಸರ್ಕಾರ ನಿರ್ಮಾಣ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಿದ್ದು, ಇನ್ನಾದರೂ ಹಲಾಲ್, ಹಿಜಾಬ್ ವಿಚಾರದಲ್ಲಿ ಧೈರ್ಯವಾಗಿ ಎದುರಿಸಿ ಎಂದು ಕುಟುಕಿದರು. ಅಲ್ಲದೆ, ಬಿಜೆಪಿಯವರು ನಾನು ದಾರ್ಶನಿಕ ಎನ್ನುತ್ತಾರೆ, ನಾನು ದಾರ್ಶನಿಕ ಎಂದು ಬೋರ್ಡ್ ಹಾಕಿಕೊಂಡಿಲ್ಲ, ನೀವೆ ಹಾಕಿಕೊಂಡಿರುವುದು. ನಾನು ಸಮಾಜ ಪರಿವರ್ತನಾಕಾರಕ ಅಲ್ಲ, ಇಂತ ವಿಷಯ ತೆಗೆದು ಮತಬ್ಯಾಂಕ್ ಮಾಡಲ್ಲ, ಬೆಂದ ಮನೆಯಲ್ಲಿ ಗಳ ಇರಿಯುವ ಬುದ್ಧಿ ನನಗಿಲ್ಲ, ಕಂದಾಚಾರ ಇರುವ ನೀವು ನನಗೆ ಬುದ್ದಿ ಹೇಳುತ್ತೀರಾ? ಎಂದು ತಿರುಗೇಟು ನೀಡಿದ್ದಾರೆ. ಯುಗಾದಿಗೆ ಇಷ್ಟು ಪ್ರಚಾರ ಯಾವತ್ತು ಸಿಕ್ಕಿರಲಿಲ್ಲ. ಒಳ್ಳೆಯ ಮನರಂಜನೆ ಸಿಕ್ಕಿತು. ಪ್ರತಿದಿನ ಯುಗಾದಿ ಮಾದರಿಯ ಸುದ್ದಿಗಳೇ ವಿಜೃಂಭಿಸಲಿದೆ. ಮುಂದಿನ ಚುನಾವಣೆವರೆಗೂ ಪರಿಸ್ಥಿತಿ ಹೀಗೆ ಇರಲಿದೆ ಎಂದರು.

> **ಮೌನಿ ಬಾಬಾ ಬೊಮ್ಮಾಯಿ**
> ಇಷ್ಟೆಲ್ಲಾ ವಿವಾದ ಇದ್ದರೂ ಸಿಎಂ ಬಸವರಾಜ ಬೊಮ್ಮಾಯಿ ಮೌನಿ ಬಾಬಾ ಆಗಿದ್ದಾರೆ. ಮನ್‌ಮೋಹನ್ ಸಿಂಗ್ ಮೌನಿ ಅನ್ನುತಿದ್ದರು ಈಗ ಬೊಮ್ಮಾಯಿ ಮೌನವಾಗಿದ್ದಾರೆ. ಸರ್ಕಾರ ಸ್ವತಂತ್ರವಾಗಿ ನಡೆಯುತ್ತಿಲ್ಲ ರಿಮೋಟ್ ಕಂಟ್ರೋಲ್‌ನಲ್ಲಿ ನಡೆಯುತ್ತಿದೆ.
> –ಹೆಚ್.ಡಿ.ಕುಮಾರಸ್ವಾಮಿ

ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಕಾರ್ಯ ನಿರ್ವಾಹಕ ನಿರ್ದೇಶಕರು ಮೈಸೂರಿಗೆ ಭೇಟಿ

ಶ್ರೀ ಕೊಳ್ಳೇಗಾಲ ವಿ ರಾಘವೇಂದ್ರ ಅವರು ಇಂದು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಂಜಾಬ್ ಮತ್ತುಸಿಂಧ್ ಬ್ಯಾಂಕ್ ಸಿಬ್ಬಂದಿಯಿಂದ ಸನ್ಮಾನಿಸಲಾಯಿತು.

ಪಂಜಾಬ್ ಮತ್ತು ಸಿಂಧ್ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಕೊಳ್ಳೇಗಾಲ ವಿ ರಾಘವೇಂದ್ರ ಅವರು ಮೈಸೂರು ಶಾಖೆಗೆ ಭೇಟಿ ನೀಡಿ ಅವರು ಶಾಖೆಯ ಗ್ರಾಹಕರೊಂದಿಗೆ ಸಂವಾದ ನಡೆಸಿದರು. ಸಭೆಯ ಗಮನವು ಬ್ಯಾಂಕ್‌ನ **MSME** ಉತ್ಪನ್ನಗಳ ಮೇಲೆ ಕೇಂದ್ರೀಕೃತವಾಗಿತ್ತು.

1908 ರಲ್ಲಿ ಸ್ಥಾಪಿತವಾದ ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಭಾರತದಲ್ಲಿನ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾಗಿದೆ, ಇದರ ಪ್ರಧಾನ ಕಛೇರಿಯು ನವದೆಹಲಿಯಲ್ಲಿದೆ. ಬ್ಯಾಂಕ್‌ನ ನಿವ್ವಳ ಲಾಭ 31ನೇ ಡಿಸೆಂಬರ್ 2021 ಕ್ಕೆ ಕೊನೆಗೊಂಡ **9M** ಅವಧಿಯಲ್ಲಿ 693 ಕೋಟಿ ರೂ. ಆಗಿರುತ್ತದೆ.



ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಕೊಳ್ಳೇಗಾಲ ವಿ.ರಾಘವೇಂದ್ರ ಅವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಸಿಬ್ಬಂದಿಗಳು ಉಪಸ್ಥಿತರಿದ್ದರು. ADVT

PUBLIC NOTICE

The General public is hereby notified that my clients Sri.Rama Krishna.K and Sri.Ram Prasad M have intended to purchase the schedule property mentioned below belongs to M.Gurulinge Gowda

If any person or persons or financial institution or Bank has any claim over the schedule property or any person or persons claim any right, title or interest, over the schedule property, the same may be lodged with the undersigned within seven days from today, along with relevant documents, failing which it will be presumed that the schedule property is free from any such claim and any claim received thereafter will not bind my clients and would not be considered by my clients.

SCHEDULE :

All that piece and parcel of property bearing Sy.No.378/3 measuring 35 guntas and Sy.No.378/2A measuring 20 guntas situated at Kasaba Hobli, Srirangapattana Taluk, Malhaedevaura Village and bounded on:

East By : Water Channel
WestBy : Road
North By : Land belongs to Ramesha
South By : Land belongs to D.Anusuya

V.L.Associates
Advocates.
No.173/A, 14th Cross, 1st Block, Rajajinagar, Bangalore-560 010.
Ph: 9481900851/ 9743323668.
Place: Bangalore Date: 04.04.2022

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈ.ನ.ಪ್ರಾ/ವಕ–4/2021–22
ದಿನಾಂಕ: 28.03.2022

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ರವರಿಂದ ದಿ. 22.08.1988ನೇ ಸಾಲಿನಲ್ಲಿ ಹೆಬ್ಬಾಳು 1ನೇ ಹಂತ ಬಡಾವಣೆಯ ಎಲ್.ಐ.ಜಿ–2 ರ ಮನೆ ಸಂಖ್ಯೆ: 150 ರ ಮನೆಯು ಆಶಾ ಮಂದಿರ ಯೋಜನೆಯಡಿಯಲ್ಲಿ ಶ್ರೀ ಮಾದಯ್ಯ ರವರಿಗೆ ಮಂಜೂರಾಗಿದ್ದು, ನಂತರ ಇವರು ಮರಣ ಹೊಂದಿರುವುದರಿಂದ ಇವರ ಪತ್ನಿಯಾದ ಶ್ರೀಮತಿ ಮಹಾಲಕ್ಷ್ಮಿ ರವರು ವರ್ಗಾವಣೆ / ಹಕ್ಕುಪತ್ರ ಕೋರಿರುತ್ತಾರೆ.

ಶ್ರೀಮತಿ ಮಹಾಲಕ್ಷ್ಮಿ ರವರು ವರ್ಗಾವಣೆ / ಹಕ್ಕು ಪತ್ರ ಪಡೆಯಲು ಕೋರಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಪತ್ರ ಹಾಗೂ ಹಕ್ಕುಪತ್ರ ನೀಡಲು ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಬಂದಿಲ್ಲವೆಂದು ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್,
ವಲಯ ಕಛೇರಿ–4, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಸಿಂದುವಳ್ಳಿ ಗ್ರಾಮದ ನಿವಾಸಿಗಳಾದ, (1) ಲಕ್ಷ್ಮೀದೇವಮ್ಮ ಕೋಂ ಮರಿನಾಯಕ (ಪೌತಿ) ಮತ್ತು (2) ದೇವನಾಯಕ ಬಿನ್ ಬೀರ ನಾಯಕ (ಪೌತಿ) ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರಾದ (1) ಲಕ್ಷ್ಮೀದೇವಮ್ಮ ಕೋಂ. ಮರಿನಾಯಕ (ಪೌತಿ) ಮತ್ತು (2) ದೇವನಾಯಕ ಬಿನ್ ಬೀರನಾಯಕ (ಪೌತಿ) ಮತ್ತು ಇವರ ಕುಟುಂಬದ ಸದಸ್ಯರುಗಳು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಸಿಂದುವಳ್ಳಿ ಗ್ರಾಮದ ಸರ್ವೆ ನಂಬರ್ 219 ರಲ್ಲಿನ ನಾಲ್ಕು ಎಕರೆ ಹನ್ನೆರಡು ಗುಂಟೆ (4.12.08.00) ವಿಸ್ತೀರ್ಣದ ಖುಷ್ಕಿ ಕೃಷಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ: ನಾಲೆ ಮತ್ತು ಸರ್ವೆ ನಂಬರ್: 196 ; ಪಶ್ಚಿಮಕ್ಕೆ : ಸರ್ವೆ ನಂಬರ್: 222 ; ಉತ್ತರಕ್ಕೆ: – ಸರ್ವೆ ನಂಬರ್: 218 ಮತ್ತು 224 ; ದಕ್ಷಿಣಕ್ಕೆ : ಸರ್ವೆ ನಂಬರ್: 220 ಮತ್ತು 221.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು
#2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Cell: 93431 12535.
Email: mnprakashkalappa@gmail.com
ಮೈಸೂರು: 04/04/2022

PUBLIC NOTICE

Notice is given to the general public at large that my client is negotiating and intending to purchase the property mentioned in the schedule below from its present owner Smt. Krishna Venkateshwaran, W/o Late T.S. Venkateshwaran, resident of #6, 3rd Cross, 3rd Stage, Gokulam, Mysuru- 570002 who has acquired right, title and interest on the schedule property upon the demise of her husband T.S. Venkateshwaran who inturn had acquired right, title and interest in pursuant of a Registered WILL dated 03-07-2002 duly registered as document No.89 of the year 2002-03 at pages 144-148, volume No.154 of Book III, duly registered before the Sub-Registrar Mysuru South, Mysuru executed by Dr. T.S. Kandhaswamy, S/o T.V. Shankaran, the original allottee of the Schedule Property. Any individuals, banks, financial institutions etc., having any objections for my client entering into any transaction with the said owner is hereby required to communicate their objections in writing to my office with documentary evidence within 07 days from the date of this publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of house property bearing No.6 situated at 3rd Cross, 3rd Stage, Gokulam, Devaraja Mohalla, Mysuru-570002 measuring East to West 60 feet and North to South 55.3 feet on the West Side and 60.9 feet on the East Side bounded by: East by Property No. 46 & 47 ; West by Road ; North by Road ; South by Property No. 7.

Sd/- Dinesh Solanki, B.Com, LL.M
Advocate, #1197, 12/2, KRB Road, Chamarajapuram, Mysuru-570 005.
Mob: 9343430011

10ನೇ ವರ್ಷದ ಪುಣ್ಯಸ್ಮರಣೆ



ಮರಣ: 5.4.2012

ಶ್ರೀಮತಿ ತಿಮ್ಮಮ್ಮ
ಭಾವಪೂರ್ಣ ಶ್ರದ್ಧಾಂಜಲಿ
ಇಂತಿ ದುಃಖಿತಪ್ತ: ಕೆ. ಕೃಷ್ಣೇಗೌಡ, ನಿವೃತ್ತ ಶಿಕ್ಷಕರು ಜಗದೀಶ ಮತ್ತು ವಿಷಕಂಠೇಗೌಡ.

ವಿದೇಶ ಪ್ರವಾಸ



ಡಾ॥ ಮಹೇಂದ್ರ .ವಿ.ಪಿ (MSc.Ph.D)
ವಿಷಯ: ಅಮೇರಿಕಾದಲ್ಲಿ ಹುದ್ದೆ
ಪ್ರಯಾಣ ದಿನಾಂಕ : 06.04.2022
ತಂದೆ: ವೀರಣ್ಣ ಜಿ.ಕೆ.(ವಿಕ್ರಾಂತ್) ಟೈರ್ಸ್
ತಾಯಿ: ಪದ್ಮಿನಿ, ಶಿಕ್ಷಕಿ, ಹುಣಸೂರು ತಾ॥
ಶುಭಕೋರುವವರು:
ಶ್ರೀಮತಿ ಶ್ರೀ - ರಾಜೇಶ್ವರಿ.ವಿ.ವಿ ವಿನೋದ್.ಎಸ್
ಶ್ರೀಮತಿ ಶ್ರೀ - ಭಾರ್ಗವಿ ಮಂಜೇಶ್.ವಿ.ಪಿ
ಶ್ರೀಮತಿ ಶ್ರೀ - ಮಾಲಿನಿ ಪದ್ಮನಾಭರವರು
ಜೈ ಭೀಮ್ ಯುವಕರ ಸಂಘ, ಜ್ಯೋತಿಗೌಡನಪುರ
ಜಿ.ಕೆ ರೇಡಿಯಲ್ ಕಾರ್ಮಿಕರ ವರ್ಗ

DOCUMENTS LOST

Shashikala, No. 19, 26th Block, Parashakthi Road, Shakthi Nagara, Mysore-570 019, I lost complete set of originals for the above mentioned property including all original sale deeds, khatha certificates, allotment letters and all other relevant documents. Finders please contact:
MOB: 9108218570

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–6:542:2021–22
ದಿನಾಂಕ: 31–03–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಗೊರೂರು ಗ್ರಾಮದ ಸರ್ವೆ ನಂ. 129ರ 04 ಎಕರೆ 33 ಗುಂಟೆ ಮತ್ತು 142/2ರ 01 ಎಕರೆ 21 ಗುಂಟೆ ಒಟ್ಟು 06 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಎಸ್. ಸಿದ್ದಯ್ಯ ಬಿನ್ ಲೇಟ್ ಶಂಭಯ್ಯ ಶ್ರೀ ಎಂ.ವಿ. ನಾಗೇಶ್ ಬಿನ್ ಎಂ.ವಿ. ವೆಂಕಟರಮಣಸ್ವಾಮಿ ಮತ್ತು ಎಂ.ವಿ. ಶಾಂತರಾಜು ಬಿನ್ ಎಂ.ವಿ. ವೆಂಕಟರಮಣಸ್ವಾಮಿ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. "ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/–
ನಗರ ಯೋಜಕ ಸದಸ್ಯರು,
ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು

"ಭಾವಪೂರ್ಣ ಶ್ರದ್ಧಾಂಜಲಿ"



ಶ್ರೀಮತಿ ಮೀರಾಬಾಯಿ

(ವಿಧಾನ ಪರಿಷತ್ ಸದಸ್ಯರಾದ ಡಾ॥ ಡಿ. ತಿಮ್ಮಯ್ಯರವರ ಧರ್ಮಪತ್ನಿ)

ಇವರು ದಿನಾಂಕ: 04.04.2022 ಸೋಮವಾರ ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ಇಂದು ದಿನಾಂಕ: 05.04.2022 ಮಂಗಳವಾರ ಮಧ್ಯಾಹ್ನ 1 ಗಂಟೆಯ ನಂತರ ಮೈಸೂರಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು
ಮೃತರ ಪತಿ ಮತ್ತು ಕುಟುಂಬವರ್ಗದವರು

ನಕ್ಕರೆ ಅದೇ ಸ್ವರ್ಗ

ಗುರುಗಳು : "ನೀನೇಕೆ ಶಾಲೆಗೆ ದಿನಾಲೂ ತಡವಾಗಿ ಬರುತ್ತೀ?"
ವಿದ್ಯಾರ್ಥಿ : "ನೀವೇಕೆ ದಿನಾಲೂ ನಾನು ಬರುವುದಕ್ಕೆ ಮುಂಚೆ ಬೆಲ್ಲು ಹೊಡೆಯುತ್ತೀರಿ?!"

ಮೈಸೂರು ಮಿತ್ರ
ಮಂಗಳವಾರ, 5 ಏಪ್ರಿಲ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಾವು ಯೋಚಿಸುವ ರೀತಿಯಂತೆ ನಾವು ರೂಪುಗೊಳ್ಳುತ್ತೇವೆ. ನೀವು ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರೋ ಅದರ ಕಡೆ ನಿಮ್ಮ ಎಲ್ಲಾ ಚೈತನ್ಯ ಎಳೆಯಲ್ಪಡುತ್ತದೆ. –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬರೀ ಕೈಗಿಂತ ಕಡೆಯೇ ಹಿತ್ತಾಳೆ ಕಡಗ?

ನಿಮ್ಮ ಪತ್ರಗಳು

ಹಾಳಾದ ರಸ್ತೆಯನ್ನು ಅಭಿವೃದ್ಧಿಪಡಿಸಿ




ಮಾನ್ಯರೆ,

ಟಿ.ನರಸೀಪುರ ಪ್ರಮುಖ ರಸ್ತೆಯಾದ ರಾಷ್ಟ್ರೀಯ ಹೆದ್ದಾರಿ 212ರಿಂದ ನಂಜನಗೂಡು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದು ಇಡೀ ರಸ್ತೆ ಹದಗೆಟ್ಟಿದೆ. ವಾಹನ ಸಂಚಾರ ದುಸ್ತರವಾಗಿದೆ. ಅಲ್ಲದೆ, ತಾಲೂಕು ಕಚೇರಿ, ಶಾಲಾ ಕಾಲೇಜು, ಹಾಸ್ಟೆಲ್, ಕ್ಷೇತ್ರ ಸಂಪನ್ಮೂಲ ಕಚೇರಿ, ವಾಣಿಜ್ಯ ಕೇಂದ್ರ, ಬ್ಯಾಂಕ್‌ಗಳು ಈ ರಸ್ತೆಯಲ್ಲಿ ಹಾದು ಹೋಗುತ್ತವೆ.

ರಸ್ತೆಯು ಗುಂಡಿಮಯವಾಗಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪಾದಚಾರಿಗಳು, ವಾಹನ ಸವಾರರು, ಈ ರಸ್ತೆಯಲ್ಲಿ ಓಡಾಡಲು ಪರದಾಡುತ್ತಿದ್ದಾರೆ. ಈ ಮಾರ್ಗದಲ್ಲಿ ಆಡಳಿತಾಧಿಕಾರಿಗಳು, ಜನಪ್ರತಿನಿಧಿಗಳು ರಸ್ತೆಯಲ್ಲಿ ಕಂಡೂ ಕಾಣದಂತೆ ತಿರುಗಾಡುತ್ತಿರುವುದು ವಿಪರ್ಯಾಸದ ಸಂಗತಿಯೇ ಸರಿ!.

ಗುಂಡಿಗಳಲ್ಲಿ ಇತ್ತೀಚೆಗೆ ಸುರಿದ ಮಳೆಯ ನೀರು ಸಂಗ್ರಹಣೆಗೊಂಡಿದ್ದು, ಸಾರ್ವಜನಿಕರಿಗೆ ತೀವ್ರ ಕಿರಿಕಿರಿಯನ್ನು ಉಂಟು ಮಾಡಿದೆ. ಸಂಬಂಧಪಟ್ಟ ಇಲಾಖೆಯು ರಸ್ತೆಯನ್ನು ಅಭಿವೃದ್ಧಿಪಡಿಸಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ, ವಾಹನ ಸವಾರರಿಗೆ, ಸಾರ್ವಜನಿಕರಿಗೆ ಸುಗಮವಾಗಿ ಸಂಚರಿಸಲು ಅನುಕೂಲವಾಗುವಂತೆ ರಸ್ತೆ ದುರಸ್ತಿಪಡಿಸುವಂತೆ ಮನವಿ ಮಾಡಿಕೊಳ್ಳುತ್ತೇನೆ.

–ಪ್ರಕಾಶ್ ಆಲಗೂಡು, ತಿ.ನರಸೀಪುರ

ಫುಟ್‌ಪಾತ್ ಅಣಿಗೊಳಿಸುವುದು ಪಾದಚಾರಿಗಳಿಗೋ? ವ್ಯಾಪಾರಸ್ಥರ ಅನುಕೂಲಕ್ಕೊ?

ಮಾನ್ಯರೆ,

ಮೈಸೂರಿನ ಬಹುತೇಕ ರಸ್ತೆಗಳ ಫುಟ್‌ಪಾತ್‌ಗಳಿಗೆ ವಿನೂತನ ರೀತಿಯ ಟೈಲ್ಸ್ ಹಾಕಿ ಅಣಿಗೊಳಿಸಲಾಗಿದೆ. ಇಲ್ಲಿ ಅತ್ಯಂತ ಅಚ್ಚರಿ ಸಂಗತಿ ಎಂದರೆ ಹೀಗೆ ವ್ಯವಸ್ಥಿತವಾಗಿ ನಿರ್ಮಾಣ ಮಾಡಿರುವ ಫುಟ್‌ಪಾತ್‌ಗಳು ಪಾದಚಾರಿಗಳ ಸುಗಮ, ಸುರಕ್ಷಿತ ಓಡಾಟಕ್ಕೋ ಇಲ್ಲ ಮಳಿಗೆಗಳ ಮಾಲೀಕರು ತಮ್ಮ ಪದಾರ್ಥಗಳನ್ನು ಇರಿಸಿಕೊಂಡು, ಇಲ್ಲವೇ ಫಲಕ ಅಳವಡಿಸಿಕೊಂಡು ಅಥವಾ ಪಾರ್ಕಿಂಗ್ ಸ್ಥಳವಾಗಿ ಬಳಸಿಕೊಳ್ಳಲೋ ಎಂಬುದು ಅರ್ಥವಾಗುತ್ತಿಲ್ಲ. ನಮ್ಮ ನಗರ ಪಾಲಿಕೆ ಅಧಿಕಾರಿಗಳು, ನಗರ ಸಂಚಾರ ಪೊಲೀಸರು ಇದನ್ನು ಕಂಡೂ ಕಾಣದಂತೆ ಇರುವುದು ಅಚ್ಚರಿ ಮಾತ್ರವಲ್ಲ ಅನುಮಾನ ಮೂಡುತ್ತಿದೆ. ಮೈಸೂರಿನಂತಹ ಐತಿಹಾಸಿಕ ನಗರದಲ್ಲಿ ದಕ್ಷ, ಪ್ರಾಮಾಣಿಕ ಅಧಿಕಾರಿಗಳಿಲ್ಲದೆ ಹೋದರೆ ಮುಂದೆ ಎಂತಹ ಪರಿಸ್ಥಿತಿ ಎದುರಿಸಬೇಕಾಗಿ ಬರಬಹುದೋ ಎಂಬ ಆತಂಕ ಜೊತೆಗೆ ದುಃಖ ಕಾಡುತ್ತಿದೆ.

–ರಾಜೇಶ್, ವಿ.ವಿ. ಪುರಂ, ಮೈಸೂರು.

ಮನೆ ಮುಂದೆ ಯುಜಿಡಿ ನೀರು

ಮಾನ್ಯರೆ,

ತಿಂಗಳಿಂದ ಯುಜಿಡಿ ನೀರು ಮನೆ ಮುಂದೆ ನಾಲೆಯಂತೆ ಹರಿಯುತ್ತಿದ್ದು, ಸುಣ್ಣದ ಕೇರಿ 2ನೇ ಕ್ರಾಸ್ ನಿವಾಸಿಗಳು ಮೂಗು ಮುಚ್ಚಿಕೊಂಡು ದಿನದೂಡುವಂತಹ ಪರಿಸ್ಥಿತಿ ಬಂದಿದೆ. ಸೊಳ್ಳೆಗಳ ಕಾಟವಂತೂ ಸಹಿಸದಾಗಿದೆ. ಮಕ್ಕಳ ಆರೋಗ್ಯ ಹದಗೆಡುತ್ತಿದ್ದು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಚರಂಡಿಯಲ್ಲಿ ನೀರು ನಿಂತಲ್ಲೇ ನಿಂತಿರುವುದರಿಂದ ಕಸ ಕಡ್ಡಿ ಸೇರಿ ಕೊಳೆಯುತ್ತಿದ್ದು, ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಇದಕ್ಕೆ ಪಾಲಿಕೆ ಅಧಿಕಾರಿಗಳು ಹಾಗೂ ನಗರ ಪಾಲಿಕೆ ಸದಸ್ಯರ ಬೇಜವಾಬ್ದಾರಿತನವೇ ಕಾರಣ. ಇದರ ಬಗ್ಗೆ ಇನ್ನಾದರೂ ಜನಪ್ರತಿನಿಧಿಗಳು ಗಮನಹರಿಸಿ ಸಮಸ್ಯೆಯನ್ನು ನಿವಾರಿಸಬೇಕೆಂದು ಮನವಿ.

– ಸುಣ್ಣದಕೇರಿ ನಿವಾಸಿಗಳು, ಮೈಸೂರು.

ಹಲಾಲ್' ಎಂಬ ಹೆಸರೇಕೆ?

ಮಾನ್ಯರೆ,

ಮಾಂಸಾಹಾರ ಕೆಲವರ ದಿನ ನಿತ್ಯದ ಆಹಾರ. ಈ ವಿಷಯದಲ್ಲಿಯೂ ವಾದ – ಪ್ರತಿವಾದ ನಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ. ಪ್ರಾಣಿ ಬಲಿಗೆ ಇತ್ತೀಚೆಗೆ 'ಹಲಾಲ್' ಎಂಬ ಹೆಸರೇಕೆ? ಕೇವಲ ಮುಸ್ಲಿಂ ಸಮುದಾಯದವರು ಮಾತ್ರ 'ಮಾಂಸ' ತಿನ್ನುತ್ತಾರೆಯೇ? ಮಾಂಸದ ಮೇಲೆ ಇದು ಇಂತಹವರಿಗೆ ಎಂದು ಏನಾದರೂ ಬರೆದಿರುತ್ತದೆಯೇ? ಬಹುತೇಕ ಹಿಂದೂಗಳು ವಾಸವಾಗಿರುವ ಈ 'ಹಿಂದೂಸ್ಥಾನ'ದಲ್ಲಿ ಸಹಜವಾಗಿ ಮಾಂಸ ತಿನ್ನುವವರು ಹೆಚ್ಚಾಗಿ ಹಿಂದೂಗಳೇ ತಾನೆ? ಅವರುಗಳೆಂದಾದರೂ ಇದು ಮುಸ್ಲಿಂ ಸಮುದಾಯದವರು ಕತ್ತರಿಸಿರುವ ಮಾಂಸ, ಮುಸ್ಲಿಂ ಸಮುದಾಯದವರು ಇದನ್ನು ಮಾರುತ್ತಿದ್ದಾರೆ ಎಂದು ಆ ಮಾಂಸವನ್ನು ತಿರಸ್ಕರಿಸಿ ಹೋಗಿದ್ದಾರೆಯೇ? ಇದು ಕೆಲವರ ಹುನ್ನಾರ! ಬೇಕೆಂದೇ ಇಂತಹ ವಾದ–ವಿವಾದಗಳನ್ನು ಸೃಷ್ಟಿಸುತ್ತಾರೆ. ಎಲ್ಲಿಯವರೆಗೆ ಇಂತಹ ಅಭಿಪ್ರಾಯ ಭೇದ ಇರುವುದೋ ಅಲ್ಲಿಯವರೆಗೆ ಈ ತರಹ ಜಟಾಪಟಿಗಳೂ ನಡೆಯುತ್ತಿರುತ್ತದೆ. ಕೆಲವು ವಿಚಾರವಾದಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಮತ್ತು ತಾವು ಮುಸ್ಲಿಮರ ಪರ ಇದ್ದೇವೆ ಎಂದು ತೋರಿಸಿ ಕೊಳ್ಳುವ ಸಲುವಾಗಿ ಒಂದು ಸರ್ಕಸ್ ಮಾಡ್ತಾರೆ. ಇಂತಹವರ ಹೇಳಿಕೆಗಳ ಬಗ್ಗೆ ಗಮನಕೊಡದೆ, ಸುಮ್ಮನೆ ಇದ್ದು ಬಿಡುವುದೇ ಲೇಸು!

–ಬೇಲೂರು ದ.ಶಂ. ಪ್ರಕಾಶ್, ಮೈಸೂರು.

ಪ್ರೀತಿಯ ಮಹತ್ವ ಸಾರಿದ ಲೇಖನ

ಮಾನ್ಯರೇ

ಜಿ.ಎಲ್. ತ್ರಿಪುರಾಂತಕ ಅವರ ಅಂಕಣ ಬರಹ 'ಪ್ರೀತಿ...... ಮನ ಬೆಳಗುವ ದೀಪ'(ಮಾ.28) ಕುರಿತು ಬರಹದ ಕಡೆಯ ಮಾತು 'ಬೆಳ್ಳಿ ಕಿರಣ ಸುಡುವ ಕೊಳ್ಳಿ ದ್ವೇಷ, ಬೆಳಗುವ ದೀಪ ಪ್ರೀತಿ' ಅರ್ಥಪೂರ್ಣ.

ಈ ಸಂದರ್ಭದಲ್ಲಿ ತಾಯ ಪ್ರೀತಿಯ ಮಹತ್ವವನ್ನು ಹೇಳುವ ಜನಪದ ತ್ರಿಪದಿಯೊಂದು ನೆನಪಾಗುತ್ತದೆ.

ಯಾರು ಇದ್ದರು ನನ್ನ ತಾಯವ್ವ ನ್ಹೋಲ್ಯಾರು
ಸಾವಿರ ಕೊಳ್ಳಿ ಒಲೆಯಾಗ ಉರಿದರು
ಜ್ಯೋತಿ ನಿನ್ಯಾರು ಹೋಲ್ಯಾರು.

ಉಳಿದವರು (ಗಂಡ ಕೂಡ) ಕೊಳ್ಳಿ ಇದ್ದ ಹಾಗೆ; ತಾಯಾದರೋ ನಿಃಸ್ವಾರ್ಥ ನಂದಾದೀಪ; ತಣ್ಣೊಡರು!

– ಸಿಪಿಕೆ, ಮೈಸೂರು


ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

ಮರೆವೆಂಬ ಮಾಯಾಂಗನೆಯ ತೆಕ್ಕೆಯಲ್ಲಿ.....!

ಯಾವ ಘಟನೆಗಳು ನಮ್ಮ ಸ್ಮೃತಿಪಟಲದಿಂದ ಮಾಸಿ ಹೋಗಬಹುದು ಎಂದು ನಾವಂದುಕೊಳ್ಳುತ್ತೇವೋ ಅದೆಲ್ಲವನ್ನೂ ಒಂದು ಪುಸ್ತಕ ರೂಪದಲ್ಲಿ ಬರೆದಿಟ್ಟುಕೊಳ್ಳುತ್ತೇವಲ್ಲ. ಅಂದರೆ ದಿನನಿತ್ಯ ಡೈರಿ ಬರೆಯುವ ಹವ್ಯಾಸ ರೂಢಿಸಿಕೊಳ್ಳುತ್ತೇವಲ್ಲ ಅದು, ಈ ಮರೆವು ಮತ್ತು ನೆನಪುಗಳೆಂಬ ಸಮ್ಮಿಶ್ರಣದ ಪ್ರಸಾದ. ಡೈರಿ ಬರೆದು ನಿತ್ಯದ ಘಟನೆಗಳನ್ನು ಅಕ್ಷರ ರೂಪಕ್ಕಿಳಿಸುವ ಹವ್ಯಾಸ ಬೆಳೆಸಿಕೊಂಡವರನ್ನು ನಾವು ಹೊಗಳಿಕೆಯ ರೂಪದಲ್ಲಿ ಹುರುದುಂಬಿಸುತ್ತೇವೆ ನಿಜ. ಆದರೆ ಎಲ್ಲವನ್ನೂ ನೆನಪಿಟ್ಟುಕೊಳ್ಳಲಾಗದ ಅಸಹಾಯಕ ಮಾನಸಿಕ ಒಳತೋಟಿಗೆ ಹೆದರಿ ಇನ್ನೆಲ್ಲಿ ಈ ಘಟನೆಗಳೆಲ್ಲಾ ಮರೆತು ಹೋಗುತ್ತವೋ ಎಂಬ ಧಾವಂತಕ್ಕೆ ಬಿದ್ದು ಡೈರಿಯಲ್ಲಿ ಎಲ್ಲವನ್ನೂ ದಾಖಲಿಸಿಬಿಡುತ್ತೇವೆ. ಈ ಮರೆವು ಎಂಬ ಮಹಾಪತಿವ್ರತೆ ಸೃಷ್ಟಿಸುವ ಈ ಪರಿಯ ವರಾತಕ್ಕೆ ಒಮ್ಮೆ ಕರ್ನಾಟಕದ ರಾಜಕಾರಣದಲ್ಲಿ 'ಡೈರಿ ರಾದ್ಧಾಂತ' ಸೃಷ್ಟಿಯಾಗಿ ಹೋಗಿತ್ತು. ಬಹುಶಃ ಅದಿನ್ನೂ ನಿಮಗೆ ಮರೆತಿರಲಿಕ್ಕಿಲ್ಲ. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'Public memory is very short' ಅಂತ. ಅಂದರೆ ಸಾರ್ವಜನಿಕರು ರಾಷ್ಟ್ರದ, ರಾಜ್ಯದ, ಜಗತ್ತಿನ ವ್ಯಕ್ತಿ ಕೇಂದ್ರಿತ. ಜನಕೇಂದ್ರಿತ ಅಪರೂಪದ ಘಟನೆಗಳನ್ನು ಆದಷ್ಟು ಬೇಗ ಮರೆತು ಬಿಡುತ್ತಾರೆ! ದೀರ್ಘ ಕಾಲ ನೆನಪಿಟ್ಟುಕೊಳ್ಳುವುದಿಲ್ಲ ಎಂಬ ಭಾವನೆ.

ಒಬ್ಬ ಜನನಾಯಕ ಅಧಿಕಾರದಲ್ಲಿದ್ದಾಗ ಮಾಡಿದ ತಪ್ಪಿಗೆ ಜನ ಆತನನ್ನು ಸೋಲಿಸಿ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿದೆವೆಂದುಕೊಳ್ಳುತ್ತಾರೆ. ಆದರೆ ಅದೇ ಮುಂದಿನ ಬಾರಿಗೆ ಏನೆಲ್ಲಾ ವಿಚಾರಗಳಿದ್ದವೋ ಅದೆಲ್ಲವನ್ನೂ ಮರೆತು ಬಹುಮತದಿಂದ ಮತ್ತೆ ಆತನನ್ನೇ ಗೆಲ್ಲಿಸುತ್ತಾರೆ. 'Public memory is very short, ಜನ ಎಲ್ಲವನ್ನೂ ಬಹಳ ಬೇಗ ಮರೆಯುತ್ತಾರೆ. ಮರೆವು ಎಂಬ ಈ ಮಾಯಾಂಗನೆಗೆ ಇಡೀ ಸಮಯವನ್ನೇ ತಿರುವು ಮುರುವು ಮಾಡುವ ಚಾಕಚಕ್ಯತೆಯಿದೆ. ಆ ಪರಿಯ ಮರೆವಿನ ಉಡುಗೊರೆ ಜಗತ್ತಿನ ಜೀವಜಾಲವನ್ನು ಸದ್ದಿಲ್ಲದೇ ಆಳುತ್ತಿದೆ. ಯುದ್ಧ ಕಾಲದಲ್ಲಿ ದಶರಥ ಕೈಕೇಯಿಗೆ ವರಕೊಟ್ಟು ಮರೆತು ಹೋದ ವಿವರವನ್ನು ರಾಮಚಂದ್ರನ ಪಟ್ಟಾಭಿಷೇಕದ ದಿನ 'ನೆನಪು' ಎಂಬ ಮಾಯಾಮೃಗ ಮಿಂಚಿನಂತೆ ಸುಳಿದಾಡಿ ರಾಮಾಯಣಕ್ಕೆ ನಾಂದಿ ಹಾಡಿಸಿದ್ದು ಇದೇ ಮರೆವು ಮತ್ತು ನೆನಪುಗಳೆಂಬ ಮಿಂಚಿನ ಓಟಗಳು.

ನಮ್ಮಲ್ಲಿ ಲೇಖಕರಾದವರು ತಮ್ಮ ತಮ್ಮ ಆತ್ಮಚರಿತ್ರೆ ಬರೆದುಕೊಳ್ಳುತ್ತಾರಲ್ಲ! ಅವರಿಗೂ ಈ ಮರೆವಿನ ಹೊಡೆತ ತಾಕಿರುತ್ತದೆ. ಅದರ ನಡುವೆಯೇ ನೆನಪಿಸಿಕೊಂಡು ತಮ್ಮ ಜೀವಿತಾವಧಿಯಲ್ಲಿ ಸಿಕ್ಕ ಅನುಭವಗಳ ಪರಮ ಪಾರಮ್ಯವನ್ನು ಸಿಕ್ಕಿದಷ್ಟು ದಕ್ಕಿಸಿಕೊಳ್ಳುವ ಸೃಷ್ಟಿ ಕ್ರಿಯೆಯಲ್ಲಿ ಅವರು ತೊಡಗುತ್ತಾರೆ. ಅವೇ ಆತ್ಮಚರಿತ್ರೆಗಳು. ಆತ್ಮ ತೆಗೆದುಬಿಟ್ಟರೆ ಇತಿಹಾಸಕಾರರು ದಾಖಲಿಸಿದ ದೇಶದ ಚರಿತ್ರೆಗಳು. ಅಂದರೆ ಮರೆತುಹೋಗುವ ಅಪಾಯಕ್ಕೆ ಹೆದರಿಯೇ, ನಡೆದ ಸಂಗತಿಗಳನ್ನು ದಾಖಲಿಸುವ ಚರಿತ್ರಾಹ ಚರಿತ್ರೆ ಹುಟ್ಟಿಕೊಂಡಿತು.

'ಡೇನಿಯಲ್ ಸ್ಕ್ಯಾಕ್ಟರ್' ಎಂಬ ಮನೋವಿಜ್ಞಾನಿ ಮೆದುಳು ಹೇಗೆ ಎಲ್ಲವನ್ನೂ ಮರೆತುಬಿಡುತ್ತದೆ. ಮತ್ತು ಹೇಗೆ ಎಲ್ಲವನ್ನು ನೆನಪಿಟ್ಟುಕೊಳ್ಳುತ್ತದೆ ಎಂಬುದರ ಬಗ್ಗೆ ಪುಸ್ತಕವನ್ನೇ ಬರೆಯುತ್ತಾನೆ. ಅದು ವಿಜ್ಞಾನ ಬಿಡಿ! ಅಕಾಡೆಮಿಕ್ ಆಸಕ್ತಿ ಇರುವವರು ಓದಿಕೊಳ್ಳುತ್ತಾರೆ. ಅದು ವಿಜ್ಞಾನ ನಮ್ಮದು ಆಧ್ವಾನ, ಮರೆಯಲೇಬೇಕಾದ ಕೆಲವು ನೆನಪುಗಳು ನಮ್ಮಿಂದ ದೂರವಾಗುವುದಿಲ್ಲ. ಮತ್ತೆ ಮತ್ತೆ ಬಿಡದೇ ಕಾಡುವ ನೆನಪುಗಳೇ ಕವಿತೆಗಳ ವಸ್ತುಗಳಾಗಿ ಎಲ್ಲರಿಂದಲೂ ಒಂದೊಂದು ಕವಿತೆ ಬರೆಸಿಕೊಂಡಿವೆ. ಕನ್ನಡ ಚಿತ್ರರಂಗದಲ್ಲಂತೂ ಈ ನೆನಪಿನ ಮೇಲೆ ನೂರಾರು ಚಿತ್ರಗೀತೆಗಳು ಹುಟ್ಟಿಕೊಂಡಿವೆ. 'ರಾಜಾ ನನ್ನ ರಾಜಾ' ಎಂಬ ಸಿನಿಮಾ ಈ ನೆನಪು ಮತ್ತು ಮರೆವುಗಳನ್ನು ಇಟ್ಟುಕೊಂಡೇ ಚಿತ್ರೀಕರಿಸಿಕೊಂಡಿದೆ. ಸಂಸ್ಕೃತದ ಮಹಾನಾಟಕ ಕಾಳಿದಾಸನ ಅಭಿಜ್ಞಾನ ಶಾಕುಂತಲಾದ ಎರಡನೇ ಭಾಗ ನಡೆಯುವುದೇ ಈ 'ಮರೆವು' ಎಂಬ ಮಹಾಪತಿವ್ರತೆಯ ಕಾಟದಿಂದ. ಶಕುಂತಲೆಯನ್ನು ಮರೆತ ದುಷ್ಯಂತನಿಗೆ ಮುಂದೆ ಅವನ ಮಗನ ಕಾಲಕ್ಕೆ ನೆನಪಿನ ಶಕ್ತಿ ಮರುಕಳಿಸೋದು! ಹಾಗೆ ಮಹಾನ್ ಕೃತಿಗಳ ಸೃಷ್ಟಿಗೆ ಈ ಮರೆವು ಮತ್ತು ನೆನಪು ಎಂಬ ಮೂರಕ್ಷರದ ಪದಗಳ ಒಡನಾಟ ಎಡತಾಕುತ್ತಿರುತ್ತದೆ.

ಮಹಾಕಾವ್ಯಗಳ ಕತೆ ಅಂತಿರಲಿ, ಜನಸಾಮಾನ್ಯರ ಪಾಡೇನು ಗೊತ್ತ? ಬೆಳಗ್ಗೆ ಎದ್ದ ಕೂಡಲೇ ವಾಷ್‌ರೂಮಿನಲ್ಲಿ ಫ್ರೆಷ್ ಆಗುವವರೆಗೆ ಇರುವ ನೆನಪು, ಮೊಬೈಲ್‌ನ್ನು ಛಾರ್ಜಿಗೆ ಹಾಕುವುದೇ ಮರೆತು ಹೋಗುತ್ತದೆ. ಕನ್ನಡಕವನ್ನೂ ಮನೆಯಲ್ಲೇ ಬಿಟ್ಟು ಆಫೀಸಿಗೆ ಬಂದು ತಡಕಾಡುತ್ತೇವೆ. ಹೊರಡುವ ಅವಸರದಲ್ಲಿ ನಿನ್ನೆ ಬಿಚ್ಚಾಕಿದ ಪ್ಯಾಂಟಿನಲ್ಲಿರುವ ಪರ್ಸು ನಿರುಮ್ಮಳವಾಗಿ ಅಲ್ಲೇ ಕೂತಿರುತ್ತದೆ. ನೆಗಡಿಯಾಗಿ ಸೀನು ಹೆಚ್ಚಾದಾಗ ಜೇಬಿಗೆ ಕೈಯ್ಯಿಟ್ಟರೆ ಕರ್ಛೀಫ್ ಮರೆತು ಹೋಗಿರುತ್ತದೆ. ಬ್ಯಾಂಕಿನ ಪಾಸ್‌ಬುಕ್, ಪಾನ್‌ಕಾರ್ಡಿನ ನಂಬರು, ತೀರಾ ಪ್ರೀತಿಪಾತ್ರರ ಬರ್ತ್‌ಡೇ ಡೇಟು, ತಮ್ಮದೇ ಬ್ಲಡ್ ಗ್ರೂಪು, ಒಮ್ಮೊಮ್ಮೆ ಸ್ಕೂಟರಿನ ಕೀ ಇರುವ ಬೀಗದ ಗೊಂಚಲು, ಹೆಂಡತಿ ಹೇಳಿದ ತರಕಾರಿಯ ಲಿಸ್ಟು, ಅಗತ್ಯವಾಗಿ ಕೂಡಲೇ ಸಿಗಬೇಕಾದ ಆಫೀಸಿನ ಫೈಲು, ಯಾವುದೋ ಭ್ರಮೆಯಲ್ಲಿ ಪ್ರೇಯಸಿಗೆ ಕೊಟ್ಟ ಮಾತು, ಸರಿಯಾದ ಡೇಟಿಗೆ ಕಟ್ಟಬೇಕಿದ್ದ ಕರೆಂಟು ಬಿಲ್ಲು; ಫೋನಿನ ರೀಚಾರ್ಜು – ಹೀಗೆ ಒಂದೇ ಎರಡೇ ಚಿಕ್ಕ ಚಿಕ್ಕ ಸಂಗತಿಗಳೆಲ್ಲವನ್ನೂ ಮರೆತೇ ಬಿಡುತ್ತದೆ. ಈ ಮಾಯಾವಿ ಮನಸ್ಸು. ಅದಕ್ಕೆ ಕಾರಣ ಈ ಮರೆವು ಎಂಬ ಮಹಾಪತಿವ್ರತೆ. ಮರೆತದ್ದನ್ನು ಮತ್ತೆ ನೆನಪಿಸುವ ನೆನಪೆಂಬ ಮಾಯಾಂಗನೆ. ನೆನಪಾದ ವಸ್ತುಗಳು ನಮ್ಮ ಬಳಿಯಲ್ಲಿ ಇಲ್ಲವೆಂದು ಗೊತ್ತಾದಾಗ ಒತ್ತಡಕ್ಕೆ ಒಳಗಾಗಿ ಮತ್ತೆ ದೌಡಾಯಿಸುವಂತೆ ಮಾಡುತ್ತದೆ.

ಜೀವನದಲ್ಲಿ ಈ ಒಂದನ್ನೂ ಮರೆಯದೆ ಜೀವನ ನಡೆಸಿದ ಪುಣ್ಯಾತ್ಮರಾರಾದರೂ ಇದ್ದರೆ ತಿಳಿಸಿ! ಅವರಿಗೊಂದು ನಮಸ್ಕಾರ ಹೇಳೋಣ. ಪ್ರಾಯಶಃ ಈ ವಿಷಯದಲ್ಲಿ ನಮಸ್ಕಾರಕ್ಕೂ ಜನ ಸಿಗುವುದಿಲ್ಲ. ಅದೆಲ್ಲಾ ಒತ್ತಟ್ಟಿಗಿರಲಿ. ಈ ಸಾರ್ವಜನಿಕ ಜೀವನದಲ್ಲಿರುವ ಸೆಲೆಬ್ರಿಟಿಗಳನ್ನು ಈ ಮರೆವು ಎಂಬ ಮಾಯಾಂಗನೆ ಹೇಗೆ ಆಟವಾಡಿಸುತ್ತಾಳೆ ನೋಡಬೇಕು ನೀವು! ನೂರಾರು ಜನರಿರುವ ಕಾರ್ಯಕ್ರಮಗಳಲ್ಲಿ ಜನ ಕಿಕ್ಕಿರಿದು ತುಂಬಿರುತ್ತಾರೆ. ಅಲ್ಲಿ ತುಂಬಾ ಪರಿಚಿತರು ಕೈಕುಲುಕಿ ಮಾತಾಡಿಸುತ್ತಾರೆ. ಆದರೆ ಇವರಿಗೆ ಅವರ ಹೆಸರಿಡಿದು ಮಾತಾಡಿಸಲು ಅವರ ಹೆಸರೇ ಗೊತ್ತಿರುವುದಿಲ್ಲ. ಕಡೇವರೆಗೂ ಮಾತಾಡಿದ ಮೇಲೂ ಅವರು ಯಾರು ಅಂತ ಗೊತ್ತಾಗದೆ, ಅವರು ಆ ಕಡೆ ಹೋದ ಮೇಲೆ ಪಕ್ಕದಲ್ಲಿರುವ ಇನ್ಯಾರನ್ನೋ ಅವರು ಯಾರು? ಎಂದು ಕೇಳಿರುವ ಪ್ರಸಂಗಗಳಿವೆ. ಅದಕ್ಕೆ ಕಾರಣ ಈ ಮರೆವು ಎಂಬ ಮಾಯಾಂಗನೆ. ವೇದಿಕೆಗಳ ಮೇಲೆ ನಿಂತು ಯಾರೊಬ್ಬರ ಹೆಸರು ಹೇಳಲು ಹೊರಟರೆ ಎಲ್ಲರ ಹೆಸರು ಏಕಕಾಲಕ್ಕೆ ನೆನಪಾಗುವುದೇ ಇಲ್ಲ ಇದಕ್ಕೇನಂತೀರಿ? ಇತ್ತೀಚೆಗೆ ಈ ಅಪಾಯದಿಂದ ತಪ್ಪಿಸಿಕೊಳ್ಳಲು ಹೊಸ ವರಸೆ ಶುರುವಾಗಿಬಿಟ್ಟಿದೆ. ಲಗ್ನಪತ್ರಿಕೆಯ ಮೇಲೆ ಇವರಿಗೆ ಎಂಬ ಜಾಗದಲ್ಲಿ "ನಿಮ್ಮ ಹೆಸರು ನಮ್ಮ ಮನದಲ್ಲಿದೆ" ಎಂದು ಅಚ್ಚು ಹಾಕಿಸಿಬಿಡುವ ಪರಿಪಾಠ ಬೆಳೆದಿದೆ. ಅಂದರೆ ನಿಜಕ್ಕೂ ಅವರ ಹೆಸರು ಅವರ ಮನದಲ್ಲಿರು ತ್ತದೋ ಅಥವಾ ಅವರ ಹೆಸರು ಅವರಿಗೆ ಗೊತ್ತೇ ಇಲ್ಲವೋ! ಯಾವುದೋ ಒಂದು. ಒಟ್ಟಿನಲ್ಲಿ ಆಮಂತ್ರಣ ಪತ್ರಿಕೆ ಕೊಟ್ಟು ಮುಗಿಸಿದರೆ ಸಾಕು ಎನ್ನುವ 'circumstances management ಕೋರ್ಸಿನ ಮೊದಲ ಅಧ್ಯಾಯ ನಮ್ಮ ಸಮಾಜದಲ್ಲಿ ತೆರಕೊಂಡಿದೆ. ಅದಕ್ಕೆ ಕಾರಣ ಈ ಮರೆವು ಎಂಬ ಮಾಯಾಂಗನೆ.

> **ಕೆಲವೊಮ್ಮೆ ನಮಗೆ ಬೇಡವಾದ ವಿಚಾರಗಳು ನಾವು ಬೇಡವೆಂದರೂ ನಮ್ಮನ್ನೇ ಹುಡುಕಿ ಬಂದು ತಲೆತಟ್ಟಿ ಮಾತಾಡಿಸುತ್ತವೆ. ಬೇಕೇ ಬೇಕು ಎಂದು ನಾವೇ ಬಯಸುವ ಕೆಲವು ವಿಷಯಗಳು ಜಪ್ಪಯ್ಯ ಎಂದರೂ ಹತ್ತಿರ ಬರುವುದಿಲ್ಲ. ಅಂಥ ಸಾವಿರ ಸಾವಿರ ವಿಷಯಗಳಲ್ಲಿ ಈ ಮರೆವು ಮತ್ತು ನೆನಪು ಎರಡೂ ಕೂಡ ನಮ್ಮನ್ನು ಎಗ್ಗುಸಿಗ್ಗಿಲ್ಲದೆ ಆಟವಾಡಿಸಿ ಮಜಾ ತೆಗೆದುಕೊಳ್ಳುತ್ತವೆ. ಹಾಗಂತ ಈ ಎರಡೂ ಕ್ರಿಯೆಗಳ ಫಲಾನುಭವಿಗಳು ಯಾರಪ್ಪ ಎಂದರೆ ಇಡಿಯಾಗಿ ಜಗತ್ತಿನ ಮಾನವ ಕುಲ. ಅಂದರೆ ಇದು ವಿಶ್ವವ್ಯಾಪಿ. ಇದಕ್ಕೆ ಆ ದೇಶ, ಈ ದೇಶ, ಈ ಭಾಷೆ, ಆ ಭಾಷೆ ಎಂಬ ಗಡಿನಿಯಮಗಳ ಕಟ್ಟುಪಾಡಿಲ್ಲ. ಅಂಕೆಶಂಕೆಗಳ ಅಂಜುಗುಳಿತನ ಇಲ್ಲ. ಅಮೆರಿಕಾದ ಅಧ್ಯಕ್ಷನಿಂದ ಹಿಡಿದು ನೈಜೀರಿಯಾದ ಸಾಮಾನ್ಯ ಪ್ರಜೆಯತನಕ ಪೌರಾತ್ಯ-ಪಾಶ್ಚಿಮಾತ್ಯ ಜನಸಂಕುಲದ ತನಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವ ಈ ಮರೆವು ಎಂಬ ಮಹಾಪತಿವ್ರತೆ. ಬಹುಶಃ ನಿಮ್ಮ ಬದುಕಿನ ಜೀವದ್ರವ್ಯದಲ್ಲಿ ಸೇರಿ ಏನೇನು ಅನಾಹುತಗಳನ್ನು ಮಾಡಿದ್ದಿರಬೇಕೆಂಬ ಸತ್ಯ ನಿಮಗೇ ಗೊತ್ತಿರಬೇಕು. ಒಂದಂತೂ ಸತ್ಯ 'ನೀ ಕೊಡೆ ನಾ ಬಿಡೆ' ಎಂಬ ನಾಣ್ಣುಡಿಯಂತೆ ಮರೆವು ಎಂಬ ಮೂರಕ್ಷರದ ಪದ 'ನೆನಪು' ಎಂಬ ಮೂರಕ್ಷರದ ಜೊತೆ ನಿತ್ಯ ಸೆಣಸುತ್ತಲೇ ನಮ್ಮನ್ನು ಸತಾಯಿಸುತ್ತಿರುತ್ತದೆ.**

ಪ್ರೀತಿಸಿದ ಹುಡುಗ ತನ್ನ ಮೊದಲ ಮಾತಲ್ಲೇ ಆ ಹುಡುಗಿಗೆ ಕೇಳುವ ಮೊದಲ ಮಾತೆ ನನ್ನನ್ನು ಮರೆಯಲ್ಲ ತಾನೆ! ನೋಡಿ ಮರೆವು ಎಂಬ ಈ ಮೂರಕ್ಷರದ ಪದ ಎಷ್ಟೊಂದು ಕಾಟ ಕೊಡುತ್ತೇ ಅಂತ.

ಹೇಗಾದರೂ ಮಾಡಿ ಈ ಮರೆವೆಂಬ ಮಾಯಾಂಗನೆಯನ್ನು ಗೆಲ್ಲಲೇಬೇಕೆಂದು ಹಠ ತೊಟ್ಟ ಮನುಷ್ಯ ಕಂಪ್ಯೂಟರ್ ಕಂಡುಹಿಡಿದು, ಅದಕ್ಕೊಂದು ಬ್ರೈನ್ ಸೃಷ್ಟಿಸಿದ. ಅದಕ್ಕೊಂದು ಮೆಮೊರಿ ಕ್ರಿಯೇಟ್ ಮಾಡಿದ. ತಾನು ನೆನಪಿಟ್ಟುಕೊಳ್ಳಬೇಕಾದ ಎಲ್ಲ ಮುಖ್ಯ ವಿಷಯಗಳನ್ನೆಲ್ಲಾ ಕಂಪ್ಯೂಟರ್ ಮೆಮೊರಿಗೆ ತುಂಬಿದ. ಮರೆವೆಂಬ ಮಾಯಾಂಗನೆಯ ಮುಂದೆ ನಿಂತು ತಾನು ಗೆದ್ದೇ ಎಂದು ಗಹಗಹಿಸಿದ. ತಮಾಷೆಯೆಂದರೆ ಸಂಗಾತಿಯಂತೆ ಬಂದ ಮರೆವು ಮನುಷ್ಯನ ಕಿವಿಯಲ್ಲಿ ಹೇಳಿತು! ಎಲ್ಲಿ ನಿನ್ನ ಪಾಸ್‌ವರ್ಡ್, ಪಿನ್ ನಂಬರ್ ಹೇಳು ನೋಡೋಣ! ಎಂದಿತು. ನಾವೇ ಫಾಸ್ಟು ಎಂದರೆ ಅದು ನಮಗಿಂತ ಸೂಪರ್ ಫಾಸ್ಟ್, ನಾವೆಷ್ಟೇ ಜಾಗೃತರಾದರೂ ಒಮ್ಮೊಮ್ಮೆ ಪಾಸ್‌ವರ್ಡ್, ಪಿನ್ನೇ ಮರೆತು ಹೋಗುತ್ತದೆ. ಹಾಗೆ ಪಾಸ್‌ವರ್ಡ್, ಪಿನ್ ನಂಬರ್‌ಗಳು ಮರೆಯಬಾರದೆಂದು ಬರೆದಿಟ್ಟಿದ್ದ ಡೈರಿಯ ಹಾಳೆಯ ಮೇಲೆ ಮಗಳು ಚಿತ್ರ ಬಿಡಿಸಿಟ್ಟಿರುತ್ತಾಳೆ. ಅಲ್ಲೂ ಈ ಮರೆವೆಂಬ ಮಾಯಾಂಗನೆ ನಗುತ್ತಾಳೆ.

ಹೆಚ್ಚಾಗಿ ಓದಿಕೊಂಡ ಬುದ್ಧಿವಂತರಿಗೇನೆ ಈ ಮರೆವಿನ ಸಮಸ್ಯೆ ಕಾಡುವುದರಿಂದ ಸಾಮಾನ್ಯರೂ ಕೂಡ ಪದೇ ಪದೇ ಎಲ್ಲವನ್ನೂ ಮರೆಯುತ್ತಿದ್ದರೆ, ಅಂಥವರನ್ನು 'absent minded professor' ಎನ್ನುವ ಬಿರುದಾಂಕಿತವನ್ನು ಉಚಿತ ಉಡುಗೊರೆಯಾಗಿ ಕೊಡುತ್ತಾರೆ ಜನ. ಪ್ರೊಫೆಸರ್‌ಗಳಿಗೆ ಏಕೆ ಇದು ತಗುಲಿಕೊಂಡಿತೋ ಗೊತ್ತಿಲ್ಲ. ಪ್ರೊ. ಅ.ರಾ. ಮಿತ್ರ ಅವರು ತಮ್ಮ ಸಂಕಲ್ಪಗಳು ಎಂಬ ಲಲಿತ ಪ್ರಬಂಧಗಳ ಸಂಕಲನದಲ್ಲಿ ಈ ಮರೆಗುಳಿ ಪ್ರೊಫೆಸರೊಬ್ಬರ ಪ್ರಸಂಗವನ್ನು ಬಹಳ ಹಾಸ್ಯಮಯವಾಗಿ ವಿವರಿಸುತ್ತಾರೆ.

ಬಯಾಲಜಿ ಲ್ಯಾಬ್‌ನಲ್ಲಿ ಪ್ರಯೋಗ ನಿರತರಾಗಿದ್ದ ಪ್ರೊಫೆಸರೊಬ್ಬರು ಆ ದಿನದ ಪ್ರಯೋಗಕ್ಕೆ ಲ್ಯಾಬ್ ಅಟೆಂಡರಿಗೆ ಹೇಳಿ ಕಪ್ಪೆಗಳನ್ನು ತರಿಸಿದ್ದರಂತೆ. ಬೆಳಗ್ಗೆಯೇ ಪ್ರಾಯೋಗಿಕ ತರಗತಿ ಇದ್ದುದರಿಂದ ಹೋಟೆಲಿನಿಂದ ತಿಂಡಿಯನ್ನೂ ತರಿಸಿಕೊಂಡಿದ್ದರಂತೆ. ಸತ್ತುಹೋದ ಕಪ್ಪೆಗಳ ಪ್ಯಾಕೆಟನ್ನು, ತಿಂಡಿಯ ಪೊಟ್ಟಣವನ್ನೂ ಲ್ಯಾಬ್ ಟೇಬಲ್ಲಿನ ಮೇಲಿಟ್ಟು ಅಟೆಂಡರ್ ಆಚೆ ಹೋಗಿರುತ್ತಾನೆ. ತಿಂಡಿ ತಿನ್ನಲು ಕುಳಿತ ಪ್ರೊಫೆಸರ್ ತಿಂಡಿ ತಿಂದು, ಲ್ಯಾಬ್ ಅಟೆಂಡರ್‌ನನ್ನು ಕರೆದು dissection ಮಾಡಲಿಕ್ಕೆ ಕಪ್ಪೆ ಮರಿಗಳನ್ನು ತಂದಿದ್ದೀಯಾ? ಎಂದು ಕೇಳಿದರಂತೆ. ಸಾರ್ ಕಪ್ಪೆ ಮರಿಗಳ ಪಾಕೇಟ್, ತಿಂಡಿ ಪಾಕೇಟು ಎರಡನ್ನೂ ಟೇಬಲ್ಲಿನ ಮೇಲಿಟ್ಟಿರುವ ವಿಷಯವನ್ನು ಹೇಳುತ್ತಾನೆ ಅಟೆಂಡರ್. ವಿದ್ಯಾರ್ಥಿಗಳ ಎದುರಿಗೆ ಪ್ರಾಯೋಗಿಕ ಪರೀಕ್ಷೆಗಾಗಿ ತರಿಸಿದ ಕಪ್ಪೆಗಳ ಪಾಕೇಟನ್ನು ಬಿಚ್ಚಿ ನೋಡಿದರೆ, ಪಾಕೇಟಿನಲ್ಲಿ ಕಪ್ಪೆಗಳೇ ಇರುವುದಿಲ್ಲ. ಬದಲಿಗೆ ಇಡ್ಲಿಗಳಿರುತ್ತವೆ. ಅಟೆಂಡರ್ ವಿದ್ಯಾರ್ಥಿಗಳು ಹೌಹಾರುತ್ತಾರೆ. ಆ ಮರೆಗುಳಿ ಪ್ರೊಫೆಸರು ಮರೆತು ಇಡ್ಲಿಯ ಬದಲಿಗೆ ಕಪ್ಪೆಗಳಿರುವ ಪಾಕೇಟ್ ಖಾಲಿಯಾಗಿರುತ್ತವೆ. ಬೇಸ್ತುಬಿದ್ದ ಪ್ರೊಫೆಸರು ತನ್ನ ಮರೆಗುಳಿತನದಿಂದ ಇಡ್ಲಿ ತಿನ್ನಲು ಹೋಗಿ ಕಪ್ಪೆ ತಿಂದು ಫಜೀತಿಗಿಟ್ಟುಕೊಂಡ ಪ್ರಸಂಗವನ್ನು ಹಾಸ್ಯಮಯವಾಗಿ ಬರೆಯುತ್ತಾರೆ. ಓದುಗರೂ ಅದನ್ನು ಹಾಸ್ಯ ಎಂತಲೇ ಪರಿಭಾವಿಸಬೇಕಾಗುತ್ತದೆ.

ಅಂದರೆ ಈ Absent mindedness ಮರೆಗುಳಿತನ ಅನ್ನೋದು ಎಲ್ಲರನ್ನೂ ಕಾಡುತ್ತದೆ. ಇವತ್ತು ನೆನಪಾಗಬೇಕಾದ ವಿಷಯ ವ್ಯಕ್ತಿ, ಹೆಸರು, ಘಟನೆ, ಪ್ರಸಂಗ, ಹಾಸ್ಯ, ವಿನೋದ, ಎಲ್ಲವೂ ಇನ್ಯಾವತ್ತೋ ನೆನಪಾಗುತ್ತದೆ. ಕೆಲಸಕ್ಕೆ ಬೇಕೆಂದಾಗ ಯಾವುದೂ ನೆನಪಾಗದೆ ಕೈಕೊಡುತ್ತದೆ. ಅದೇ ಈ ಮರೆಗುಳಿತನದ ಸ್ಪೆಷಾಲಿಟಿ. ಈ ಮನುಷ್ಯ ಪ್ರಾಣಿಯನ್ನೂ ಇಷ್ಟಕ್ಕೆ ಯಾಕೆ ಬಿಡಬೇಕು ಎಂದುಕೊಂಡ ಈ ಮರೆವು ಇತ್ತೀಚೆಗೆ! ಅಲ್ಜೈಮರ್ ಎಂಬ ಮರೆಗುಳಿತನದ ಖಾಯಿಲೆಯಾಗಿ ಕಾಡುತ್ತಿದೆ. ವಯಸ್ಸಾದಂತೆ ಅಟಕಾಯಿಸಿಕೊಳ್ಳುವ ಇದು ಬದುಕಿನ ಸುದೀರ್ಘ ಪ್ರಯಾಣದ ಎಲ್ಲ ನೆನಪುಗಳನ್ನು ಅಳಿಸಿಹಾಕಿ ಮತ್ತೆ ಮಗುವಿನ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಈ ಸಬ್ಜೆಕ್ಟಿನ ಮೇಲೆಯೇ ತಯಾರಾದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಎಂಬ ಕನ್ನಡ ಚಲನಚಿತ್ರದಲ್ಲಿ ನಟ ಅನಂತನಾಗ್ ಈ ಮರೆವಿನ ವೈರುಧ್ಯಗಳನ್ನು, ಅಲ್ಜೈಮರ್ ಖಾಯಿಲೆಯ ಅವಾಂತರಗಳನ್ನು ನಟಿಸಿ ತೋರಿಸಿದ ದೃಶ್ಯಗಳನ್ನು ಈ ನೆನಪೆಂಬ ಅಣ್ತಮ್ಮ ಕಣ್ಣ ಮುಂದೆ ತರುತ್ತಿದೆ. ಆದರೆ ಕಿವಿಯಲ್ಲಿ ಮಾತ್ರ ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ಬರೆದ ಭಾವಗೀತೆಯ ಸಾಲೊಂದು ನೆನಪಾಗುತ್ತಿದೆ. 'ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ ಹೂಡಿ ಬರದಿರು ಮತ್ತೆ ಹಳೆಯ ನೆನಪೆ, ಮರೆವು ಶಾಪವೂ ಅಲ್ಲ! ವರವೂ ಅಲ್ಲ! ಮರೆಗುಳಿತನ ಯಾರನ್ನೂ ಬಿಡುವುದಿಲ್ಲ. ಆದ್ದರಿಂದ ಈ ಜೀವನ ಪ್ರಯಾಣದಲ್ಲಿ ನಿರಂತರವಾಗಿ ಕಹಿನೆನಪುಗಳು ಮರೆಯಲಿ, ಸವಿನೆನಪುಗಳು ಸಾಗಿ ಬರಲಿ. ಎಲ್ಲರಿಗೂ ಆದದ್ದು ನಮಗೂ ಆಗುತ್ತೆ. ನಮಗೆ ಆದದ್ದೂ ಎಲ್ಲರಿಗೂ ಆಗುತ್ತೆ, ಏನಂತೀರಿ?

ಏಕಲವ್ಯ, ಕ್ರೀಡಾರತ್ನ, ಕ್ರೀಡಾ ಪೋಷಕ ಪ್ರಶಸ್ತಿ ಪ್ರಕಟ

ಬೆಂಗಳೂರು,ಏ.4–ರಾಜ್ಯ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನೀಡುವ 2020–21ನೇ ಸಾಲಿನ ಏಕಲವ್ಯ ಪ್ರಶಸ್ತಿ, ಜೀವಮಾನ ಸಾಧನೆ, ಕ್ರೀಡಾರತ್ನ ಹಾಗೂ ಕ್ರೀಡಾ ಪೋಷಕ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ನಾರಾಯಣಗೌಡ ಸೋಮವಾರ ಘೋಷಿಸಿದ್ದಾರೆ.



ವಿಕಾಸಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವ ಡಾ. ನಾರಾಯಣಗೌಡ ಕ್ರೀಡಾ ಕ್ಷೇತ್ರದಲ್ಲಿ ವಿವಿಧ ಸಾಧನೆ ಮಾಡಿದ ಕ್ರೀಡಾಪಟುಗಳು ಹಾಗೂ ತರಬೇತುದಾರರಿಗೆ ಕೊಡಲ್ಪಡುವ ಕ್ರೀಡಾ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆಗೊಳಿಸಿದರು. ಏಕಲವ್ಯ ಪ್ರಶಸ್ತಿಗೆ 15, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಗೆ 14, ಕರ್ನಾಟಕ ಕ್ರೀಡಾಪೋಷಕ ಪ್ರಶಸ್ತಿಗೆ 10 ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ.

2020–21ನೇ ಸಾಲಿನಲ್ಲಿ ಏಕಲವ್ಯ ಪ್ರಶಸ್ತಿಗೆ 151, ಕರ್ನಾಟಕ ಕ್ರೀಡಾರತ್ನ 53, ಕ್ರೀಡಾ ಪೋಷಕ 25 ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗೆ 28 ಅರ್ಜಿಗಳು ಸ್ವೀಕೃತವಾಗಿದ್ದವು. ಇದರಲ್ಲಿ ಪ್ರಶಸ್ತಿ ಆಯ್ಕೆಗೆ ನೇಮಿಸಲಾಗಿದ್ದ ತಜ್ಞರ ಸಮಿತಿ ಪರಿಶೀಲನೆ ನಡೆಸಿ ಅರ್ಹರನ್ನು ಆಯ್ಕೆ ಮಾಡಿದೆ. ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ, ಪ್ರಶಸ್ತಿ ಪ್ರದಾನ ದಿನಾಂಕವನ್ನು ನಿಗದಿಮಾಡಿ ಶೀಘ್ರದಲ್ಲೇ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದರು. ಏಕಲವ್ಯ ಪ್ರಶಸ್ತಿ ಪುರಸ್ಕೃತರಿಗೆ ಏಕಲವ್ಯನ ಕಂಚಿನ ಪ್ರತಿಮೆ, ಸಮವಸ್ತ್ರ, 2 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಫಲಕ, ಸಮವಸ್ತ್ರ, 1 ಲಕ್ಷ ನಗದು ಬಹುಮಾನ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಫಲಕ, ಸಮವಸ್ತ್ರ, 1 ಲಕ್ಷ ರೂ.ನಗದು ಪುರಸ್ಕಾರ ಮತ್ತು ಕ್ರೀಡಾ ಪೋಷಕ ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಪತ್ರ ಮತ್ತು 5 ಲಕ್ಷ ನಗದು ಪುರಸ್ಕಾರ ಸಿಗಲಿದೆ.

ಕ್ರೀಡಾ ಪೋಷಕ ಪ್ರಶಸ್ತಿ: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಟ್ರಸ್ಟ್ ಉಜಿರೆ, ಬೆಂಗಳೂರು ನಗರ ಜಿಲ್ಲೆಯ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು ನಗರ ಜಿಲ್ಲೆಯ ಆರ್‌ವಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು ನಗರ ಜಿಲ್ಲೆಯ ಹೂಡಿ ಸ್ಪೋರ್ಟ್ಸ್ ಕ್ಲಬ್, ಧಾರವಾಡ ಜಿಲ್ಲೆಯ ಬಾಲ ಮಾರುತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲೆ ಎಮಿನೆಂಟ್ ಶೂಟಿಂಗ್ ಹಬ್, ದಕ್ಷಿಣ ಕನ್ನಡ ಜಿಲ್ಲೆಯ ಬಾಲಾಂಜನೇಯ ಜಿಮ್ನಾಶಿಯಂ (ರಿ.) ಮಂಗಳೂರು, ಬೆಂಗಳೂರು ನಗರ ಜಿಲ್ಲೆಯ ಬಸವನಗುಡಿ ಅಕ್ವಾಟಿಕ್ ಸೆಂಟರ್, ಬೆಂಗಳೂರು ನಗರ ಜಿಲ್ಲೆಯ ದ್ರಾವಿಡ್ ಪಡುಕೋಣೆ ಅಕಾಡೆಮಿ, ಮಂಡ್ಯ ಜಿಲ್ಲೆಯ ಪೀಪಲ್ ಎಜುಕೇಷನ್ ಟ್ರಸ್ಟ್ ಆಯ್ಕೆಯಾಗಿದೆ.

ಜೀವಮಾನ ಸಾಧನಾ ಪ್ರಶಸ್ತಿಗೆ ಅಥ್ಲೆಟಿಕ್ಸ್‌ನಲ್ಲಿ ಗಾವಂಕರ್ ಜಿವಿ, ಕಯಾಕಿಂಗ್ ಮತ್ತು ಕನೋಯಿಂನಲ್ಲಿ ಕ್ಯಾಪ್ಟನ್ ದಿಲೀಪ್‌ಕುಮಾರ್ ಆಯ್ಕೆಯಾಗಿದ್ದಾರೆ.

ಏಕಲವ್ಯ ಪ್ರಶಸ್ತಿ

ಜೀವನ್ ಕೆಎಸ್ – ಅಥ್ಲೆಟಿಕ್ಸ್
ನಿತಿನ್ – ನೆಟ್ ಬಾಲ್
ಅಶ್ವಿನಿ ಭಟ್ – ಬ್ಯಾಡ್ಮಿಂಟನ್
ಜಿ ತರುಣ್ ಕೃಷ್ಣಪ್ರಸಾದ್ –ರೋಯಿಂಗ್
ಲೋಪಮುದ್ರಾ ತಿಮ್ಮಯ್ಯ –ಬ್ಯಾಸ್ಕೆಟ್ ಬಾಲ್
ಲಿಖಿತ್ ಎಸ್.ಪಿ. – ಈಜು
ಕರುಣ್ ನಾಯರ್ – ಕ್ರಿಕೆಟ್
ಅನರ್ಘ್ಯ ಮಂಜುನಾಥ್ – ಟೇಬಲ್ ಟೆನ್ನಿಸ್
ದಾನಮ್ಮ ಚಿಚಖಂಡಿ –ಸೈಕ್ಲಿಂಗ್
ಅಶ್ವಲ್ ರೈ – ವಾಲಿಬಾಲ್
ವಸುಂಧರಾ ಎಂ ಎನ್–ಜುಡೋ
ಪ್ರಧಾನ್ ಸೋಮಣ್ಣ – ಹಾಕಿ
ಪ್ರಶಾಂತ್ ಕುಮಾರ್ ರೈ – ಕಬಡ್ಡಿ
ರಾಧಾ ವಿ – ಪ್ಯಾರಾ ಅಥ್ಲೆಟಿಕ್ಸ್
ಮುನೀರ್ ಬಾಷಾ – ಖೋಖೋ

ಕ್ರೀಡಾ ರತ್ನ ಪ್ರಶಸ್ತಿ

ಪೂಜಾ ಗಾಲಿ – ಆಟ್ಯಾ–ಪಾಟ್ಯಾ
ಕಿರಣ್‌ಕುಮಾರ್–ಬಾಲ್ ಬ್ಯಾಡ್ಮಿಂಟನ್
ಗೋಪಾಲ ನಾಯ್ಕ್– ಕಂಬಳ
ದೀಕ್ಷಾ ಕೆ–ಖೋಖೋ
ಶಿವಯೋಗಿ ಬಾಗೇವಾಡಿ–ಗುಂಡುಕಲ್ಲು ಎತ್ತುವುದು
ಲಕ್ಷ್ಮೀ ಬಿರೆಡೆಕರ್ – ಕುಸ್ತಿ
ಪಿ ಗೋಪಾಲಕೃಷ್ಣ – ಯೋಗ
ರಾಘವೇಂದ್ರ ಹೊಂಡದಕೇರಿ–ಪವರ್ ಲಿಫ್ಟಿಂಗ್
ಸಿದ್ದಪ್ಪ ಹೊಸಮನಿ–ಸಂಗ್ರಾಣಿ ಕಲ್ಲು ಎತ್ತುವುದು
ಸೂರಜ್ ಎಸ್ ಅಣ್ಣಿಕೇರಿ – ಕುಸ್ತಿ
ಶಶಾಂಕ್ ಬಿಎಂ – ಪ್ಯಾರಾ ಈಜು
ಡಿ ನಾಗರಾಜು – ಯೋಗ
ಶ್ರೀವರ್ಷಿಣಿ – ಜಿಮ್ನಾಸ್ಟಿಕ್
ಅವಿನಾಶ್ ನಾಯ್ಕ – ಜುಡೋ

ಸರ್ಕಾರ ಸಣ್ಣ ಸಾಲ ತೋರಿಸಿ ದೊಡ್ಡ ಸಾಗರವನ್ನೇ ಕೊಳ್ಳೆ ಹೊಡೆದಿದೆ

ಬೆಂಗಳೂರು,ಏ.4–ಸತತ ಬೆಲೆ ಏರಿಕೆ ವಿರುದ್ಧ ಕಿಡಿಕಾರಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಮಾ.1ರಂದು ಕೇಂದ್ರ ಸರ್ಕಾರ ಡಿಎಪಿ ಬೆಲೆ ಏರಿಕೆ ಮಾಡಿದೆ. ಯುಗಾದಿ ಹಬ್ಬದ ಸಮಯದಲ್ಲಿ ಕೇಂದ್ರ ಸರ್ಕಾರ ನಮಗೆಲ್ಲಾ ಕಹಿಯನ್ನಷ್ಟೇ ನೀಡಿದೆ. ಸಿಹಿಯನ್ನಲ್ಲ. 50ಕೆ.ಜಿ.ಡಿಎಪಿ ರಸಗೊಬ್ಬರಕ್ಕೆ 150 ರೂಪಾಯಿ ಹೆಚ್ಚಳ ಮಾಡಿದ್ದಾರೆ. ರೈತರ ರಕ್ತವನ್ನ ಹೀರುತ್ತಿದ್ದಾರೆ. ಕೀಟನಾಶಕ, ಔಷಧಿ ಮೇಲೆ 18% ತೆರಿಗೆ ಹಾಕಿದ್ದಾರೆ. ರಸಗೊಬ್ಬರದ ಮೇಲೆ 5% ತೆರಿಗೆ ಬೇರೆ ಹಾಕ್ತಾರೆ. ರೈತರನ್ನ ಕೇಂದ್ರ ಸುಲಿಗೆ ಮಾಡುತ್ತಲೇ ಇದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ಆಕ್ರೋಶ ಹೊರಹಾಕಿದ್ದಾರೆ.

ರೈತರು ಈ ಬಾರಿ 15 ಲಕ್ಷ ಟನ್ ರಾಗಿ ಬೆಳೆದಿದ್ದಾರೆ. ಆದರೆ 2.1 ಲಕ್ಷ ಟನ್ ಖರೀದಿಗೆ ಮಾತ್ರ ಅನುಮತಿ ಇದೆ. ಹಾಗಾದರೆ ಉಳಿದ ರಾಗಿಯನ್ನ ಏನು ಮಾಡಬೇಕು?. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಕಾಲದಲ್ಲಿ ಪೆಟ್ರೋಲ್ ಸೆಸ್ ಕಡಿಮೆಯಿತ್ತು. ಇದೀಗ ತೈಲಬೆಲೆ ಹೆಚ್ಚಾಗಿದೆ. ವಾಣಿಜ್ಯ ಬಳಕೆಯ ಗ್ಯಾಸ್ ಬೆಲೆಯನ್ನು 250 ರೂ. ಹೆಚ್ಚಳ ಮಾಡಿದ್ದಾರೆ. ಬೆಲೆ ಏರಿಕೆ ಹೆಚ್ಚಾಗುತ್ತಲೇ ಇದೆ ಎಂದು ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ಮಾಡಿದ್ರು. ಬೆಲೆ ಏರಿಕೆ ವಿರುದ್ಧ ಇದುವರೆಗೆ ಸಾಂಕೇತಿಕ ಪ್ರತಿಭಟನೆ ಮಾಡಿದ್ದೇವೆ. ಮುಂದೆ ಜನಪರವಾಗಿ ಹೋರಾಡುತ್ತೇವೆ. ಬೆಲೆ ಏರಿಕೆ ವಿಚಾರವನ್ನ ಮುಚ್ಚಿಹಾಕೋಕೆ ಕೋಮುವಾದ ತಂದಿದ್ದಾರೆ. ಹಿಜಾಬ್, ಹಲಾಲ್ ಕಟ್, ಗೋ ಹತ್ಯೆ ನಿಷೇಧ ಕಾಯ್ದೆ ತಂದಿದ್ದಾರೆ. ಕಾಶ್ಮೀರಿ ಫೈಲ್ಸ್ ಸಿನಿಮಾ ತಂದಿದ್ದಾರೆ. ಕೇಂದ್ರ ಎಪಿಎಂಸಿ ಬಿಲ್ ವಾಪಸ್ ಪಡೆದಿದೆ, ಆದರೆ ರಾಜ್ಯ ಸರ್ಕಾರ ಇನ್ನೂ ವಾಪಸ್ ಪಡೆದಿಲ್ಲ. ಎಪಿಎಂಸಿಗಳು ಇವತ್ತು ಮುಳುಗಿಹೋಗ್ತಿವೆ ಎಂದ ಸಿದ್ದರಾಮಯ್ಯ ಅವರು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧವೂ ಹರಿಹಾಯ್ದರು.

ಪ್ರಸಕ್ತ ಸನ್ನಿವೇಶದ ಬಗ್ಗೆ ಕಾಂಗ್ರೆಸ್‌ಗೆ ಸ್ಪಷ್ಟ ಅಭಿಪ್ರಾಯವಿಲ್ಲವೆಂಬ ಆರೋಪಕ್ಕೆ ಮತಾಂತರ ನಿಷೇಧ ಕಾಯ್ದೆ ವಿರುದ್ಧ ಹೋದವರು ಯಾರು? ಗೋ ಹತ್ಯಾ ನಿಷೇಧದ ವಿರುದ್ಧ ಹೋದವರು ಯಾರು? ಎಂದು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ತಿರುಗೇಟು ಕೊಟ್ಟರು. ಸಿಎಂ ಬೊಮ್ಮಾಯಿ ಅವರು ಕೊರೊನಾ ನಿರ್ವಹಣೆಗೆ ಸರ್ಕಾರ ರೂ. 15,000 ಕೋಟಿ ಖರ್ಚು ಮಾಡಿದೆ ಎನ್ನುತ್ತಿದ್ದಾರೆ. ಕೇರಳ ಕೊರೊನಾ ನಿರ್ವಹಣೆಗೆ ರೂ. 40,000 ಕೋಟಿ, ತಮಿಳುನಾಡಿನವರು ರೂ. 30,000 ಕೋಟಿ ಖರ್ಚು ಮಾಡಿದ್ದಾರೆ. ಆ ರಾಜ್ಯಗಳೆಲ್ಲಾ ದಿವಾಳಿಯಾ ಗಿದ್ದಾವಾ? ಎಂದು ಪ್ರಶ್ನಿಸಿದ್ದಾರೆ. ಜನಸಾಮಾನ್ಯರ ಪಿಕ್ ಪ್ಯಾಕೆಟ್ ಮಾಡುತ್ತಿದ್ದ ಬಿಜೆಪಿ ಸರ್ಕಾರ ಈಗ ಪೂರ್ಣ ಪ್ರಮಾಣದ ಲೂಟಿಕೋರ ಸರ್ಕಾರವಾಗಿ ಬದಲಾಗಿದೆ. ರೈತರ ಆದಾಯ ಡಬಲ್ ಮಾಡುವುದಾಗಿ ಭರವಸೆ ನೀಡಿದ್ದ ಸರ್ಕಾರ ಈಗ ಡಿಎಪಿ ಗೊಬ್ಬರದ ಬೆಲೆ ಜಾಸ್ತಿ ಮಾಡಿ ಅನ್ನದಾತರ ಕಿಸೆಗೂ ಕೈ ಹಾಕಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಆರೋಪಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರತಿನಿತ್ಯ ಒಂದಲ್ಲಾ ಒಂದರ ಬೆಲೆ ಏರಿಸುತ್ತಿರುವ ಈ ಸರ್ಕಾರಕ್ಕೆ ನಮ್ಮ ಶಾಪ ತಟ್ಟದೇ ಇರದು

ಅಗತ್ಯ ವಸ್ತುಗಳ ಬೆಲೆ ಏರಿಕೆ; ಇಂಧನ, ವಿದ್ಯುತ್ ದರ ಏರಿಕೆಗೆ ಸಾಮಾನ್ಯ ಜನರ ಹಿಡಿಶಾಪ



ಮೈಸೂರು, ಏ.4– ಅಡುಗೆ ಅನಿಲ, ಪೆಟ್ರೋಲ್–ಡೀಸೆಲ್ ಸೇರಿದಂತೆ ಅತ್ಯಾವಶ್ಯಕ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿದ್ದು, ಜನರು ಹೈರಣಾಗುತ್ತಿರುವಾಗಲೇ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುತ್ ದರವನ್ನು ಯೂನಿಟ್‌ಗೆ 35 ಪೈಸೆ ಹೆಚ್ಚಳ ಮಾಡಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ವಿವಿಧ ವರ್ಗದ ಜನರು 'ಮೈಸೂರು ಮಿತ್ರ'ನಲ್ಲಿ ತಮ್ಮ ಆಕ್ರೋಶವನ್ನು ಹೊರಹಾಕಿದರು.

ಕಳೆದ 2 ವರ್ಷದಿಂದ ಕೊರೊನಾ ಸೋಂಕಿನ ಕಾರಣದಿಂದಾಗಿ ಕೆಲಸ ಕಳೆದುಕೊಂಡು, ಈಗ ಕಡಿಮೆ ಸಂಬಳದ ಕೆಲಸದಲ್ಲಿ ಕಷ್ಟ ಅನುಭವಿಸುತ್ತಿದ್ದೇವೆ. ಕೊರೊನಾ ಸಂಕಷ್ಟದಿಂದ ಹೊರಬಂದು ಸ್ವಲ್ಪ ಮಟ್ಟಿಗೆ ಉಸಿರಾಡುವಂತಾಗಿದೆ. ಆದರೆ ಗ್ಯಾಸ್ ಹಾಗೂ ಎಲ್ಲಾ ವಸ್ತುಗಳ ಬೆಲೆಯೂ ಹೆಚ್ಚಳವಾಗಿದ್ದು, ಈಗ ವಿದ್ಯುತ್ ದರವನ್ನೂ ಏರಿಕೆ ಮಾಡಿರುವುದು ಸರಿಯಲ್ಲ. ಸರ್ಕಾರ ತಕ್ಷಣವೇ ವಿದ್ಯುತ್ ದರ ಏರಿಕೆಯನ್ನು ಹಿಂಪಡೆಯಬೇಕು. ಇಲ್ಲವಾದಲ್ಲಿ ಬಡವರ ಶಾಪ ಈ ಸರ್ಕಾರಕ್ಕೆ ತಟ್ಟದೇ ಇರದು.
– **ಶಾಂತಮ್ಮ**, ಗೃಹಿಣಿ, ಗೋಕುಲಂ

ಪೆಟ್ರೋಲ್ ಬೆಲೆ 106 ರೂ.ಗಿಂತ ಹೆಚ್ಚಾಗಿದೆ. ಪ್ರತಿದಿನವೂ ಅದರ ಬೆಲೆ ಹೆಚ್ಚಾಗುತ್ತಲೇ ಇದೆ. ಆಟೋ ಓಡಿಸುತ್ತಿರುವ ನಾವು ಪ್ರಯಾಣದರವನ್ನು ಹೆಚ್ಚು ಮಾಡಲು ಆಗುವುದಿಲ್ಲ. ಭಾರೀ ನಷ್ಟ ಅನುಭವಿಸುತ್ತಿದ್ದೇವೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆ ಜಾಸ್ತಿಯಾಗಿರುವುದರಿಂದ ಜನರು ಆಟೋ ಹತ್ತಲು ಹಿಂದೇಟು ಹಾಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ವಿದ್ಯುತ್ ದರವನ್ನು ಹೆಚ್ಚಿಸಿರುವುದು ಯಾವ ನ್ಯಾಯ. ಈಗಾಗಲೇ ವಿದ್ಯುತ್ ಬಿಲ್ ಸಮರ್ಪಕ ಸರಿಯಾಗಿ ಕಟ್ಟಲು ಸಾಧ್ಯವಾಗದೆ ಚೆಸ್ಕಾಂನವರು ಸಂಪರ್ಕ ಕಟ್ ಮಾಡಲು ಬರುತ್ತಿದ್ದಾರೆ. ಆಗ ಸಾಲ ಮಾಡಿ ವಿದ್ಯುತ್ ಬಿಲ್ ಕಟ್ಟುತ್ತಿದ್ದೇವೆ. ಅದನ್ನು ಇನ್ನೂ ಹೆಚ್ಚಿಸಿದರೆ ನಾವೇನು ಮಾಡಬೇಕೆಂಬ ಯೋಚನೆ ಶುರುವಾಗಿದೆ.
– **ಮಂಜುನಾಥ್**, ಆಟೋ ಚಾಲಕ, ಬೋಗಾದಿ.

ಕೊರೊನಾ ಕಾರಣದಿಂದ ಕಳೆದ ಎರಡು ವರ್ಷದಿಂದಲೂ ನಮಗೆ ಸಂಬಳ ಜಾಸ್ತಿ ಮಾಡಿಲ್ಲ. ಆದರೆ, ಎಲ್ಲಾ ಬೆಲೆಗಳು ಗಗನಕ್ಕೇರುತ್ತಿವೆ. ಜೀವನ ನಡೆಸುವುದೇ ಕಷ್ಟವಾಗಿದೆ. ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಮಾಡಿರುವುದರಿಂದ ಅಕ್ಕಿ ಹಾಗೂ ದಿನಸಿ ಪದಾರ್ಥಗಳ ಬೆಲೆಯೂ ಜಾಸ್ತಿಯಾಗಿದೆ. ಇದು ಆಡಳಿತ ನಡೆಸುವವರಿಗೆ ಗೊತ್ತಿಲ್ಲದೇನಲ್ಲ. ಅವರು ಶಾಸಕರ ಸಂಬಳವನ್ನು ಜಾಸ್ತಿ ಮಾಡಿಕೊಂಡರು. ಆದರೆ ಈಗ ವಿದ್ಯುತ್ ದರವನ್ನು ಕೂಡ ಜಾಸ್ತಿ ಮಾಡಿ ಬಡಜನರ ಹೊಟ್ಟೆ ಮೇಲೆ ಹೊಡೆಯುತ್ತಿದ್ದಾರೆ. ತಕ್ಷಣವೇ ಜಾಸ್ತಿ ಮಾಡಿರುವ ವಿದ್ಯುತ್ ದರ ಹಿಂಪಡೆಯಬೇಕು.
–**ಸಂತೋಷ್**, ಖಾಸಗಿ ಕಂಪನಿ ಉದ್ಯೋಗಿ, ಮೇಟಗಳ್ಳಿ.

ಈ ಸರ್ಕಾರಕ್ಕೆ ಕರುಣೆಯೇ ಇಲ್ಲ ಎಂದು ಅನ್ನಿಸುತ್ತಿದೆ. ಈಗಾಗಲೇ ಗ್ಯಾಸ್ ಬೆಲೆಯನ್ನು ಹೆಚ್ಚಿಸಿದ್ದಾರೆ. ಸಬ್ಸಿಡಿಯನ್ನೂ ಕೂಡ ಕೊಡುತ್ತಿಲ್ಲ. ಅಂಗಡಿಗಳಿಗೆ ಹೋದರೆ ದಿನಸಿ ಪದಾರ್ಥಗಳನ್ನು ಕೊಂಡುಕೊಳ್ಳುವುದರೊಳಗೆ ಕಣ್ಣಲ್ಲಿ ನೀರು ಬರುತ್ತದೆ. ಎಲ್ಲಾ ವಸ್ತುಗಳ ಬೆಲೆಯೂ ಹೆಚ್ಚಾಗಿದೆ. ಬರುವ ಸಂಬಳ ಯಾವುದಕ್ಕೂ ಸಾಲದೆ ಸಾಲ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಸಾಲ ಮಾಡಿದ ಮೇಲೆ ಬಡ್ಡಿಯ ಹೊರೆಯೂ ಬೀಳುತ್ತದೆ. ಹೀಗೆ ನಾವು ಕಷ್ಟಪಡುತ್ತಿರುವಾಗ ಈ ಸರ್ಕಾರ ಕರೆಂಟ್ ದರ ಹೆಚ್ಚು ಮಾಡಿದೆ. ಅವರಿಗೆ ಸ್ವಲ್ಪವೂ ಮಾನವೀಯತೆ ಇಲ್ಲ.
– **ಸುಶೀಲಮ್ಮ**, ಮನೆಗೆಲಸದ ಮಹಿಳೆ, ಜಯನಗರ.

ದಿನಬಳಕೆ ವಸ್ತುಗಳು ಹೆಚ್ಚಾಗಿರುವುದು ಸೇರಿದಂತೆ ಪೆಟ್ರೋಲ್, ಡೀಸೆಲ್ ಬೆಲೆಗಳು ಗಗನಕ್ಕೇರಿದೆ. ಇದೀಗ ವಿದ್ಯುತ್ ದರ ಕೂಡ ಹೆಚ್ಚಾಗಿರುವುದು ಬಡವರಿಗೆ ನರಕಯಾತನೆ ಅನುಭವಿಸುವಂತಾಗಿದೆ. ಬೆಳೆದ ಬೆಳೆಗೆ ಸರಿಯಾದ ಬೆಲೆಯೂ ಸಿಗುತ್ತಿಲ್ಲ. ಪಂಪ್‌ಸೆಟ್‌ಗಳಿಗೆ ಈ ಸರ್ಕಾರ ಸಮರ್ಪಕವಾಗಿ ವಿದ್ಯುತ್ ನೀಡುತ್ತಿಲ್ಲ. ಈಗ ರೈತರ ಪಂಪ್‌ಸೆಟ್‌ಗಳಿಗೂ ಮೀಟರ್ ಹಾಕುತ್ತೇವೆ ಎಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ಕಷ್ಟದ ನಡುವೆಯೂ ವಿದ್ಯುತ್ ದರವನ್ನು ಹೆಚ್ಚಿಸಿರುವ ಸರ್ಕಾರವನ್ನು ಜನಪರ ಸರ್ಕಾರ ಎಂದು ಕರೆಯಲಾಗುತ್ತದೆಯೇ?
– **ಮಹೇಶ್**, ರೈತ, ಕಾಟೂರು.

ಸರ್ಕಾರ ಹೀಗೆ ಎಲ್ಲಾ ಬೆಲೆಗಳನ್ನು ಜಾಸ್ತಿ ಮಾಡಿ ಜನರನ್ನು ಸ್ವಲ್ಪ ಸ್ವಲ್ಪವಾಗಿಯೇ ಸಾಯುವಂತೆ ಮಾಡುವುದರ ಬದಲು ಎಲ್ಲರಿಗೂ ವಿಷವನ್ನಾದರೂ ಕೊಟ್ಟುಬಿಡಲಿ. ಎಲ್ಲಾ ಬೆಲೆಗಳು ಜಾಸ್ತಿಯಾಗುತ್ತಿರುವುದರಿಂದ ಕೆಲಸ ಸಿಗುತ್ತಿಲ್ಲ, ಕೆಲಸಕ್ಕಾಗಿ ಕಾದು ಕುಳಿತು ಬರಿಗೈಯಲ್ಲಿ ಮನೆಗೆ ಹೋಗುವ ದಿನಗಳೇ ಹೆಚ್ಚಾಗಿವೆ. ಈಗಾಗಲೇ ಎಲ್ಲಾ ಬೆಲೆಗಳನ್ನು ಜಾಸ್ತಿ ಮಾಡಿರುವ ಸರ್ಕಾರ ಇದೀಗ ಒಂದು ಇರಲಿ ಎಂದು ವಿದ್ಯುತ್ ದರವನ್ನೂ ಕೂಡ ಹೆಚ್ಚು ಮಾಡಿದೆ. ಹೀಗಾದರೆ ನಮ್ಮಂತಹ ಬಡವರು ಬದುಕುವುದಾದರೂ ಹೇಗೆ.
–**ರವಿ**, ಕಟ್ಟಡ ಕಾರ್ಮಿಕ, ಕಡಕೊಳ

ಈಗಾಗಲೇ ಅಡುಗೆ ಅನಿಲ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಬೆಲೆ ನಿಯಂತ್ರಣಕ್ಕೆ ಸಿಗದೆ ಏರಿಕೆಯಾಗುತ್ತಲೇ ಇದೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ಮೇಲೆ ಅಡುಗೆ ಎಣ್ಣೆ ಬೆಲೆ ಒಂದಕ್ಕೆ ಎರಡರಷ್ಟು ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಬಡವರು ಮತ್ತು ದುಡಿಯುವ ವರ್ಗದವರ ನೆರವಿಗೆ ನಿಲ್ಲುವುದನ್ನು ಬಿಟ್ಟು ವಿದ್ಯುತ್ ದರವನ್ನು ಹೆಚ್ಚಳ ಮಾಡಿರುವುದು ಖಂಡನೀಯ. ಕೋವಿಡ್‌ನಿಂದ ಬಹಳಷ್ಟು ನಷ್ಟ ಅನುಭವಿಸಿರುವ ನಮ್ಮಂತಹ ಮಧ್ಯಮ ವರ್ಗದವರ ಪಾಲಿಗೆ ಈ ಬೆಲೆ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ.
– **ಸೂರ್ಯ**, ಸಣ್ಣ ಹೋಟೆಲ್ ಮಾಲೀಕ, ಹೆಬ್ಬಾಳು.

ಒಂದನೇ ಪುಟದಿಂದ

ಕರೆಂಟ್ ಶಾಕ್

ಘಟಕಗಳಿಗೆ ಪ್ರತಿ ಯೂನಿಟ್‌ಗೆ ಒಂದು ರೂ. ರಿಯಾಯ್ತಿ ದೊರೆಯಲಿದೆ ಗ್ರಾಹಕರು ಮತ್ತು ಕಂಪನಿಗಳ ಬೇಳವಣಿಗೆ ಗಮನದಲ್ಲಿಟ್ಟುಕೊಂಡು ಈ ಪ್ರಮಾಣದಲ್ಲಿ ಹೆಚ್ಚಳಕ್ಕೆ ಅನುಮತಿ ನೀಡಲಾಗಿದೆ. ಕಂಪನಿಗಳಿಗೆ 2159 ಕೋಟಿ ರೂ. ಕೊರತೆ ನೀಗಿಸಲು ಪ್ರತಿ ಯೂನಿಟ್‌ಗೆ ಐದು ಪೈಸೆ ಇಂಧನ ಶುಲ್ಕ ಹಾಗೂ ಹೆಚ್‌ಪಿ/ ಕಿ.ವಾ/ ಕೆ.ವಿ.ಎಗೆ 10ರಿಂದ 30 ರೂ.ವರೆಗೆ ನಿಗದಿತ ಶುಲ್ಕಗಳ ಹೆಚ್ಚಳವನ್ನು ಅನುಮೋದಿಸಿದೆ. ಕೋವಿಡ್ 19ರ ಸಾಂಕ್ರಾಮಿಕ ರೋಗ ಹಾಗೂ ಇತರೆ ಕಾರಣಗಳಿಂದಾಗಿ ಆಯೋಗವು 2021ರ ಆರ್ಥಿಕ ವರ್ಷದ ಪರಿಷ್ಕರಣೆ ಆದೇಶವನ್ನು 2020ರ ನವೆಂಬರ್‌ನಿಂದ ಜಾರಿಗೊಳಿಸಿದೆ. ಗ್ರಾಹಕರಿಗೆ ವಿದ್ಯುತ್ ದರದ ಹೆಚ್ಚಳದ ಹೊರೆ ತಪ್ಪಿಸಲು ನಿಯಂತ್ರಕ ಸ್ವತ್ತನ್ನು ರಚಿಸಿ ಪರಿಷ್ಕೃತ ದರವನ್ನು 2020ರ ನವೆಂಬರ್ ಒಂದರಿಂದ ಅನ್ವಯಗೊಳಿಸಿದೆ.

ಊಟದ ದರ ಶೇ.5ರಷ್ಟು ಹೆಚ್ಚಳ

ಕಳೆದ 2 ವರ್ಷಗಳಿಂದ ಸಂಪೂರ್ಣವಾಗಿ ನೆಲಕಚ್ಚಿದೆ. ಮೈಸೂರಿನಲ್ಲಿ ಪ್ರವಾಸೋದ್ಯಮವು ಕೂಡ ಕುಂಠಿತವಾಗಿದೆ. ಎಲ್ಲಾ ವಸ್ತುಗಳ ಬೆಲೆ ಏರಿಕೆಯಿಂದಾಗಿ ಹೋಟೆಲ್ ಉದ್ಯಮದ ಸಮಸ್ಯೆ ಹೇಳ ತೀರದಂತಾಗಿದೆ. ಈ ಎಲ್ಲಾ ಕಾರಣಗಳಿಂದ ಊಟ, ತಿಂಡಿ ಬೆಲೆಯನ್ನು ಶೇ.10ರಷ್ಟು ಹೆಚ್ಚಿಸಲೇಬೇಕಾಗಿದೆ.ಎಂದಿರುವ ಅವರು ಈ ಸಂಬಂಧ ಇಂದು ಸಂಜೆ ಸಂಘದ ತುರ್ತು ಕಾರ್ಯಕಾರಿ ಸಮಿತಿ ಸಭೆಯನ್ನು ಕರೆದು, ಗ್ರಾಹಕರಿಗೂ ಹೊರೆಯಾಗದಂತೆ ಊಟ–ತಿಂಡಿ ಬೆಲೆಯನ್ನು ಏಪ್ರಿಲ್ 10ರಿಂದ ಶೇ. 10ರಷು ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಏರಿಕೆ ಮಾಡಿದ್ದು ಏಕೆ?

ಬೆಳಕಲ್ಲಿಯೂ ಇರುವಂತಿಲ್ಲ. ಬಡವರ ವಿರುದ್ಧ ಬಿಜೆಪಿ ಬೆಲೆ ಏರಿಕೆ ಸಮರ ಹೂಡಿದೆಯಾ ಎನ್ನುವ ಅನುಮಾನ ನನ್ನದು ಎಂದು ಹೇಳಿದ್ದಾರೆ. ರೈತರು ತಾವು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಇಲ್ಲದೆ ಬೀದಿಯಲ್ಲಿದ್ದಾರೆ. ರಾಗಿ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಜನರನ್ನು ಬೆಲೆ ಏರಿಕೆ ಬಿಸಿಗೆ ಸಿಲುಕಿಸಿ ಬೆಲೆ ಬಾರುಕೋಲು ಅಭಿಯಾನವನ್ನು ಬಿಜೆಪಿ ಸರಕಾರ ಶುರು ಮಾಡಿದೆ. ಲೋಡ್ ಶೆಡ್ಡಿಂಗ್ ತೆಗೆದು ಗುಣಮಟ್ಟದ ವಿದ್ಯುತ್ ಪೂರೈಕೆ ಸರಕಾರದ ಕರ್ತವ್ಯ ಎಂದು ಕೆಂಡಾಮಂಡಲವಾಗಿದ್ದಾರೆ. ವಿದ್ಯುತ್ ಕೊರತೆಯೇ ಇಲ್ಲ ಎನ್ನುವ ಸರಕಾರ, ಈಗ ದರ ಏರಿಕೆ ಮಾಡಿದ್ದು ಏಕೆ? ಜನರ ಮೇಲೆ ಭಾರ ಹೊರೆಸಿ ವಿದ್ಯುತ್ ಅನ್ನು ಸರಕಾರ ಕಳ್ಳ ಮಾರ್ಗದಲ್ಲಿ ಮಾರಿಕೊಳ್ಳುತ್ತಿದೆಯಾ? ಇಲ್ಲ ಎನ್ನುವುದಾದರೆ ದರ ಏರಿಕೆ ಹಿಂಪಡೆಯಲಿ ಎಂದು ಒತ್ತಾಯಿಸಿದ್ದಾರೆ.

ಎ.ಆರ್. ಮಹೇಶ್‌ಗೆ ಪಿಎಚ್.ಡಿ



ಮೈಸೂರು, ಏ.4– ಡಾ. ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎ.ಆರ್. ಮಹೇಶ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಲಂಡನ್ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಫೆಲೋ ಪಡೆದ ಪರಿಸರ ಅಧ್ಯಯನ ವಿಭಾಗದ ಪ್ರೊ.ಶ್ರೀಕಂಠಸ್ವಾಮಿ ಅವರಿಗೆ ಅಭಿನಂದನೆ



ಮೈಸೂರು, ಏ.4(ಎಸ್‌ಬಿಡಿ)– ಲಂಡನ್‌ನ ಪ್ರತಿಷ್ಠಿತ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ(ಎಫ್‌ಆರ್‌ಎಸ್‌ಸಿ) ಫೆಲೋಗೆ ಭಾಜನರಾಗಿರುವ ಮೈಸೂರಿನ ಮಾನಸ ಗಂಗೋತ್ರಿ ಪರಿಸರ ಅಧ್ಯಯನ ವಿಭಾಗ ಅಧ್ಯಯನ ಮಂಡಳಿಯ ಅಧ್ಯಕ್ಷರೂ ಆದ ಎಂಟೆಕ್ ಇನ್ ಮೆಟಿರಿಯಲ್ಸ್ ಸೈನ್ಸ್ ಸಂಯೋಜಕ ಪ್ರೊ.ಎಸ್.ಶ್ರೀಕಂಠಸ್ವಾಮಿ ಅವರನ್ನು ಸೋಮವಾರ ಅಭಿನಂದಿಸಲಾಯಿತು.

ಮಾನಸಗಂಗೋತ್ರಿ ವಿಜ್ಞಾನ ಭವನ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೊ.ಎಸ್.ಶ್ರೀಕಂಠಸ್ವಾಮಿ ಅಭಿನಂದನಾ ಸಮಿತಿ, ವಿಜ್ಞಾನ ಭವನದ ಎಂ.ಟೆಕ್ ಇನ್ ಮೆಟಿರಿಯಲ್ಸ್ ಸೈನ್ಸ್ ಹಾಗೂ ಪರಿಸರ ಅಧ್ಯಯನ ವಿಭಾಗದ ಸಹಯೋಗದಲ್ಲಿ ಪ್ರೊ.ಎಸ್.ಶ್ರೀಕಂಠಸ್ವಾಮಿ ಹಾಗೂ ಶ್ರೀಮತಿ ಭಾರತಿ ಶ್ರೀಕಂಠಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಶ್ರೀ ಆದಿಚುಂಚನಗಿರಿ ಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಮೈಸೂರು ಶಾಖಾಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ ದಂಪತಿಗೆ ಆಶೀರ್ವದಿಸಿ, ಹರಿಸಿದರು.

ಈ ವೇಳೆ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಓ ಆಗಿರುವ ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಶಾಲಾ–ಕಾಲೇಜು, ವಿವಿಗಳಲ್ಲಿ ಕಲಿಸುವ ಪಠ್ಯಕ್ರಮ ಹಾಗೂ ಸಮಾಜದ ನಡುವಿನ ಸಂಬಂಧ ತೀರಾ ಕಡಿಮೆ. ಸಮಾಜದಲ್ಲಿರುವ ಸಮಸ್ಯೆ ಹಾಗೂ ಪರಿಹಾರದ ಬಗ್ಗೆ ಪಠ್ಯಕ್ರಮದಲ್ಲಿ ಇರುವುದಿಲ್ಲ. ಆದರೆ ಸ್ವಾಯತ್ತತೆಯುಳ್ಳ ಕಾಲೇಜುಗಳಲ್ಲಿ ಅಗತ್ಯ ಪಠ್ಯಕ್ರಮ ಅಳವಡಿಸಿಕೊಳ್ಳುವ ಅವಕಾಶವಿದೆ ಎಂದು ತಿಳಿಸಿದರು.

ದೇಶದಲ್ಲಿ 52 ಸಾವಿರ ಕಾಲೇಜುಗಳಿದ್ದು, ಹಂತಹಂತವಾಗಿ ಸ್ವಾಯತ್ತತೆ ನೀಡಲಾಗುತ್ತಿದೆ. ಸದ್ಯ ಶೇ.30ರಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದು ಈ ಸಂಖ್ಯೆಯನ್ನು 2030ರೊಳಗೆ ಶೇ.50ಕ್ಕೆ ಹೆಚ್ಚಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಈ ನಿಟ್ಟಿನಲ್ಲಿ ಮೈಸೂರು ವಿವಿಯಲ್ಲೂ ಚಿಂತನೆಯಾಗಬೇಕು. ವಿವಿ ವ್ಯಾಪ್ತಿಯಲ್ಲಿರುವ ಸುಮಾರು 200 ಕಾಲೇಜುಗಳಲ್ಲಿ ಕೆಲವು ಮಾತ್ರ ಸ್ವಾಯತ್ತತೆ ಪಡೆದಿವೆ. ಪ್ರತಿವರ್ಷ ಇಂತಿಷ್ಟು ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದರಿಂದ ಶಿಕ್ಷಣದಲ್ಲಿ ಸುಧಾರಣೆ ತರಬಹುದು ಎಂದು ಅಭಿಪ್ರಾಯಿಸಿದರು.

ಈ ರೀತಿಯ ಅಭಿನಂದನಾ ಸಮಾರಂಭದ ಉದ್ದೇಶ ಹಾಗೂ ಅದರಿಂದಾಗುವ ಪರಿಣಾಮದ ಬಗ್ಗೆ ಯೋಚನೆ ಬರುವುದು ಸಹಜ. ಆದರೆ ಪ್ರತಿಷ್ಠಿತ ಪ್ರಶಸ್ತಿ ಪಡೆದಿರುವ ವ್ಯಕ್ತಿಯನ್ನು ಅಭಿನಂದಿಸುವುದರಿಂದ ಅವರ ಮುಂದಿನ ಜವಾಬ್ದಾರಿ ಬಗ್ಗೆ ಎಚ್ಚರಿಸಿದಂತಾಗುತ್ತದೆ. ಜೊತೆಗೆ ಅವರ ಸಹೋದ್ಯೋಗಿಗಳಿಗೆ ಸಾಧನೆಗೆ ಪ್ರೇರಣೆಯಾಗುತ್ತದೆ. 170ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧ ಪ್ರಕಟಿಸಿರುವ, 18 ಪಿ.ಹೆಚ್‌ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿರುವ, ವಿಜ್ಞಾನ ಕ್ಷೇತ್ರದ 9 ಪುಸ್ತಕಗಳನ್ನು ಹೊರತಂದಿರುವ ಪ್ರೊ.ಎಸ್.ಶ್ರೀಕಂಠಸ್ವಾಮಿ ಅವರನ್ನು ಅಭಿನಂದಿಸಿದ್ದು ಸಂತಸದ ಸಂಗತಿ ಎಂದು ನುಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗುಲ್ಬರ್ಗಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ, ಅಭಿನಂದನಾ ಸಮಿತಿಯ ಡಾ.ಅಪ್ಪಾಜಿಗೌಡ, ಪ್ರೊ.ಕೆ.ಎನ್.ಅಮೃತೇಶ್, ಡಾ.ಸುನೀಲ್ ನೌಟಿಯಲ್, ಪ್ರೊ.ಸಿ.ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲೆ ಯುವ ಜನತಾದಳ ಸಂಘಟನೆ ಪೂರ್ವಭಾವಿ ಸಭೆ ಜಿಲ್ಲಾಧ್ಯಕ್ಷ ಗಂಗಾಧರಗೌಡ ನೇತೃತ್ವದಲ್ಲಿ ನಡೆಯಿತು. ಸಭೆಯಲ್ಲಿ ಕೆ.ಆರ್.ನಗರದ ಉಪಾಧ್ಯಕ್ಷ ಕುಚೇಲ ನಾಯಕ, ಯೋಗೀಶ, ಹರ್ಷಿತ, ಸಂದೀಪ್, ವಿನೋದ, ಮಹದೇವ, ಪ್ರಕಾಶ್, ಪಿರಿಯಾಪಟ್ಟಣದ ಯಶಸ್‌ಗೌಡ, ನವೀನ್, ಹೆಚ್.ಡಿ.ಕೋಟೆಯ ವೇಣು, ಸುಧೀರ್, ವರುಣಾದ ಪ್ರದೀಪ್, ಸಿದ್ದೇಶ್ವರ, ಪ್ರವೀಣ, ಹಿಂದುಳಿದ ವರ್ಗದ ಮುಖಂಡ ಜಯಕುಮಾರ, ಶಿವು ರಮ್ಮನಹಳ್ಳಿ ಇನ್ನಿತರರು ಭಾಗವಹಿಸಿದ್ದರು.

ಸಿಎಂ ಬೊಮ್ಮಾಯಿ ಭೇಟಿ ಮಾಡಿದ ಸ್ಮೃತಿ ಇರಾನಿ; 14 ಲಕ್ಷ ಅಂಗನವಾಡಿಗಳ ಅಭಿವೃದ್ಧಿ



ಬೆಂಗಳೂರು: ದೇಶದಲ್ಲಿ 14 ಲಕ್ಷ ಅಂಗನವಾಡಿಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಕೇಂದ್ರ ಮಹಿಳಾ ಮತ್ತು ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ಸೋಮವಾರ ಹೇಳಿದ್ದಾರೆ.

ಇಂದು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿಗಳ ಸರ್ಕಾರಿ ನಿವಾಸದಲ್ಲಿ ಸಿಎಂ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಮೋದಿ ಭಾರತ ಅಭಿವೃದ್ಧಿಯಾಗಬೇಕಾದರೆ ಮಹಿಳೆಯರು ಅಭಿವೃದ್ಧಿಯಾಗಬೇಕು ಎಂದಿದ್ದಾರೆ. ಹೀಗಾಗಿ 18 ಇಲಾಖೆಗಳ ಜೊತೆ ಈ ಯೋಜನೆ ರೂಪಿಸಲಾಗಿದೆ. 14 ಲಕ್ಷ ಅಂಗನವಾಡಿಗಳ ಅಭಿವೃದ್ಧಿ ಮಾಡಲಾಗುವುದು. ಈಗಾಗಲೇ 11 ಲಕ್ಷ ಅಂಗನವಾಡಿಗಳು ಸಂಪೂರ್ಣವಾಗಿ ಸಿದ್ದವಾಗಿವೆ. ಇದರಿಂದ 9 ಲಕ್ಷ ಜನ ಉಪಯೋಗ ಪಡೆಯಲಿದ್ದಾರೆ ಎಂದು ತಿಳಿಸಿದರು.

ಭೇಟಿ ಬಚಾವ್, ಭೇಟಿ ಪಡಾವ್ ಯೋಜನೆಯನ್ನು ಮೋದಿ ಪ್ರಾರಂಭಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲೊಂದು ಕೇರ್ ಸೆಂಟರ್ ಇರಬೇಕು ಎಂದು ಸೂಚಿಸಿದ್ದಾರೆ. 704 ಒನ್ ಕೇರ್ ಸೆಂಟರ್ ನಿರ್ಮಾಣ ಮಾಡಲಾಗಿದೆ. ಈ ಸೆಂಟರ್‌ನಿಂದ ದೈಹಿಕವಾಗಿ, ಮಾನಸಿಕವಾಗಿ ಕಿರುಕುಳಕ್ಕೆ ಒಳಗಾದ ಮಹಿಳೆಯರಿಗೆ ಎಲ್ಲಾ ಆರೋಗ್ಯ ಸೌಲಭ್ಯ ನೀಡಲಾಗುವುದು. ಜಿಲ್ಲಾಹಿತದ ಮೂಲಕ ಗ್ರಾಮೀಣ ಮಕ್ಕಳ ಅಭಿವೃದ್ಧಿ ಪೌಷ್ಟಿಕಾಂಶ ಹೆಚ್ಚಿಸಲಾಗುತ್ತಿದೆ ಎಂದರು.

ಜನಧನ್ ಅಕೌಂಟ್ ಯೋಜನೆಯಿಂದ 24 ಕೋಟಿ ಮಹಿಳೆಯರು ಮೊದಲ ಬಾರಿಗೆ ಬ್ಯಾಂಕ್ ಅಕೌಂಟ್ ತೆರೆದಿದ್ದಾರೆ 34 ಕೋಟಿ ಲೋನ್‌ಗಳನ್ನು ಮಹಿಳೆಯರು ಮುದ್ರಾ ಯೋಜನೆಯಡಿ ಪಡೆದಿದ್ದಾರೆ ಎಂದರು.

ಏ.7ಕ್ಕೆ ಶಕ್ತಿಧಾಮ ವಿದ್ಯಾಶಾಲೆಗೆ ಸಿಎಂ ಶಂಕುಸ್ಥಾಪನೆ

ಮೈಸೂರು, ಏ.4– ಮೈಸೂರಿನ 'ಶಕ್ತಿಧಾಮ' ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರದ ಆವರಣದಲ್ಲಿ ನಿರ್ಮಿಸಿರುವ 'ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್' ಕಟ್ಟಡ ಲೋಕಾರ್ಪಣೆ ಹಾಗೂ 'ಶಕ್ತಿಧಾಮ ವಿದ್ಯಾಶಾಲಾ' ಶಂಕುಸ್ಥಾಪನೆ ಸಮಾರಂಭ ಏ.7ರಂದು ನಡೆಯಲಿದೆ. ಅಂದು ಸಂಜೆ 4ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟನೆ ನೆರವೇರಿಸಲಿದ್ದಾರೆ. ಸಹಕಾರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಇನ್‌ಫೋಸಿಸ್ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ರೀಷಾಜಿ ಮ್ಯಾಥ್ಯು, ನಟ ಶಿವರಾಜ್‌ಕುಮಾರ್, ಶಾಸಕ ಎಸ್.ಎ.ರಾಮದಾಸ್, ಶಕ್ತಿಧಾಮದ ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್, ಉಪಾಧ್ಯಕ್ಷ ಕೆಂಪಯ್ಯ ಮತ್ತಿತರರ ಗಣ್ಯರು ಭಾಗವಹಿಸಲಿದ್ದಾರೆ.

25 ವರ್ಷ ಸಾರ್ಥಕ ಸೇವೆ: ಕೌಟುಂಬಿಕ ಹಿನ್ನೆಲೆ ಕಳೆದುಕೊಂಡು ಶೋಷಣೆಗೆ ಒಳಗಾದ ಮಹಿಳೆಯರ ಪುನರ್ವಸತಿ ಹಾಗೂ ಅಭಿವೃದ್ಧಿಗಾಗಿ 1997ರಲ್ಲಿ ಸ್ಥಾಪನೆಯಾದ ಶಕ್ತಿಧಾಮ 25 ವರ್ಷಗಳ ಸಾರ್ಥಕ ಸೇವೆಯೊಂದಿಗೆ ಮುಂದಡಿ ಇಟ್ಟಿದೆ. ಸುತ್ತೂರು ಶ್ರೀಗಳ ಆಶೀರ್ವಾದದೊಂದಿಗೆ ಅಂದಿನ ನಗರ ಪೊಲೀಸ್ ಆಯುಕ್ತ ಕೆಂಪಯ್ಯ, ಮೇರುನಟ ಡಾ.ರಾಜ್‌ಕುಮಾರ್ ಹಾಗೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಸೇರಿದಂತೆ ಸಮಾನ ಮನಸ್ಕ ಧರ್ಮದರ್ಶಿಗಳ ನೆರವಿನಿಂದ ಈವರೆಗೆ 4 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಆಪ್ತಸಮಾಲೋಚನೆ, ತಾತ್ಕಾಲಿಕ ಆಶ್ರಯದೊಂದಿಗೆ ಅವರಿಗೆ ಆರ್ಥಿಕ ಸ್ವಾವಲಂಬನೆ ಕಲ್ಪಿಸಲಾಗಿದೆ. 160ಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ವಸತಿ ಸಹಿತ ಶಿಕ್ಷಣ ಕಲ್ಪಿಸಿದ್ದು, ಈ ಸೇವೆ ವಿಸ್ತರಣೆಗಾಗಿ ಹೊಸ ಕಟ್ಟಡಗಳನ್ನೂ ನಿರ್ಮಿಸಲಾಗಿದೆ. ಪಾರ್ವತಮ್ಮ ರಾಜ್‌ಕುಮಾರ್ ನಂತರ ಗೀತಾ ಶಿವರಾಜ್‌ಕುಮಾರ್ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು, ಶಿವರಾಜ್‌ಕುಮಾರ್ ಬೆನ್ನೆಲುಬಾಗಿ ನಿಂತಿದ್ದಾರೆ.

ಆರೋಗ್ಯ ಸೇವೆಯಿಂದ ವಜಾ; ಇಂದು ಪ್ರತಿಭಟನೆ

ಮೈಸೂರು, ಏ.4– ಕೊರೊನಾ ಇಳಿಮುಖವಾದ ಹಿನ್ನೆಲೆಯಲ್ಲಿ ಕೆಲಸ ಕಳೆದುಕೊಂಡಿರುವ ಕೊರೊನಾ ವಾರಿಯರ್ಸ್ ನಾಳೆ(ಏ.5) ಬೆಳಗ್ಗೆ 11.30ಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಕೊರೊನಾ ಸಂದರ್ಭದಲ್ಲಿ ವೈದ್ಯರು, ಸ್ಟಾಫ್ ನರ್ಸ್, ಲ್ಯಾಬ್ ಟೆಕ್ನಿಷಿಯನ್, ಸ್ವಾಬ್ ಸಂಗ್ರಹಿಸುವವರು ಸೇರಿ ವೈದ್ಯಕೀಯ ಹಿನ್ನೆಲೆಯ 6 ಸಾವಿರಕ್ಕೂ ಹೆಚ್ಚು ನೌಕರರನ್ನು ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರ ನಿಯೋಜಿಸಿತ್ತು. ಆದರೆ ಕೊರೊನಾ ಸೋಂಕು ತಗ್ಗಿರುವ ಕಾರಣಕ್ಕೆ ಜೀವದ ಹಂಗು ತೊರೆದು ಕೆಲಸ ಮಾಡಿದವರನ್ನು ಕನಿಷ್ಠ ಕನಿಕರವೂ ಇಲ್ಲದೆ ಕೆಲಸದಿಂದ ವಜಾ ಮಾಡಿದ್ದು, ಸರ್ಕಾರದ ಈ ನಡೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವುದಾಗಿ ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಪುನೀತ್‌ರಾಜ್ ತಿಳಿಸಿದ್ದಾರೆ

ಭಾರೀ ಸದ್ದು ಮಾಡುವ ಬೈಕ್ ಸವಾರರಿಗೆ 'ಸೈಲೆನ್ಸ್ ವಾರ್ನಿಂಗ್'

ವಿವಿ ಪುರಂ ಸಂಚಾರಿ ಪೊಲೀಸರ ಕಾರ್ಯಾಚರಣೆ



ಮೈಸೂರು, ಏ.4(ಎಂಕೆ)– ಭಾರೀ ಸದ್ದು ಮಾಡುವ ಬೈಕ್ ಸವಾರರಿಗೆ 'ಸೈಲೆನ್ಸ್ ವಾರ್ನಿಂಗ್' ನೀಡಿರುವ ವಿವಿ ಪುರಂ ಸಂಚಾರ ಪೊಲೀಸರು ಕರ್ಕಶ ಶಬ್ದದ ಕಿರಿಕಿರಿಗೆ ಕಡಿವಾಣ ಹಾಕಿದ್ದಾರೆ.

ಬೈಕ್ ಹಾಗೂ ಸ್ಕೂಟರ್‌ಗಳ ಸೈಲೆನ್ಸರ್ ಪೈಪ್ ಬದಲಿಸಿ ಕಾಲೇಜುಗಳ ಆವರಣ ಹಾಗೂ ಜನಸಂದಣಿ ಹೆಚ್ಚಾಗಿರುವ ಸಾರ್ವಜನಿಕ ಸ್ಥಳಗಳಲ್ಲಿ ಅಡ್ಡಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ವಿವಿ ಪುರಂ ಸಂಚಾರ ಪೊಲೀಸರು, ಮೊದಲ ದಿನವೇ ಸೈಲೆನ್ಸರ್ ಬದಲಿಸಿದ್ದ 24 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಈಗಾಗಲೇ ಬದಲಾಯಿಸಿದ ಸೈಲೆನ್ಸರ್ ಪೈಪ್ ಅನ್ನು ತೆಗೆದು ಆಯಾ ಬೈಕ್ ಹಾಗೂ ಸ್ಕೂಟರ್‌ನ ಸಹಜ ಸೈಲೆನ್ಸರ್ ಪೈಪ್ ಹಾಕಿಕೊಂಡರೆ ಮಾತ್ರ ವಶಕ್ಕೆ ಪಡೆದಿರುವ ವಾಹನಗಳನ್ನು ವಾಪಸ್ ನೀಡಲಾಗುವುದು. ಇಲ್ಲದಿದ್ದರೆ ವಾಹನಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಾರ್ವಜನಿಕರಿಂದ ಹಲವಾರು ದೂರುಗಳು ಬಂದ ಹಿನ್ನೆಲೆ ಮೊದಲ ದಿನ ಠಾಣಾ ವ್ಯಾಪ್ತಿಯ ಹುಣಸೂರು ಮುಖ್ಯ ರಸ್ತೆ ಹಾಗೂ ಕೆಆರ್‌ಎಸ್ ರಸ್ತೆಯಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳೇ ತಮ್ಮ ಬೈಕ್‌ಗಳ ಸೈಲೆನ್ಸರ್ ಬದಲಾಯಿಸಿಕೊಂಡು ಅಡ್ಡಾಡುತ್ತಾ ಇತರರಿಗೆ ತೊಂದರೆ ನೀಡುತ್ತಿದ್ದಾರೆ. ತಮ್ಮ ಬೈಕ್, ಸ್ಕೂಟರ್‌ಗಳನ್ನು ವಶಕ್ಕೆ ಪಡೆಯುವ ಮೊದಲೇ ಸರಿಪಡಿಸಿಕೊಂಡರೆ ಒಳಿತು ಎಂದು ಎಚ್ಚರಿಕೆ ನೀಡಿದ್ದಾರೆ.

ಏ.14ರಂದು ಡಾ.ಅಂಬೇಡ್ಕರ್ ಭಾವಚಿತ್ರದ ಅದ್ಧೂರಿ ಮೆರವಣಿಗೆ



ಮೈಸೂರು,ಏ.4(ಪಿಎಂ)– ಮೈಸೂರಿನ ಅಶೋಕಪುರಂನ ಆದಿ ಕರ್ನಾಟಕ ಮಹಾ ಸಂಸ್ಥೆ ವತಿಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಏ.14ರಂದು ಅಂಬೇಡ್ಕರ್ ಭಾವಚಿತ್ರದ ವಿಜೃಂಭಣೆಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಲಹೆಗಾರರೂ ಆದ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದ ಬಳಿ ಅಂದು ಬೆಳಗ್ಗೆ 10ಕ್ಕೆ ಮೆರವಣಿಗೆಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕ ಎಸ್.ಎ.ರಾಮದಾಸ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ನಟ ಆರ್.ಚೇತನ ಚಾಲನೆ ನೀಡಲಿದ್ದಾರೆ ಎಂದರು.

ಅಂಬೇಡ್ಕರ್, ಬುದ್ಧ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಗಳು ಮೆರವಣಿಗೆಯಲ್ಲಿ ಸಾಗಲಿವೆ. ಡೊಳ್ಳು ಕುಣಿತ, ಗೊರವರ ಕುಣಿತ, ನಗಾರಿ, ಕಂಸಾಳೆ, ಕೀಲುಕುದುರೆ, ಹುಲಿವೇಷ, ಸೋಮನಕುಣಿತ, ಗಾರುಡಿಗೊಂಬೆ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಸಾವಿರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮೆರವಣಿಗೆಯು ಅಂಬೇಡ್ಕರ್ ಉದ್ಯಾನದಿಂದ ಅಂಬೇಡ್ಕರ್ ರಸ್ತೆ ಅಶೋಕ ವೃತ್ತ ಆರ್‌ಟಿಓ ವೃತ್ತ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಸಂಸ್ಕೃತ ಪಾಠಶಾಲೆ ವೃತ್ತ, ಸಯ್ಯಾಜಿರಾವ್ ರಸ್ತೆ, ಕೆಆರ್ ವೃತ್ತ ಮಾರ್ಗವಾಗಿ ಪುರಭವನದ ಆವರಣ ತಲುಪುತ್ತದೆ ಎಂದು ತಿಳಿಸಿದರು.

ರಾಯಚೂರು ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಗಣರಾಜ್ಯೋತ್ಸವದಂದು ಡಾ.ಅಂಬೇಡ್ಕರ್ ಭಾವಚಿತ್ರ ತೆರವು ಮಾಡಿಸಿದ ಮಲ್ಲಿಕಾರ್ಜುನಗೌಡ ವಿರುದ್ಧ ಇನ್ನು 10 ದಿನಗಳ ಒಳಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಅಂಬೇಡ್ಕರ್ ಅವರಿಗೆ ಗೌರವ ಸಮರ್ಪಿಸಲು ಸರ್ಕಾರಕ್ಕೆ ಯಾವ ನೈತಿಕತೆಯೂ ಇರುವುದಿಲ್ಲ ಎಂದು ಪುರುಷೋತ್ತಮ್ ಕಿಡಿಕಾರಿದರು. ಸಂಸ್ಥೆ ಅಧ್ಯಕ್ಷ ಸಿ.ವಿಜಯಕುಮಾರ್, ಉಪಾಧ್ಯಕ್ಷ ಸಿ.ಎಂ.ಮಹಾಲಿಂಗು ಮತ್ತಿತರರು ಗೋಷ್ಠಿಯಲ್ಲಿದ್ದರು.



ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ ವತಿಯಿಂದ ಜಯಪುರ ಹೋಬಳಿಯಲ್ಲಿ ಶ್ರೀ ಅಭಯಪ್ರದ ಲಕ್ಷ್ಮೀನರಸಿಂಹದೇವರು, ಶ್ರೀ ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ಬೃಂದಾವನ ವಿದ್ಯಾಪೀಠ ಮತ್ತು ಗೋ ಶಾಲೆಯನ್ನು ಒಳಗೊಂಡ ದೇವಸ್ಥಾನ ನಿರ್ಮಾಣದ ಭೂಮಿ ಪೂಜೆಯನ್ನು ಶ್ರೀ ಸತ್ಯಾತ್ಮತೀರ್ಥಶ್ರೀ ಪಾದಂಗಳು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉತ್ತರಾದಿಮಠ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಚ್.ವಿ. ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶ್ರೀ ಚಿದಂಬರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ರಾಜ್ಯಾಧ್ಯಕ್ಷ ಜಿ.ಕೆ. ಕುಲಕರ್ಣಿ, ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಬಿ. ವಾಸುದೇವಮೂರ್ತಿ, ವ್ಯವಸ್ಥಾಪಕ ಪ್ರಮೋದ್, ಕಾರ್ಯದರ್ಶಿ ಅಂಬಿಕಾ, ನಿರ್ದೇಶಕರು ವಿಜಯ್, ವಿವೇಕ್ ಕಶ್ಯಪ್, ಮುರಳೀಧರ್, ಪ್ರಾಣೇಶ್ ಹಾಗೂ ಇನ್ನಿತರರು ಹಾಜರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಏ.4– ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆಅಲೆಮಾರಿ, ಪ್ರವರ್ಗ–1 ವಿದ್ಯಾರ್ಥಿಗಳಿಂದ 2021–22ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ಊಟ ಮತ್ತು ವಸತಿ ಸಹಾಯಯೋಜನೆ(ವಿದ್ಯಾಸಿರಿ) ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಇಲಾಖೆಯ www.bcwd.karnataka.gov.in ವೆಬ್‌ಸೈಟ್ ಮೂಲಕ ಏಪ್ರಿಲ್ 30ರವರೆಗೆ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ,ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ತಿಳಿಯಲು ಹೆಚ್ಚಿನ ಮಾಹಿತಿಗಾಗಿ www.bcwd.karnataka.gov.in ವೆಬ್‌ಸೈಟ್‌ಅನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 8050770005, 8050770004, ದೂ.ಸಂ. 080–35254757ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಹಿರಿಯ ಶಾಸಕ ಹೆಚ್.ಕೆ.ಪಾಟೀಲರಿಗೆ ಮಾತೃವಿಯೋಗ



ಗದಗ: ಮಾಜಿ ಸಚಿವ, ಕಾಂಗ್ರೆಸ್ ಹಿರಿಯ ನಾಯಕ ಹೆಚ್.ಕೆ.ಪಾಟೀಲರ ತಾಯಿ ಪದ್ಮಾವತಿ ಪಾಟೀಲ್ ಅವರು ವಿಧಿವಶರಾಗಿದ್ದಾರೆ.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಪದ್ಮಾವತಿ ಕೃಷ್ಣಗೌಡ ಪಾಟೀಲ್ (88) ಅವರನ್ನು ಕಳೆದ ಕೆಲ ದಿನಗಳ ಹಿಂದೆ ಹುಲಕೋಟಿಯ RMS ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಕಳೆದ ಒಂದು ತಿಂಗಳ ಹಿಂದೆ ಬಿದ್ದು ಸೊಂಟಕ್ಕೆ ಪೆಟ್ಟು ಮಾಡಿಕೊಂಡಿದ್ದರು. ಹೀಗಾಗಿ ಅವರು ನೈಸರ್ಗಿಕ ಚಿಕಿತ್ಸೆಗೆ ಒಳಗಾಗಿದ್ದರು. ಒಂದು ತಿಂಗಳಿಂದ ಹಾಸಿಗೆ ಹಿಡಿದಿದ್ದ ಅವರನ್ನು ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಸೋಮವಾರ ಚಿಕಿತ್ಸೆ ಫಲಿಸದೆ ಅವರು ನಿಧನರಾಗಿದ್ದಾರೆ. ಪದ್ಮಾವತಿಯವರ ಅಂತ್ಯಕ್ರಿಯೆ ಧಾರ್ಮಿಕ ವಿಧಿವಿಧಾನದಂತೆ ಮಂಗಳವಾರ(ಏ.4) ಹುಲಕೋಟಿ ಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಸಲು ಕುಟುಂಬಸ್ಥರು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ–571404 ದೂ: 222026 (ಕ) ಫ್ಯಾಕ್ಸ್: 08232–222026, ಮೊ: 8762960325. E-Mail : mandya@mysurumithra.com

ಅಕ್ರಮ ಕಲ್ಲು ಗಣಿಗಾರಿಕೆ ಸ್ಥಗಿತಕ್ಕೆ ಆಗ್ರಹಿಸಿ ಪ್ರತಿಭಟನೆ



ಪಾಂಡವಪುರ,ಏ.4– ಕನಗನಮರಡಿ ಹೊರವಲಯದಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಒತ್ತಾಯಿಸಿ ತಾಲೂಕಿನ ಕನಗನಮರಡಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದ ಗ್ರಾಮಸ್ಥರು ರಸ್ತೆ ತಡೆದು ಗಣಿ ಮಾಲೀಕರು ಹಾಗೂ ಪೊಲೀಸ್ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ಕನಗನಮರಡಿ ಗ್ರಾಮದ ಹೊರವಲಯದ ಅರಣ್ಯ ಪ್ರದೇಶದ ಪಕ್ಕದಲ್ಲಿ ಕಲ್ಲು ಗಣಿಗಾರಿಕೆ ಅಕ್ರಮವಾಗಿ ನಡೆಯುತ್ತಿದೆ. ಇಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಜನರಿಗೆ ಅನಾನುಕೂಲದ ಜತೆಗೆ ಪ್ರಾಕೃತಿಕ ಸಂಪತ್ತು ಲೂಟಿಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಣಿ ಮಾಲೀಕರು ಕಲ್ಲು ಸಿಡಿಸಲು ಮೈನ್ಸ್ ರಿಗ್ ಬೋರ್ ಬ್ಲಾಸ್ಟಿಂಗ್ ಮಾಡುತ್ತಿದ್ದಾರೆ. ಇದರಿಂದಾಗಿ ಮನೆಗಳು, ದೇವಸ್ಥಾನ ಗೋಡೆಗಳು ಬಿರುಕು ಬಿಡುತ್ತಿವೆ. ಜತೆಯಲ್ಲಿ ಗ್ರಾಮದಲ್ಲಿ ವಿಶ್ವೇಶ್ವರಯ್ಯ ನಾಲೆಯ ಅಕ್ವಡೆಟ್ (ನಾಲೆಯ ಮೇಲ್ಸೇತುವೆ) ಹೋಗಿದೆ. ಬ್ಲಾಸ್ಟಿಂಗ್ ಶಬ್ಧಕ್ಕೆ ನಾಲೆಗೂ ಸಹ ಅಪಾಯ ಎದುರಾಗಿದೆ. ಇಲ್ಲಿಗೆ ಸಮೀಪವೇ ವಿಸಿ ನಾಲೆಯ ಸುರಂಗವಿದ್ದು ಅದಕ್ಕೂ ಸಹ ಅಪಾಯ ಎದುರಾಗಿದೆ. ರಾತ್ರಿಯ ವೇಳೆಯಲ್ಲಿ ಬ್ಲಾಸ್ಟಿಂಗ್ ಮಾಡುವುದರಿಂದ ಮನೆಯಲ್ಲಿ ಮಲಗುವ ಮಕ್ಕಳು, ವೃದ್ಧರು ಬೆಚ್ಚಿ ಬೀಳುತ್ತಿದ್ದಾರೆ ಎಂದು ಆರೋಪಿಸಿದರು.

ಕಲ್ಲು ಗಣಿಗಾರಿಕೆಯ ಜತೆಗೆ ಕ್ರಷರ್‌ಗಳಿಂದ ಧೂಳು ಹಾಗೂ ಶಬ್ದ ಹೆಚ್ಚಾಗಿದೆ. ಕಲ್ಲಿನ ಧೂಳು ಜಮೀನು ಹಾಗೂ ಕೆರೆಕಟ್ಟೆಗಳ ಮೇಲೆ ಬೀಳುತ್ತಿರುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ. ಜತೆಗೆ ಜನರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತಿದೆ. ಇನ್ನೂ ಜಾನುವಾರುಗಳ ಮೇವಿಗೂ ಸಾಕಷ್ಟು ಅನಾನುಕೂಲ ಉಂಟಾಗಿದೆ ಎಂದು ಕಿಡಿಕಾರಿದರು.

ಪೊಲೀಸ್ ಅಧಿಕಾರಿಗಳ ವಿರುದ್ಧ ಆಕ್ರೋಶ: ತಾಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಭಾಕರ್ ಅವರು ಗಣಿ ಮಾಲೀಕ ಅಶೋಕ್ ಪಾಟೀಲ್ ಕೈಬೊಂಬೆಯಂತೆ ಕುಣಿಯುತ್ತಿದ್ದಾರೆ. ಗ್ರಾಮದ ರೈತರು ಕಲ್ಲು ಗಣಿಗಾರಿಕೆಯಿಂದ ತೊಂದರೆಯಾಗುತ್ತಿದೆ ಎಂದು ಕ್ರಷರ್ ಬಳಿ ಹೋಗಿ ಕೇಳಿದ್ದಕ್ಕೆ ಗಣಿ ಮಾಲೀಕ ಅವರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ. ಅದಕ್ಕೆ ಪೊಲೀಸರು ರೈತರನ್ನು ಬಂಧಿಸಲು ಬಂದಿದ್ದಾರೆ. ಅದೇ ರೈತರು, ಸ್ಥಳೀಯರು, ಗ್ರಾಮಸ್ಥರು ಗಣಿ ಮಾಲೀಕನ ವಿರುದ್ಧ ದೂರು ನೀಡಿದರೆ ನಮ್ಮ ದೂರನ್ನು ಸ್ವೀಕರಿಸೋದೆ ಇಲ್ಲ. ಗಣಿ ಮಾಲೀಕರು ಹೇಳಿದ ಹಾಗೆ ಸರ್ಕಲ್ ಇನ್ಸ್‌ಪೆಕ್ಟರ್ ಕುಣಿಯುತ್ತಿದ್ದಾರೆ. ಪೊಲೀಸ್ ವ್ಯವಸ್ಥೆಯೇ ಹೀಗಾದರೆ ಹೇಗೆ ಎಂದು ಆಕ್ರೋಶ ಹೊರಹಾಕಿದರು. ಅವರು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಪೊಲೀಸ್ ಠಾಣೆಯ ಎದುರೇ ಪ್ರತಿಭಟನೆ ನಡೆಸಬೇಕಾಗುತ್ತಿದೆ ಎಂದು ಎಚ್ಚರಿಕೆ ನೀಡಿದರು.

ಇಲ್ಲಿನ ಕಲ್ಲುಗಣಿಗಾರಿಕೆ ಸ್ಥಗಿತಗೊಳಿಸುವಂತೆ ಜಿಲ್ಲಾಧಿಕಾರಿ, ಎಸಿ, ತಹಸೀಲ್ದಾರ್, ಗಣಿ ಅಧಿಕಾರಿಗಳಿಗೆ ಮನವಿ ನೀಡಿದ್ದೇವೆ. ಹೀಗಿದ್ದರೂ ಸಹ ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲ. ಹೀಗೆಯೇ ನಮ್ಮ ಬದುಕಿಗೆ ತೊಂದರೆಯಾಗುತ್ತಿದ್ದರೆ ಇಡೀ ಗ್ರಾಮಸ್ಥರೆಲ್ಲ ಮುಂದಿನ ದಿನಗಳಲ್ಲಿ ಉಗ್ರವಾದ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಮೈಷುಗರ್ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಮುಖಂಡರಾದ ಕೃಷ್ಣಮೂರ್ತಿ, ಜೆ.ಗಿರೀಶ್, ಚಿಕ್ಕಣ್ಣೇಗೌಡ, ಉಮೇಶ್, ಅಂಕೇಗೌಡ, ಶಂಕರೇಗೌಡ, ನಾಗರಾಜು, ಸುರೇಶ್, ಗುರುವಯ್ಯ, ತಮ್ಮಣ್ಣ ಸೇರಿದಂತೆ ಹಲವಾರು ಇದ್ದರು.

ಸಂತೆಕಸಲಗೆರೆಯಲ್ಲಿ ಭೂಮಿ ಸಿದ್ದೇಶ್ವರ ಜಾತ್ರೆ



ಮಂಡ್ಯ,ಏ.4(ಮೋಹನ್‌ರಾಜ್)– ಮಂಡ್ಯ ಜಿಲ್ಲೆಯಲ್ಲಿ ಹಲವು ದಶಕಗಳಿಂದ ನಡೆದುಕೊಂಡು ಬಂದಿರುವ ಐತಿಹಾಸಿಕ ಸಂತೆಕಸಲಗೆರೆಯ ಭೂಮಿಸಿದ್ದೇಶ್ವರ ಸ್ವಾಮಿಯ ಅಟ್ಟಣ್ಣುವ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂತೆಕಸಲಗೆರೆ ಗ್ರಾಮದಲ್ಲಿರುವ ಭೂಮಿಸಿದ್ದೇಶ್ವರ ದೇಗುಲದ ಬಳಿ ಅಟ್ಟಣ್ಣುವ ಜಾತ್ರೆಗೆ ಸುತ್ತಮುತ್ತಲ ನೂರಾರು ಗ್ರಾಮದಿಂದ ಸಾವಿರಾರು ಮಂದಿ ಆಗಮಿಸಿ, ಸ್ಥಳದಲ್ಲೇ ಕುಟುಂಬಸ್ಥರ ಸಮೇತ ಅಡುಗೆ ಸಿದ್ಧಪಡಿಸಿ, ದೇವರಿಗೆ ಅರ್ಪಿಸಿ ಬಳಿಕ ಊಟ ಮಾಡುವುದು ಈ ಜಾತ್ರೆಯ ವಿಶೇಷವಾಗಿದೆ.

ಇನ್ನು ಭೂಮಿಸಿದ್ದೇಶ್ವರನ ದರ್ಶನ ಪಡೆಯಲು ಸಾವಿರಾರು ಜನ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ಜಾತ್ರಾ ಮಹೋತ್ಸವದ ಅಂಗವಾಗಿ ವಿಶೇಷ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರೆ, ವ್ಯಾಪಾರ ವಹಿವಾಟು ಸಹ ಜೋರಾಗಿತ್ತು.



ಅಖಿಲ ಕರ್ನಾಟಕ ಪರಿಸರ ಜಾಗೃತಿ ವೇದಿಕೆ, ವೆಂಕಟೇಶ್ವರ ದೇವಾಲಯ ಟ್ರಸ್ಟ್ ಸಹಯೋಗದಲ್ಲಿ ಭಾರತೀನಗರದ ಮಾರಿಗುಡಿ ಹಾಗೂ ವೆಂಕಟೇಶ್ವರ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಅಲಂಕಾರಿಕ ಗಿಡ ನೆಡುವ ಕಾರ್ಯಕ್ರಮಕ್ಕೆ ಪರಿಸರ ಜಾಗೃತಿ ವೇದಿಕೆ ಅಧ್ಯಕ್ಷ ಅಣ್ಣೂರು ಸತೀಶ್ ಚಾಲನೆ ನೀಡಿದರು. ಇದೇ ವೇಳೆ ವೇದಿಕೆಯ ಪದಾಧಿಕಾರಿಗಳಾದ ಕರಡಕೆರೆ ಯೋಗೇಶ, ತೊರೆಬೊಮ್ಮನಹಳ್ಳಿ ವೆಂಕಟೇಶ, ರಘು ವೆಂಕಟೇಗೌಡ, ಸಬ್ಬನಹಳ್ಳಿ ಕುಮಾರ, ಆಲಭುಜನಹಳ್ಳಿ ಯೋಗೇಶ, ಅಂಬರಹಳ್ಳಿ ಆನಂದ, ತೊರೆಬೊಮ್ಮನಹಳ್ಳಿ ಯೋಗ, ರಾಜಣ್ಣ, ವೆಂಕಟೇಶ್ವರ ದೇವಾಲಯ ಟ್ರಸ್ಟ್ ಅಧ್ಯಕ್ಷ ಪೂಜಾರಿ ವೆಂಕಟೇಗೌಡ, ಕಾರ್ಯಾಧ್ಯಕ್ಷ ವೆಂಕಟೇಶ್, ರವಿ ಇತರರಿದ್ದರು.

ಇಂದು ಡಾ.ಬಾಬೂಜಿ ಜನ್ಮದಿನಾಚರಣೆ



ಮಂಡ್ಯ,ಏ.4– ಏ.5ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದ ಉದ್ಯಾನವನದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ ರಾಂರ 115ನೇ ಜನ್ಮದಿನವನ್ನು ಆಚರಿಸಲಾಗುವುದು.

ಡಾ. ಬಾಬು ಜಗಜೀವನರಾಂ ಪ್ರತಿಮೆಗೆ ಬೆಳಗ್ಗೆ 9.30 ಗಂಟೆಗೆ ಮಾಲಾರ್ಪಣೆ ಮಾಡಿ, ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಿಂದ ಡಾ.ಬಿ.ಆರ್ ಅಂಬೇಡ್ಕರ್ ಭವನದವರೆಗೆ ಮೆರವಣಿಗೆ ತೆರಳಿ ಬೆಳಗ್ಗೆ 10:45 ಗಂಟೆಗೆ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ದೇವಾಲಯಗಳು ನೆಮ್ಮದಿ ಕೇಂದ್ರಗಳು



ಮಂಡ್ಯ,ಏ.4(ಮೋಹನ್‌ರಾಜ್)– ದೇವಾಲಯಗಳು ನಮ್ಮ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ನೀಡುವ ತಾಣಗಳು ಎಂದು ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಹೇಳಿದರು.

ತಾಲೂಕಿನ ರಾಗಿಮುದ್ದನಹಳ್ಳಿ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿ ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಶ್ರೀ ಮಾರಮ್ಮ ಮತ್ತು ಮಂಚಮ್ಮ ದೇವಿ ದೇವಾಲಯಗಳ ನಿರ್ಮಾಣ ಕಾಮಗಾರಿ ವೀಕ್ಷಿಸಿದರು. ಈ ವೇಳೆ ದೇವಾಲಯ ಅಭಿವೃದ್ಧಿ ಕಾಮಗಾರಿಗೆ ಆರ್ಥಿಕ ನೆರವು ನೀಡಿದ ಸಚ್ಚಿದಾನಂದ, ಒತ್ತಡದ ಜೀವನ ಸಾಗಿಸುತ್ತಿರುವ ನಮ್ಮೆಲ್ಲರ ಮನಸ್ಸಿಗೆ ಶಾಂತಿ, ನೆಮ್ಮದಿ ಸಿಗುವ ಜಾಗ ಅಂದರೆ ದೇವಸ್ಥಾನ. ಹಾಗಾಗಿ ದೇವಾಲಯ ಅಭಿವೃದ್ಧಿ ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಗ್ರಾಮದ ಶಂಭುಲಿಂಗೇಶ್ವರ ಸಮುದಾಯದ ಭವನದ ಮೇಲ್ಛಾವಣಿ ನಿರ್ಮಾಣಕ್ಕೆ ಸಹಕರಿಸುವಂತೆ ಮನವಿ ಮಾಡಿದ ಗ್ರಾಮಸ್ಥರಿಗೆ, ಸಂಸದರಾದ ಸುಮಲತಾ ಅಂಬರೀಶ್ ರವರ ಬಳಿ ಚರ್ಚಿಸಿ ಸಂಸದರ ಅನುದಾನ 2 ಲಕ್ಷ ರೂ. ಹಣ ಕೊಡಿಸುವ ಭರವಸೆ ನೀಡಿದರು. ಈ ವೇಳೆ ದೇವಾಲಯದ ಗುಡ್ಡಪ್ಪ, ಜಿ.ಪಂ ಮಾಜಿ ಸದಸ್ಯ ತೂಬಿನಕೆರೆ ರಾಮಲಿಂಗಯ್ಯ, ಗ್ರಾ.ಪಂ ಸದಸ್ಯರಾದ ರಮೇಶ್, ಲಿಂಗಾಚಾರಿ, ಗ್ರಾ.ಪಂ ಮಾಜಿ ಸದಸ್ಯರಾದ ಪುರುಷೋತ್ತಮ್, ಯಜಮಾನರುಗಳಾದ ನಿಂಗೇಗೌಡ, ಶಿವಣ್ಣ, ಸಿದ್ದಣ್ಣ, ನಿಂಗಣ್ಣ, ಬಾಬು, ಕಾರ್ತಿಕ್ ಸೇರಿದಂತೆ ಸುಭಾಷ್ ಚಂದ್ರ ಬೋಸ್ ಯುವಕ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಪಾಲಹಳ್ಳಿ ಗ್ರಾಪಂ ಉಪಾಧ್ಯಕ್ಷರ ಆಯ್ಕೆ

ಶ್ರೀರಂಗಪಟ್ಟಣ, ಏ.4(ಮಂಜು)– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ನವೀನ್ ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ಹಿಂದುಳಿದ ವರ್ಗ "ಅ" ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ 1ನೇ ವಾರ್ಡ್ ನವೀನ್ ಕುಮಾರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಾಪಂ ಇಓ ನಿಶಾಂತ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಕಲಾ, ಪಿಡಿಓ ರವಿ , ಕಾರ್ಯದರ್ಶಿ ಅಶ್ವಿನಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಕುಮಾರ್, ಸದಸ್ಯರಾದ ಪ್ರಕಾಶ್, ದಿನೇಶ್, ವಿಮಲ,ಅಕ್ಷತಾ, ಲೋಕೇಶ್, ಆದರ್ಶ್, ಧನಲಕ್ಷ್ಮಿ , ಆಶಾ, ರಾಜೇಶ್ವರಿ, ರಾಘು, ರಾಮಕೃಷ್ಣ , ಗ್ರಾಮದ ರಮೇಶ್ ಬಾಬು, ಶಂಕರೇಗೌಡ, ನಾಗರಾಜು, ಪ್ರಶಾಂತ್, ಕೃಷ್ಣಪ್ಪ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಪಾಂಡವಪುರದಲ್ಲಿ ಬೈಕ್‌ಗಳ ಡಿಕ್ಕಿ: ಓರ್ವ ಸಾವು



ಪಾಂಡವಪುರ, ಏ.4– ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಓರ್ವ ಸ್ಥಳದಲ್ಲೇ ಮೃತಪಟ್ಟು, ಆರು ಮಂದಿ ಯುವಕರು ತೀವ್ರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ರಾತ್ರಿ ಸಂಭವಿಸಿದೆ.

ಮೈಸೂರಿನ ನಂಜುಮಳಿಗೆ ನಿವಾಸಿ ರವಿ ಮೃತಪಟ್ಟ ಯುವಕ. ಉಳಿದಂತೆ ಪ್ರಜ್ವಲ್, ಭಾಸ್ಕರ್, ಗಿರೀಶ, ಶರತ್, ಹರೀಶ್ ಹಾಗೂ ಶಂಭು ಎಂಬುವವರು ತೀವ್ರವಾಗಿ ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಘಟನೆ ವಿವರ: ಮೃತ ರವಿ ತನ್ನ ಇಬ್ಬರು ಸ್ನೇಹಿತರೊಂದಿಗೆ ಬೈಕ್‌ನಲ್ಲಿ ಪಾಂಡವಪುರ ಪಟ್ಟಣದಿಂದ ಮೈಸೂರು ಕಡೆಗೆ ತೆರಳುತ್ತಿದ್ದ ವೇಳೆ ರೈಲ್ವೆ ನಿಲ್ದಾಣದಿಂದ ಪಾಂಡವಪುರಕ್ಕೆ ಆಗಮಿಸುತ್ತಿದ್ದ ಎರಡು ಬೈಕ್‌ಗಳ ನಡುವೆ ತಾಲೂಕಿನ ಹರಳಹಳ್ಳಿ ಬಳಿ ಮುಖಾಮುಖಿ ಡಿಕ್ಕಿ ಸಂಭವಿಸಿದೆ ಎನ್ನಲಾಗಿದೆ. ಡಿಕ್ಕಿ ರಭಸಕ್ಕೆ ಮೈಸೂರು ಕಡೆಗೆ ತೆರಳುತ್ತಿದ್ದ ರವಿ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದು, ಇತರೆ ಆರು ಯುವಕರು ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಪೈಕಿ ಓರ್ವನ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದು ಬಂದಿದೆ.

ಪಾಂಡವಪುರ ಪಟ್ಟಣದ ಉಪವಿಭಾಗೀಯ ಆಸ್ಪತ್ರೆಯಲ್ಲಿ ಮೃತ ಯುವಕನ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವ ಒಪ್ಪಿಸಲಾಗಿದೆ. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಬುಲೆನ್ಸ್‌ಗಾಗಿ ಗಂಟೆಗಳ ಕಾಲ ಕಾಯ್ದರು: ಅಪಘಾತ ಸಂಭವಿಸಿ ಗಾಯಗೊಂಡ ಎಲ್ಲರಿಗೂ ಪಾಂಡವಪುರ ಪಟ್ಟಣದ ಉಪವಿಭಾಗೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಎಲ್ಲರೂ ಮೂಳೆ ಮುರಿತಕ್ಕೆ ಒಳಗಾಗಿ ಗಂಭೀರವಾಗಿ ಗಾಯಗೊಂಡಿದ್ದ ಪರಿಣಾಮ ಹೆಚ್ಚಿನ ಚಿಕಿತ್ಸೆಗಾಗಿ ಎಲ್ಲರನ್ನೂ ತಕ್ಷಣ ಮೈಸೂರಿಗೆ ರವಾನಿಸಬೇಕಾಗಿತ್ತು. ಈ ವೇಳೆ ಆಂಬುಲೆನ್ಸ್‌ಗೆ ಕರೆ ಮಾಡಿದರೂ ಸುಮಾರು 45 ನಿಮಿಷಗಳ ಕಾಲ ಯಾವುದೇ ಆಂಬುಲೆನ್ಸ್ ಲಭ್ಯವಿರಲಿಲ್ಲ. ಆಸ್ಪತ್ರೆ ಅವರಣದಲ್ಲಿ ಆಂಬುಲೆನ್ಸ್ ಲಭ್ಯವಿತ್ತಾದರೂ ಅದಕ್ಕೆ ಚಾಲಕ ಇರಲಿಲ್ಲ. ಹೀಗಾಗಿ ಸುಮಾರು 45 ನಿಮಿಷಗಳ ತಡವಾಗಿ ಆಗಮಿಸಿದ ಆಂಬುಲೆನ್ಸ್‌ಗಳಲ್ಲಿ ಗಾಯಾಳುಗಳನ್ನು ಮೈಸೂರಿಗೆ ರವಾನಿಸಲಾಯಿತು.

ಕಾಂಗ್ರೆಸ್ ಸದಸ್ಯತ್ವ ನೋಂದಣಿ ಪೂರ್ವಭಾವಿ ಸಭೆ



ಕೆ.ಆರ್.ಪೇಟೆ,ಏ.4(ಶ್ರೀನಿವಾಸ್)– ತಾಲೂಕಿನ ಆಲೇನಹಳ್ಳಿ ಗ್ರಾಮದ ಶ್ರೀ ಶಂಭುಲಿಂಗೇಶ್ವರ ದೇವಾಲಯದ ಉದ್ಘಾಟನಾ ಸಮಾರಂಭ ಹಾಗೂ ಕಾಂಗ್ರೆಸ್ ಸದಸ್ಯತ್ವ ನೋಂದಣಿ ವೀಕ್ಷಣಾ ಕಾರ್ಯಕ್ರಮಕ್ಕೆ ಏ.6ರಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಇಂದು ಕೆ.ಆರ್.ಪೇಟೆ ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮುಖಂಡರು ಪೂರ್ವಭಾವಿ ಸಭೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ.ಡಿ. ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಮಾತನಾಡಿದ ಅವರು ಕೆಪಿಸಿಸಿ ಅಧ್ಯಕ್ಷ ಬಳಿಕ ಇದೇ ಮೊದಲ ಬಾರಿಗೆ ಕೆ.ಆರ್. ಪೇಟೆ ತಾಲೂಕಿಗೆ ಆಗಮಿಸುತ್ತಿರುವ ಡಿ.ಕೆ. ಶಿವಕುಮಾರ್ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲು ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆತರಬೇಕು. ಒಬ್ಬ ಮುಖಂಡರು ಕನಿಷ್ಠ 10 ರಿಂದ 20 ಮಂದಿ ಕಾರ್ಯಕರ್ತರನ್ನು ಕರೆತರುವ ಮೂಲಕ ಕಾರ್ಯಕ್ರಮಕ್ಕೆ ಸಾವಿರಾರು ಮಂದಿ ಕಾರ್ಯಕರ್ತರನ್ನು ಪಕ್ಷದ ನೋಂದಣಿ ವೀಕ್ಷಣಾ ಸಮಾರಂಭಕ್ಕೆ ಸೇರಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜೊತೆಗೆ ನೋಂದಣಿ ಅಭಿಯಾನವನ್ನು ಏ.15ರವರೆಗೆ ವಿಸ್ತರಣೆ ಮಾಡಲಾಗಿದೆ. ಯಾವ ಗ್ರಾಮದಲ್ಲಿ ಕಡಿಮೆ ನೊಂದಣಿ ಆಗಿದೆ ಆ ಭಾಗದ ಮುಖಂಡರು ಕೂಡಲೇ ಕಾರ್ಯ ಪ್ರವೃತ್ತರಾಗಿ ಹೆಚ್ಚು ನೋಂದಣಿ ಮಾಡಿಸಬೇಕು. ಈ ಮೂಲಕ ಕಾಂಗ್ರೆಸ್ ಶಕ್ತಿಯನ್ನು ಹೆಚ್ಚಿಸಲು ಮುಂದಾಗಬೇಕು. ಹೆಚ್ಚು ನೋಂದಣಿ ಆದರೆ ಪಕ್ಷವು ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಏ.6 ರಂದು ಬೆಳಗ್ಗೆ 10 ಗಂಟೆಗೆ ಆನೆಗೊಳ ಗಡಿಯಿಂದ ಡಿ.ಕೆ. ಶಿವಕುಮಾರ್ ಅವರು ತಾಲೂಕಿಗೆ ಪ್ರವೇಶಿಸಲಿದ್ದಾರೆ. ಹಾಗಾಗಿ ಅವರನ್ನು ಸ್ವಾಗತಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕು. ನಂತರ ಆಲೇಡನಹಳ್ಳಿ ದೇವಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಿಕ್ಕೇರಿಯಲ್ಲಿ ಕಿಕ್ಕೇರಿ ಸುರೇಶ್ ನಿವಾಸದಲ್ಲಿ ಉಪಾಹಾರ ಸೇವಿಸಿ, ಬಳಿಕ ಕೆ.ಆರ್.ಪೇಟೆ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ನಡೆಯುವ ಪಕ್ಷದ ನೋಂದಣಿ ಕಾರ್ಯಕ್ರಮ ಮಾಡುವರು ಎಂದು ತಿಳಿಸಿದರು.

ಸಭೆಯಲ್ಲಿ ಮಾಜಿ ಶಾಸಕರುಗಳಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ ಕುಮಾರ್, ಕೆಯುಐಡಿಎಫ್‌ಸಿ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಪಿ.ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್ ಸೇರಿದಂತೆ ಹಲವಾರು ಮಂದಿ ಮುಖಂಡರು ಭಾಗವಹಿಸಿದ್ದರು.

ಮೈಸೂರು ನಗರ ಸುದ್ದಿಗಳು..

ಸಂಗೀತ ಪ್ರಿಯರ ರಂಜಿಸುತ್ತಿರುವ ಯುಗಾದಿ ಸಂಗೀತೋತ್ಸವ



ಮೈಸೂರು, ಏ.4(ಎಂಕೆ)– ಬೇಸಿಗೆ ಬೇಗೆಗೆ ಬಸವಳಿದವರ ಮನಕೆ ತಂಪೆರೆದ ಸಂಗೀತ ನಾದ–ನಿನಾದ...

ಮೈಸೂರು ಅರಮನೆ ಆವರಣದಲ್ಲಿ ಆಯೋಜಿಸಿರುವ 'ಯುಗಾದಿ ಸಂಗೀತೋತ್ಸವ'ದಲ್ಲಿ ಡಾ.ಎಸ್.ವಿ ಸಹನಾ ಅವರ ವೀಣಾ ವಾದನ ಹಾಗೂ ವಿದ್ವಾನ್ ಶಿವಶಂಕರಸ್ವಾಮಿ ಮತ್ತು ತಂಡ ತಾಳವಾದ್ಯಗಳ ಕಚೇರಿ ಸಂಗೀತ ಪ್ರಿಯರಿಗೆ ರಸದೌತಣ ನೀಡಿತು.

ಹಂಸಧ್ವನಿ ರಾಗದಲ್ಲಿ 'ವಾತಾಪಿ ಗಣಪತಿ', ರಾಧಾ–ಕಮಾಚ್ ರಾಗದಲ್ಲಿ 'ಬ್ರೋಚೆವಾರೆವರುರಾ', ಕಲ್ಯಾಣಿ ರಾಗದಲ್ಲಿ 'ಅಮ್ಮ–ರಾವಮ್ಮ', ಕಾಫಿ ರಾಗದಲ್ಲಿ 'ಜಗದೋದ್ಧಾರನ' ಹಾಗೂ ಹಾಗ ರಾಗದಲ್ಲಿ 'ತಿಲ್ಲಾನ' ನುಡಿಸುವ ಮೂಲಕ ಡಾ.ಡಾ.ಎಸ್.ವಿ ಸಹನಾ ಸಂಗೀತದ ತಂಪೆರೆದರು. ಇವರಿಗೆ ಮೃದಂಗ ವಾದನದಲ್ಲಿ ವಿದ್ವಾನ್ ಹೆಚ್.ಎಸ್.ಸುಧೀಂದ್ರ, ಘಟಂನಲ್ಲಿ ವಿದ್ವಾನ್ ಜಿ.ಎಸ್.ರಾಮಾನುಜಂ ಉತ್ತಮ ಸಹಕಾರ ನೀಡಿದರು.

ತಾಳ ವಾದ್ಯಗಳ ಕಚೇರಿ: ವಿದ್ವಾನ್ ಶಿವಶಂಕರಸ್ವಾಮಿ ನೇತೃತ್ವದಲ್ಲಿ ವಿವಿಧ ವಾದ್ಯ ಪರಿಕರಗಳನ್ನೊಳಗೊಂಡ 25 ಮಂದಿ ಕಲಾವಿದರಿಂದ ತಾಳವಾದ್ಯಗಳ ಕಚೇರಿ ನಡೆಯಿತು. ಗಂಟೆಗೂ ಹೆಚ್ಚು ಕಾಲ ತಾಳ ವಾದ್ಯಗಳ ನಾದ ಕಲಾಭಿಮಾನಿಗಳನ್ನು ರಂಜಿಸಿತು.

ಕೋರ್ಟ್ ಆವರಣದಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನ

ಮೈಸೂರು, ಏ.4(ಎಂಕೆ)– ಕೋರ್ಟ್ ಆವರಣದಲ್ಲಿಯೇ ವ್ಯಕ್ತಿಯೋರ್ವ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಮೈಸೂರಿನಲ್ಲಿ ನಡೆದಿದೆ.

ನಗರದ ಜಯನಗರ ಕೋರ್ಟ್‌ಗೆ ಆಗಮಿಸಿದ್ದ ವಿದ್ಯಾರಣ್ಯಪುರಂ ನಿವಾಸಿ ಪ್ರಕಾಶ್ ಎಂಬಾತ ಕುಟುಂಬದ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿಲ್ಲ ಎಂದು ಬೇಸತ್ತು ಕೋರ್ಟ್ ಆವರಣದಲ್ಲೇ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಕೂಡಲೇ ಪೊಲೀಸರು ಆತನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ.

ಆಸ್ತಿ ವಿಚಾರಕ್ಕೆ ಪ್ರಕಾಶ್‌ನೊಂದಿಗೆ ಆತನ ತಾಯಿ ಹಾಗೂ ಸಹೋದರಿಯರು ಆಗಾಗ ಜಗಳವಾಡುತ್ತಿದ್ದರು ಎನ್ನಲಾಗಿದೆ. ಈ ಸಂಬಂಧ 2011ರಲ್ಲಿ ಕೋರ್ಟ್ ಮೊರೆ ಹೋಗಿದ್ದರು, ಆತನ ಸಹೋದರಿ ಮತ್ತು ತಾಯಿ ವಿಚಾರಣೆಗೆ ಹಾಜರಾಗದೆ ಪ್ರಕರಣ ಇತ್ಯರ್ಥವಾಗಿರಲಿಲ್ಲ ಎಂದು ಹೇಳಲಾಗಿದೆ. ಇದರಿಂದ ಬೇಸತ್ತಿದ್ದ ಪ್ರಕಾಶ್ ಸೋಮವಾರ ಇದ್ದ ವಿಚಾರಣೆ ವೇಳೆ ನ್ಯಾಯ ಕೊಡಿಸುವಂತೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂದು ತಿಳಿದು ಬಂದಿದೆ.

ಮಾಜಿ ಸೈನಿಕರಿಗೆ ಜಮೀನಿನ ಬದಲು ನಿವೇಶನ: ಅರ್ಜಿ ಆಹ್ವಾನ

ಮೈಸೂರು, ಏ.4– ಮಾಜಿ ಸೈನಿಕರು ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಆಯಾ ಪ್ರಾಧಿಕಾರದ ಹಂತದಲ್ಲಿ ಮನವಿಯನ್ನು ಸಲ್ಲಿಸಿದ್ದು, ಸೇನಾ ನಿವೃತ್ತಿ ಪುಸ್ತಕದಲ್ಲಿ ನಮೂದಿಸಿರುವ ತಾಲೂಕಿನಲ್ಲಿ ಭೂ–ಲಭ್ಯತೆ ಇಲ್ಲದಿದ್ದಲ್ಲಿ ಅವರ ನೆರೆಹೊರೆಯ ತಾಲೂಕಿನಲ್ಲಿ ಅಥವಾ ಜಿಲ್ಲೆಗಳಲ್ಲಿ ಭೂ–ಲಭ್ಯತೆಯ ಮೇರೆಗೆ ಮಂಜೂರಾತಿಗಾಗಿ ಪರಿಗಣಿಸಬಹುದಾಗಿದೆ. ಭೂ–ಲಭ್ಯತೆ ಇಲ್ಲದಿದ್ದಲ್ಲಿ ಸರ್ಕಾರಿ ಜಮೀನಿನ ಬದಲಿಗೆ ಉಚಿತವಾಗಿ ನಿವೇಶನ ಮಂಜೂರು ಮಾಡುವ ಸಲುವಾಗಿ ಗ್ರಾಮೀಣ ಪ್ರದೇಶದಲ್ಲಿ 2400 ಚದರ ಅಡಿಗಳ ಮತ್ತು ಪಟ್ಟಣ ಪ್ರದೇಶದಲ್ಲಿ 1200 ಚದರ ಅಡಿಗಳ ನಿವೇಶನವನ್ನು ಮಂಜೂರು ಮಾಡಲು ರಾಜ್ಯ ಸರ್ಕಾರದ ವಸತಿ ಯೋಜನೆಯ ಅಡಿಯಲ್ಲಿ ಅಥವಾ ವಿಶೇಷ ಯೋಜನೆ ರೂಪಿಸಿ ಈ ಅಳತೆಯ ನಿವೇಶನಗಳನ್ನು ಮಂಜೂರು ಮಾಡಲು ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಅರ್ಹ ಮಾಜಿ ಸೈನಿಕರ ಅಂಕಿ–ಸಂಖ್ಯೆಗಳ ಪಟ್ಟಿಯನ್ನು ತಯಾರಿಸಿ ಜಿಲ್ಲಾಡಳಿತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದ್ದು, ಮೈಸೂರು ಮೂಲ ನಿವಾಸಿಗಳಾದ ಅರ್ಹ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರು ಸ್ವ–ಇಚ್ಛೆಯ ಮೇರೆಗೆ ಜಮೀನಿನ ಬದಲಾಗಿ ನಿವೇಶನವನ್ನು ಪಡೆಯಲು ಶುಲ್ಕ ರಹಿತ ಅರ್ಜಿ ನಮೂನೆಯನ್ನು ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪನರ್ವಸತಿ ಇಲಾಖೆಯ ಕಾರ್ಯಾಲಯದಿಂದ ಪಡೆದು ಭರ್ತಿ ಮಾಡಿ ಗುರುತಿನ ಚೀಟಿ ಮತ್ತು ಸೇನೆಯ ನಿವೃತ್ತಿ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ದ್ವಿಪ್ರತಿಯಲ್ಲಿ ಲಗತ್ತಿಸಿ ಮೇ 15ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪನರ್ವಸತಿ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯಕ್ಕೆ ಸಲ್ಲಿಸಬೇಕೆಂದು ಸೈನಿಕ ಕಲ್ಯಾಣ ಮತ್ತು ಪನರ್ವಸತಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಏ.4– ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸೇರಿದ ಪಾರ್ಕ್‌ನಲ್ಲಿ ಒಳಭಾಗದಲ್ಲಿ ಸುಮಾರು 60 ರಿಂದ 70 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಕಲಂ–174ರ ಸಿಆರ್‌ಪಿಸಿ ಅನ್ವಯ ಪ್ರಕರಣ ದಾಖಲಾಗಿದೆ.

ಮೃತರ ಚಹರೆ ಇಂತಿದೆ: ಸುಮಾರು 60 ರಿಂದ 70 ವರ್ಷದ ಮೃತ ವ್ಯಕ್ತಿಯು ಸಿಮೆಂಟ್ ಕಲರ್ ಡಿಸೈನ್ ಶರ್ಟ್, ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದು, ಯಾವುದೋ ಖಾಯಿಲೆಯಿಂದ ಬಳಲಿ ತೀರಿಹೋಗಿರುವಂತೆ ಕಂಡುಬಂದಿದೆ.

ಮೃತರ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಭೇಟಿ ನೀಡಬಹುದು ಅಥವಾ ದೂರವಾಣಿ ಸಂಖ್ಯೆ: 0821–2520040, 0821–2444800, 0821–228383 ಅಥವಾ nanjangudtownmys@ksp.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದು ಎಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ, ನಾಡಿದ್ದು ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಏ.4 – ತುರ್ತು ನಿರ್ವಹಣೆ ಕಾಮಗಾರಿ ನಿಮಿತ್ತ ವಾರ್ಡ್ ನಂ. 1ರಿಂದ 7, 20, 23, 38, 42ರಿಂದ 45, 47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನ ಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1,2,3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬೆಮೆಲ್, ಯಾದವಗಿರಿ, ಬನ್ನಿಮಂಟಪ ಎ,ಬಿ,ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂ ನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್‌ಆರ್ ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾ ನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ವಿವಿ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.

ಕೋವಿಡ್–19: ರಾಜ್ಯದ 30 ಜಿಲ್ಲೆಗಳ ಪೈಕಿ 28 ಜಿಲ್ಲೆಗಳಲ್ಲಿ ಶೂನ್ಯ ಪ್ರಕರಣ ದಾಖಲು

ಬೆಂಗಳೂರು, ಏ. 4– ಸಾಂಕ್ರಾಮಿಕ ರೋಗ ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ 30 ಜಿಲ್ಲೆಗಳ ಪೈಕಿ 28 ಜಿಲ್ಲೆಗಳಲ್ಲಿ ಕಳೆದ 3 ದಿನಗಳಿಂದ ಯಾವುದೇ ಹೊಸ ಕೋವಿಡ್ ಪ್ರಕರಣಗಳು ದಾಖಲಾಗಿಲ್ಲ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಭಾನುವಾರ 49 ಪ್ರಕರಣಗಳು ಪತ್ತೆಯಾಗಿದ್ದು, ಬೆಳಗಾವಿಯಲ್ಲಿ ಕೇವಲ 1 ಹೊಸ ಪ್ರಕರಣ ಪತ್ತೆಯಾಗಿದೆ. ಇದರೊಂದಿಗೆ ರಾಜ್ಯದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 39,45,660ಕ್ಕೆ ತಲುಪಿದೆ. ಮೊದಲ ಅಲೆಯ ವೇಳೆ ಕೋವಿಡ್ ಸಾಂಕ್ರಾಮಿಕ ರೋಗವು (ಮಾರ್ಚ್ 2020 ರಿಂದ ಜನವರಿ 2021) ರಾಜ್ಯದಲ್ಲಿ 12,400 ಮಂದಿಯನ್ನು ಬಲಿ ಪಡೆದುಕೊಂಡಿತ್ತು. ಎರಡನೇ ಅಲೆ (ಮಾರ್ಚ್ 2021 ರಿಂದ ಡಿಸೆಂಬರ್ 2021) ವೇಳೆ 25,900 ಮಂದಿ ಬಲಿಯಾಗಿದ್ದರು. ಇನ್ನು ಮೂರನೇ ಅಲೆ ವೇಳೆ (ಜನವರಿ 2022 ಇಲ್ಲಿಯವರೆಗೆ) 1,700 ಮಂದಿ ಸಾವನ್ನಪ್ಪಿದ್ದರು.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ಕೊರೊನಾ ಸೋಂಕು ಇಳಿಕೆ ಹಿನ್ನೆಲೆ

ತಲಕಾವೇರಿಯಲ್ಲಿ ತೀರ್ಥಸ್ನಾನಕ್ಕೆ ಅವಕಾಶ



"ಕಳೆದ 2 ವರ್ಷಗಳಿಂದ ಕೋವಿಡ್ ಕಾರಣದಿಂದ ಸರ್ಕಾರ ತೀರ್ಥ ಸ್ನಾನಕ್ಕೆ ನಿಷೇಧ ಹೇರಿತ್ತು. ಆದರೆ ಇದೀಗ ಮತ್ತೆ ಅವಕಾಶ ಮಾಡಿಕೊಟ್ಟಿದ್ದು, ಮನಸಿಗೆ ತೃಪ್ತಿ ತಂದಿದೆ. ನಮ್ಮ ತಾಯಿ 1 ವರ್ಷದ ಹಿಂದೆ ತೀರಿಕೊಂಡಿದ್ದು. ಭಾಗಮಂಡಲದಲ್ಲಿ ಪಿಂಡ ಪ್ರದಾನ ಮಾಡಿದ್ದರೂ ಕೂಡ ಧಾರ್ಮಿಕ ಪದ್ಧತಿಯಂತೆ ತಲಕಾವೇರಿಯಲ್ಲಿ ತೀರ್ಥ ಸ್ನಾನ ಮಾಡಲಾಗಿರಲಿಲ್ಲ. ಇದೀಗ ಎಲ್ಲಾ ವಿಧಿ-ವಿಧಾನಗಳನ್ನು ಪೂರೈಸಿದ ಆತ್ಮತೃಪ್ತಿ ಇದೆ.

-ರತನ್, ಕೊಡಗು ನಿವಾಸಿ.

"ಕಳೆದ 2 ದಿನಗಳಿಂದ ತಲಕಾವೇರಿಯಲ್ಲಿ ತೀರ್ಥ ಸ್ನಾನಕ್ಕೆ ಅವಕಾಶ ನೀಡಲಾಗಿದೆ. ಇಷ್ಟು ಸಮಯ ಕೋವಿಡ್ ಕಾರಣದಿಂದ ಸರ್ಕಾರದ ನಿರ್ದೇಶನದಂತೆ ಇದಕ್ಕೆ ಅವಕಾಶ ಇರಲಿಲ್ಲ. ತೀರ್ಥ ಸ್ನಾನಕ್ಕೆ ಅವಕಾಶ ನೀಡುವಂತೆ ಭಕ್ತರೂ ಕೇಳುತ್ತಿದ್ದರು. ಇದೀಗ ಭಕ್ತರಿಗೆ ಮುಕ್ತ ಅವಕಾಶ ನೀಡಲಾಗಿದ್ದು, ತೀರ್ಥ ಸ್ನಾನ ಸಹಿತ ಭಕ್ತರು ತೀರ್ಥವನ್ನೂ ಕೊಂಡೊಯ್ಯುತ್ತಿದ್ದಾರೆ.

-ಮಹೇಶ್ ಕೆ.ಆರ್., ತಲಕಾವೇರಿ ಉಸ್ತುವಾರಿಗಳು.

ಮಡಿಕೇರಿ,ಏ.4- ರಾಜ್ಯದ ಪವಿತ್ರ ತೀರ್ಥ ಕ್ಷೇತ್ರಗಳಲ್ಲಿ ಒಂದಾಗಿರುವ ತಲಕಾವೇರಿಯಲ್ಲಿ ಇದೀಗ ಪವಿತ್ರ ತೀರ್ಥ ಸ್ನಾನಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ. ಕೋವಿಡ್ ಅಬ್ಬರ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಭಕ್ತಾದಿಗಳು ಕೊಳದಲ್ಲಿ ತೀರ್ಥ ಸ್ನಾನ ಮಾಡುವ ಮೂಲಕ ನಿರಾಳರಾಗುತ್ತಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಮಹಾಮಾರಿ ಕಾಣಿಸಿಕೊಂಡ ದಿನದಿಂದಲೇ ತಲಕಾವೇರಿಯ ತೀರ್ಥಕೊಳದಲ್ಲಿ ಭಕ್ತಾದಿಗಳಿಗೆ ತೀರ್ಥಸ್ನಾನ ನಿರ್ಬಂಧಿಸಲಾಗಿತ್ತು. ಅಷ್ಟೇ ಅಲ್ಲದೆ ಎರಡು ವರ್ಷದ ಕಾವೇರಿ ತೀರ್ಥೋದ್ಭವ ಸಂದರ್ಭವೂ ತೀರ್ಥಸ್ನಾನಕ್ಕೆ ಅವಕಾಶ ನಿರಾಕರಿಸಲಾಗಿತ್ತು. ಪರಿಣಾಮ ಕಾವೇರಿ ಭಕ್ತಾದಿಗಳು ತೀವ್ರ ನಿರಾಸೆಯಾಗಿದ್ದರು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ತೀರ್ಥೋದ್ಭವದ ಸಂದರ್ಭ ಭಕ್ತಾದಿಗಳು ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ತಲಕಾವೇರಿಯಲ್ಲಿ ನಮ್ಮ ಧಾರ್ಮಿಕ ನಂಬಿಕೆ ಇದೆ. ಸರ್ಕಾರ ಮತ್ತು ಜಿಲ್ಲಾಡಳಿತ ಕೆಲವು ನಿರ್ಬಂಧಗಳನ್ನು ಹೇರಿ ಸ್ಥಳೀಯರ ನಂಬಿಕೆಗೆ ಘಾಸಿ ತಂದಿದೆ ಎಂದು ಬಹಿರಂಗವಾಗಿಯೇ ಕಾವೇರಿ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದರು.

ಇದೀಗ ರಾಜ್ಯ ಸೇರಿದಂತೆ ಜಿಲ್ಲೆಯಲ್ಲಿಯೂ ಕೋವಿಡ್ ಅಬ್ಬರ ಕಡಿಮೆಯಾಗಿದ್ದು, ಕಳೆದ ಕೆಲ ದಿನಗಳಿಂದ ಕೊರೊನಾ ಪ್ರಕರಣ ಶೂನ್ಯವಾಗಿದೆ. ಹೀಗಾಗಿ ಕಳೆದ ಮೂರು ದಿನಗಳಿಂದ ತಲಕಾವೇರಿಯಲ್ಲಿ ಭಕ್ತಾದಿಗಳಿಗೆ ತೀರ್ಥಸ್ನಾನಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಇನ್ನೂ ಹೊರಗಿನಿಂದ ಬರುವ ಭಕ್ತಾದಿಗಳಿಗಿಂತ ಕೊಡಗಿನ ಭಕ್ತಾದಿಗಳಿಗೆ ತೀರ್ಥಸ್ನಾನ ಇಲ್ಲದೆ ತೀವ್ರ ಸಮಸ್ಯೆಯಾಗಿತ್ತು. ಜಿಲ್ಲೆಯ ಮೂಲನಿವಾಸಿಗಳು ತಮ್ಮವರನ್ನು ಕಳೆದುಕೊಂಡಾಗ ಭಾಗಮಂಡಲದಲ್ಲಿ ಪಿಂಡ ಪ್ರದಾನ ಮಾಡಿ, ನಂತರ ತಲಕಾವೇರಿಗೆ ಬಂದು ತೀರ್ಥ ಸ್ನಾನ ಮಾಡುವುದು ಅನಾದಿಕಾಲದಿಂದ ನಡೆದುಕೊಂಡು ಬಂದಿದ್ದ ಸಂಪ್ರದಾಯವಾಗಿತ್ತು. ಆದರೆ ಎರಡು ವರ್ಷಗಳಿಂದ ಇದಕ್ಕೆ ಅವಕಾಶ ಇಲ್ಲದೆ ಭಕ್ತರು ಮಾನಸಿಕವಾಗಿ ಪರಿತಪಿಸುವಂತಾಗಿತ್ತು. ಜಿಲ್ಲೆಯ ಹಲವು ಸಂಘಟನೆಗಳು ಈ ಕುರಿತು ಸಾಕಷ್ಟು ಮನವಿ ಮಾಡಿಕೊಂಡರೂ ಕೂಡ ಕೋವಿಡ್ ಕಾರಣದಿಂದಾಗಿ ಜಿಲ್ಲಾಡಳಿತ ತೀರ್ಥ ಸ್ನಾನಕ್ಕೆ ಅನುಮತಿ ನೀಡಿರಲಿಲ್ಲ. ಈ ನಡುವೆ ಭಾಗಮಂಡಲದಲ್ಲಿ ಕೇಶಮುಂಡನ, ಪಿಂಡ ಪ್ರದಾನ ಹಾಗೂ ತಲಕಾವೇರಿಯಲ್ಲಿ ಕೇವಲ ತೀರ್ಥ ಪ್ರೋಕ್ಷಣೆಗೆ ಮಾತ್ರವೇ ಅವಕಾಶ ನೀಡಲಾಗಿತ್ತು. ಆದರೀಗ ಎಂದಿನಂತೆ ಭಕ್ತಾದಿಗಳು ಕ್ಷೇತ್ರಕ್ಕೆ ಆಗಮಿಸಿ ತೀರ್ಥಸ್ನಾನ, ತೀರ್ಥ ಪ್ರೋಕ್ಷಣೆಯೊಂದಿಗೆ ಪವಿತ್ರ ಕಾವೇರಿ ತೀರ್ಥವನ್ನು ಮನೆಗೆ ಕೊಂಡೊಯ್ಯುತ್ತಿದ್ದಾರೆ.

ಒಟ್ಟಿನಲ್ಲಿ ತಲಕಾವೇರಿಯಲ್ಲಿ ಈಗ ಭಕ್ತಾದಿಗಳ ತೀರ್ಥಸ್ನಾನ ಮಾಡಿ ನಿರಾಳರಾಗುತ್ತಿದ್ದಾರೆ. ಮುಂದೆಯೂ ಧಾರ್ಮಿಕ ನಂಬಿಕೆ ಮತ್ತು ಪದ್ಧತಿಗಳ ಆಚರಣೆಗೆ ಯಾವುದೇ ಅಡೆತಡೆ ಬಾರದಿರಲಿ ಎಂದು ಮಾತೆ ಕಾವೇರಿಯಲ್ಲಿ ಭಕ್ತರು ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.

ರೆಸಾರ್ಟ್‌ನಲ್ಲಿ ಕಳವು ಮಾಡಿದ್ದ ಇಬ್ಬರ ಬಂಧನ

10 ಲಕ್ಷ ರೂ. ಮೌಲ್ಯದ ವಜ್ರಾಭರಣ, ನಗದು ವಶ



ಮಡಿಕೇರಿ, ಏ.4- ವಿರಾಜಪೇಟೆ ತಾಲೂಕು ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕರಡಿಗೋಡು ಗ್ರಾಮದ ರೆಸಾರ್ಟ್‌ವೊಂದರಲ್ಲಿ ನಡೆದಿದ್ದ ಕಳವು ಪ್ರಕರಣ ಪತ್ತೆ ಹಚ್ಚುವಲ್ಲಿ ಕೊಡಗು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಗುಹ್ಯ ಗ್ರಾಮದ ನಿವಾಸಿಗಳಾದ ಕೆ.ಎಂ. ಪ್ರದೀಪ್(31) ಹಾಗೂ ಆತನ ಸ್ನೇಹಿತ ಕೆ.ಎಸ್.ಶರತ್(30) ಬಂಧಿತ ಆರೋಪಿಗಳು.

ಘಟನೆ ಹಿನ್ನೆಲೆ: ಫೆ.1ರಂದು ಮುಂಬೈನಿಂದ ಆಗಮಿಸಿದ್ದ ಬಾಲಕೃಷ್ಣ ಭಂಡಾರಿ ಹಾಗೂ ಅವರ ಕುಟುಂಬ ಸಿದ್ದಾಪುರದ ಕರಡಿಗೋಡಿನ ರೆಸಾರ್ಟ್‌ವೊಂದರಲ್ಲಿ ಎರಡು ರೂಂ ಪಡೆದು ತಂಗಿದ್ದರು. ಈ ವೇಳೆ ಬೆಲೆಬಾಳುವ ಆಭರಣ ಹಾಗೂ ಹಣವನ್ನು ಕೊಠಡಿಯ ಸೇಫ್ ಲಾಕರ್‌ನಲ್ಲಿಟ್ಟಿದ್ದರು. ಊಟ ಮುಗಿಸಿಕೊಂಡು ರಾತ್ರಿ 10ಗಂಟೆ ಸುಮಾರಿಗೆ ಕೊಠಡಿಗೆ ಬಂದು ನೋಡಿದಾಗ ಲಾಕರ್ ಕಳುವಾಗಿತ್ತು. ಈ ಕುರಿತು ಬಾಲಕೃಷ್ಣ ಭಂಡಾರಿ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ತನಿಖೆ ನಡೆಸಿದ ಪೊಲೀಸರ ತಂಡ ಈ ಹಿಂದೆ ರೆಸಾರ್ಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಗುಹ್ಯ ಗ್ರಾಮದ ಪ್ರದೀಪ್ ಹಾಗೂ ಆತನ ಸ್ನೇಹಿತ ಶರತ್‌ನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಆರೋಪಿಗಳು ಕೃತ್ಯವನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಎಂ.ಅಯ್ಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆರೋಪಿಗಳಿಂದ ಕಳುವಾಗಿದ್ದ 50 ಸಾವಿರ ರೂ. ಮೌಲ್ಯದ ಜಖಂಗೊಂಡ ಐಪ್ಯಾಡ್, 5 ಲಕ್ಷ ಮೌಲ್ಯದ ಡೈಮಂಡ್ ಬ್ರಾಸ್‌ಲೈಟ್, 80 ಸಾವಿರ ಮೌಲ್ಯದ ಡೈಮೆಂಡ್ ರಿಂಗ್, ಪ್ರದೀಪ್ ಬಳಿ 45 ಸಾವಿರ ರೂ. ನಗದು, ಶರತ್ ಬಳಿ 35 ಸಾವಿರ ನಗದು ಹಾಗೂ ಕೃತ್ಯಕ್ಕೆ ಬಳಸಿದ ಬೈಕ್ ಹಾಗೂ ವ್ಯಾಗನರ್ ಕಾರು ಸೇರಿದಂತೆ ಒಟ್ಟು 10 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಯ್ಯಪ್ಪ ಮಾಹಿತಿ ನೀಡಿದರು.

ಪೊಲೀಸ್ ಮಹಾಧಿಕಾರಿ ಎಂ.ಎ.ಅಯ್ಯಪ್ಪ ಮಾರ್ಗದರ್ಶನದಲ್ಲಿ ಪೊಲೀಸ್ ಉಪಾಧೀಕ್ಷಕ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಮಡಿಕೇರಿ ನಗರ ವೃತ್ತ ನಿರೀಕ್ಷಕ ಪಿ.ವಿ. ವೆಂಕಟೇಶ್, ಡಿಸಿಆರ್‌ಬಿ ನಿರೀಕ್ಷಕ ಐ.ಪಿ. ಮಾದಪ್ಪ, ಸಿದ್ದಾಪುರ ಠಾಣೆ ಪಿಎಸ್‌ಐ ಮೋಹನ್ ರಾಜ್, ಪ್ರೊಬೆಷನರಿ ಪಿಎಸ್‌ಐ ಪ್ರಮೋದ್, ಎಎಸ್‌ಐ ತಮ್ಮಯ್ಯ, ಮಡಿಕೇರಿ ನಗರ ವೃತ್ತ ಕಚೇರಿ ಸಿಬ್ಬಂದಿ ಸಿ.ವಿ. ಚರ್ಮಣ, ಎ.ವಿ. ಕಿರಣ್, ಸಿದ್ದಾಪುರ ಪೊಲೀಸ್ ಠಾಣಾ ಸಿಬ್ಬಂದಿ ಬೆಳ್ಳಿಯಪ್ಪ ಪಿ.ರತನ್, ಟಿ.ಜೆ.ಲಕ್ಷ್ಮೀಕಾಂತ್, ವಸಂತ್ ಕುಮಾರ್, ಹೆಚ್.ಕೆ.ಭರತ್, ಹರೀಶ್, ಶಿವಕುಮಾರ್, ಮಲ್ಲಪ್ಪ ಮುಶಿಗೇರಿ, ಮಡಿಕೇರಿ ನಗರ ಠಾಣೆಯ ಕೆ.ಕೆ.ದಿನೇಶ್, ನಾಗರಾಜ್, ಜಿ.ರುದ್ರಪ್ಪ, ಡಿಸಿಐಬಿ ಸಿಬ್ಬಂದಿ ಯೋಗೇಶ್ ಕುಮಾರ್, ನಿರಂಜನ್, ಸುರೇಶ್, ವಸಂತ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀ ಹನುಮಂತರಾಯಸ್ವಾಮಿ ದೇವಾಲಯದ ಮುಖ್ಯದ್ವಾರ ಉದ್ಘಾಟನೆ



ಕುಶಾಲನಗರ,ಏ.4-ಸಮೀಪದ ತೊರೆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕನಾಯಕನ ಹೊಸಳ್ಳಿ ಗ್ರಾಮದ ಶ್ರೀ ಹನುಮಂತರಾಯಸ್ವಾಮಿ ದೇವಾಲಯದ 13ನೇ ವಾರ್ಷಿಕ ಪೂಜೋತ್ಸವ, ನೂತನ ಮುಖ್ಯದ್ವಾರ ಉದ್ಘಾಟನೆ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮ ಮೂರು ದಿನಗಳ ಕಾಲ ನಡೆಯಿತು.

ದೇವಾಲಯ ಸಮಿತಿ ಆಶ್ರಯದಲ್ಲಿ ಶನಿವಾರ ಹೊನ್ನಾರು ಉತ್ಸವ, ಭಾನುವಾರ ವಿವಿಧ ಪೂಜಾ ಕೈಂಕರ್ಯ ಬಳಿಕ ಸಂಜೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಿತು. ತೊರೆನೂರಿನ ವಿರಕ್ತ ಮಠದ ಮಲ್ಲೇಶ ಸ್ವಾಮೀಜಿ, ಬಸವಪಟ್ಟಣದ ಶಿವಯೋಗಿ ಸ್ವಾಮೀಜಿ, ಅರಕಲಗೂಡಿನ ಚಿಲುಮೆಮಠದ ಜಯದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸೋಮವಾರ ಬೆಳಗ್ಗೆ ದೇವಾಲಯದ ನೂತನ ಮುಖ್ಯದ್ವಾರವನ್ನು ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ಉದ್ಘಾಟಿಸಿದರು. ಈ ಸಂದರ್ಭ ಮಾತನಾಡಿದ ಅವರು, ಸತತ 13 ವರ್ಷಗಳಿಂದ ನಿರಂತರವಾಗಿ ಪೂಜೋತ್ಸವ ನಡೆಯುತ್ತಿರುವುದು ವಿಶೇಷ. ಪ್ರತಿ ಗ್ರಾಮದಲ್ಲಿ ಒಂದು ಶಾಲೆ ಮತ್ತು ದೇವಾಲಯವಿದ್ದಲ್ಲಿ ಅಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸಲು ಸಾಧ್ಯ ಎಂದರು. ಬಳಿಕ ದೇವರ ಮೂರ್ತಿ ಒಳಗೊಂಡ ಅಲಂಕೃತ ಬೆಳ್ಳಿರಥ ಮೆರವಣಿಗೆಗೆ ದಾನಿ ಬೆಳ್ಳುಳ್ಳಿ ಕುಮಾರ್ ಚಾಲನೆ ನೀಡಿದರು. ಅರ್ಚಕ ಬಸವಕುಮಾರ್ ಶಾಸ್ತ್ರಿ ಪೂಜಾ ವಿಧಿ ನೆರವೇರಿಸಿದರು. ಈ ಸಂದರ್ಭ ಜಿಪಂ ಮಾಜಿ ಸದಸ್ಯ ಹೆಚ್.ಆರ್. ಶ್ರೀನಿವಾಸ, ತೊರೆನೂರು ಗ್ರಾಪಂ ಅಧ್ಯಕ್ಷೆ ರೂಪಾ ಮಹೇಶ್, ಶಿರಂಗಾಲ ಸಹಕಾರ ಸಂಘದ ಅಧ್ಯಕ್ಷ ಸಿ.ಎನ್.ಲೋಕೇಶ್, ದೇವಾಲಯ ಸಮಿತಿ ಅಧ್ಯಕ್ಷ ಟಿ.ಸಿ.ಚಿಕ್ಕಯ್ಯ, ಕಾರ್ಯದರ್ಶಿ ಎಸ್.ಎಂ.ಹರೀಶ್, ಗೌರವ ಅಧ್ಯಕ್ಷ ಗುರುಲಿಂಗಪ್ಪ, ಮುಖ್ಯದ್ವಾರ ಸಮಿತಿ ಅಧ್ಯಕ್ಷ ಟಿ.ಎಂ.ಮೋಹನ್‌ರಾಜ್, ಕಾರ್ಯದರ್ಶಿ ಟಿ.ಕೆ.ವಸಂತ, ಪ್ರಮುಖರಾದ ಟಿ.ಬಿ.ಜಗದೀಶ್, ರಾಜಶೇಖರ್, ತ್ರಿನೇಶ್, ಪ್ರಕಾಶ್, ಬಿ.ಎ.ಹರೀಶ್, ಅಪ್ಪಣ್ಣಿ, ಕೆ.ಎಸ್.ಕೃಷ್ಣೇಗೌಡ, ಫಾಲ್ಗುಣ, ವೀರಭದ್ರಶೆಟ್ಟಿ ಮತ್ತಿತರರಿದ್ದರು.

ವಿರಾಜಪೇಟೆ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ

ಸಿಪಿಐ(ಎಂ) ಆರೋಪ



ವಿರಾಜಪೇಟೆ, ಏ.4- ವಿರಾಜಪೇಟೆ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಪ್ರತಿಯೊಂದು ಕೆಲಸಕ್ಕೂ ಹಣ ನೀಡದೆ ಕಾರ್ಯಗಳು ನಡೆಯುತ್ತಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ತಾಲೂಕು ಕಚೇರಿ ಎದುರು ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಮೇಶ್ ಎಚ್ಚರಿಸಿದ್ದಾರೆ.

ಇಲ್ಲಿನ ಪ್ರೆಸ್ ಕ್ಲಬ್‌ನಲ್ಲಿ ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಕಚೇರಿಯಲ್ಲಿರುವ ಆಹಾರ ಇಲಾಖೆಯಲ್ಲಿ ಪಡಿತರ ಚೀಟಿಗೆ ಹೆಸರು ಸೇರ್ಪಡೆಗೆ 150 ರೂ. ಹಾಗೂ ಅದನ್ನು ಪ್ರಿಂಟ್ ತೆಗೆಯಲು 150 ರೂ. (ಒಟ್ಟು 300)ಪಡೆದುಕೊಳ್ಳುತ್ತಾರೆ. ಅಲ್ಲದೆ ಹಣ ನೀಡಿದರೂ ಸರಿಯಾದ ದಾಖಲೆಗಳನ್ನು ನೀಡುತ್ತಿಲ್ಲ. ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರಕ್ಕಾಗಿ ಸರ್ವರ್ ತೊಂದರೆ ಎಂದು ದಿನವಿಡಿ ಕಾಯಿಸುತ್ತಾರೆ. 2018ರಲ್ಲಿ ಮಹಾಮಳೆಯಿಂದಾಗಿ ಸಿದ್ದಾಪುರ ಭಾಗದ ಜನರ ಅನೇಕ ಪಡಿತರ ಚೀಟಿಗಳು ಕಾವೇರಿ ನದಿಯಲ್ಲಿ ಕೊಚ್ಚಿಹೋಗಿದ್ದು, ಅನೇಕ ಕಾರ್ಮಿಕರಿಗೆ ಪಡಿತರ ಚೀಟಿ ಇಲ್ಲದಂತಾಗಿದೆ. ಸರ್ಕಾರ ಕೂಲಿ ಕಾರ್ಮಿಕರು ಮತ್ತು ರೈತ ವರ್ಗದವರಿಗೆ ಸೌಲಭ್ಯ ನೀಡುವುದಾಗಿ ಹೇಳಿದರೂ ತಾಲೂಕು ಕಚೇರಿಯಲ್ಲಿರುವ ಸಿಬ್ಬಂದಿ ಸಾರ್ವಜನಿಕರಿಂದ ದಿನಕ್ಕೆ ಎಷ್ಟು ಬಂದಿದೆ ಎಂದು ಲೆಕ್ಕ ಹಾಕುತ್ತಿದ್ದಾರೆ. ಇದರ ಬಗ್ಗೆ ತಹಸೀಲ್ದಾರ್ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸಿಪಿಐ(ಎಂ) ಜಿಲ್ಲಾ ಸಮಿತಿಯ ಎ.ಮಹಾದೇವ ಮಾತನಾಡಿ, ತಾಲೂಕು ಕಚೇರಿಯಲ್ಲಿರುವ ಸರ್ವೆ ಇಲಾಖೆಗೆ ಸಣ್ಣ ರೈತರ ನಕಾಶೆ, ಭೂ ಅಳತೆ ಹಾಗೂ ಇತರ ವ್ಯವಹಾರಗಳಿಗೆ ಕನಿಷ್ಠ 5 ಸಾವಿರದಿಂದ ಮೇಲ್ಪಟ್ಟು ಹಣ ನೀಡದಿದ್ದರೆ ಕೆಲಸ ಮಾಡದೆ ಸಿಬ್ಬಂದಿ ಸತಾಯಿಸುತ್ತಾರೆ. ಹತ್ತಾರು ತಿಂಗಳು ಕಚೇರಿಗೆ ಅಲೆಯಬೇಕಾಗುತ್ತದೆ. ಇನ್ನು ಕಚೇರಿಯ ವಿವಿಧ ವಿಭಾಗದಲ್ಲೂ ಲಂಚ ಇಲ್ಲದೆ ಯಾವುದೇ ಕೆಲಸ ನಡೆಯುವುದಿಲ್ಲ. ಎಲ್ಲಾ ಫೈಲ್‌ಗಳು ಮುಂದೆ ಹೋಗಲು ದಲ್ಲಾಳಿಗಳ ಮೂಲಕ ವ್ಯವಹರಿಸುವಂತಾಗಿದೆ. ಹಣ ಸುರಿದರೆ ಬೇಗ ಕೆಲಸಗಳು ನಡೆಯುತ್ತವೆ ಎಂದು ಆರೋಪಿಸಿದರು.

ಸಂಘಟನೆಯ ಜಿಲ್ಲಾ ಸಮಿತಿಯ ಎ.ಸಿ.ಸಾಬು ಮಾತನಾಡಿ, ಕೊಡಗು ಜಿಲ್ಲೆ ಗುಡ್ಡಗಾಡು ಪ್ರದೇಶವಾಗಿದ್ದು, ಆಗಾಗ ವಿದ್ಯುತ್ ಸಂಸ್ಯೆ ಇರುವುದರಿಂದ ಸರ್ಕಾರ ಇಲ್ಲಿನ ಜನರಿಗೆ ಸೀಮೆ ಎಣ್ಣೆ ವಿತರಿಸಬೇಕು ಹಾಗೂ ತಾಲೂಕು ಕಚೇರಿಯ ಸಿಬ್ಬಂದಿ ಸಾರ್ವಜನಿಕರೊಂದಿಗೆ ಉತ್ತಮ ಬಂಧುತ್ವ ಇರಿಸಿಕೊಂಡು ಬಡ ಜನರಿಗೆ ಸರ್ಕಾರ ಸೌಲಭ್ಯ ದೊರಕಿಸುವುದು ಅಧಿಕಾರಿಗಳ ಕರ್ತವ್ಯವಾಗಲಿ ಎಂದರು.

ಆನೆ ದಾಳಿ ಬೆಳೆ ನಾಶ

ಗುಡ್ಡೆಹೊಸೂರು, ಏ.4- ಇಲ್ಲಿಗೆ ಸಮೀಪದ ಬೋಳ್ಳುರು ಮತ್ತು ಅತ್ತೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರ ತೋಟಗಳಿಗೆ ಕಾಡಾನೆಗಳು ದಾಳಿ ಮಾಡಿ ಬೆಳೆ ನಾಶಪಡಿಸುತ್ತಿದೆ



ಅತ್ತೂರು ಗ್ರಾಮದ ಕಳಂಜನ ದಾದಪ್ಪ ಅವರ ಒಂದು ಏಕರೆ ಪ್ರದೇಶದ ಕಾಫಿ ಗಿಡಗಳು ಹಾಗೂ ಅಡಿಕೆ ಬಾಳೆ ಬೆಳೆಯನ್ನು ತಿಂದು, ತುಳಿದು ನಾಶಪಡಿಸಿವೆ. ಅಲ್ಲದೆ ಸುಣ್ಣದಕೆರೆಯಲ್ಲಿ ಚಂಗಚಂಡ ಪಳಂಗಪ್ಪ ಅವರ ಫಸಲಿದ್ದ ದೊಡ್ಡಗಾತ್ರದ ಸಪೋಟ ಮರ ಮತ್ತು ಬಾಳೆಯನ್ನು ತಿಂದು ನಾಶಪಡಿಸಿವೆ.

ವಿ.ಪೇಟೆ ಡಿವೈಎಸ್ಪಿ ಸಿ.ಟಿ. ಜಯಕುಮಾರ್ ಸೇರಿ ಐವರಿಗೆ ಎಸ್ಪಿಯಾಗಿ ಬಡ್ತಿ

ಮೈಸೂರು, ಏ. 4- ಕೊಡಗಿನ ವಿರಾಜಪೇಟೆ ಉಪವಿಭಾಗದ ಡಿವೈಎಸ್ಪಿ ಸಿ.ಟಿ. ಜಯಕುಮಾರ್ ಸೇರಿದಂತೆ ಐವರು ಡಿವೈಎಸ್ಪಿಗಳಿಗೆ ಎಸ್ಪಿಯಾಗಿ ಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ. ವಿರಾಜಪೇಟೆ ಡಿವೈಎಸ್ಪಿ ಸಿ.ಟಿ. ಜಯಕುಮಾರ್ ಅವರನ್ನು ಬೆಂಗಳೂರು ಐಎಸ್‌ಡಿ ಎಸ್ಪಿಯಾಗಿ, ಬೆಂಗಳೂರು ನಗದ ಸಿಟಿ ಸೆಂಟ್ರಲ್ ಬ್ರಾಂಚ್ ಎಸಿಪಿಯಾಗಿದ್ದ ಶೋಭಾ ಕಟಾವ್‌ಕರ್ ಅವರನ್ನು ಕಲಬುರಗಿ ಪಿಟಿಸಿ ಉಪ ಪ್ರಾಂಶುಪಾಲರಾಗಿ, ಬೆಂಗಳೂರಿನ ವಿಜಯನಗರ ಉಪವಿಭಾಗದ ಎಸಿಪಿಯಾಗಿದ್ದ ಕೆ. ನಂಜುಂಡೇಗೌಡ ರನ್ನು ಹುಬ್ಬಳ್ಳಿ ಹೆಸ್ಕಾಂ ಎಸ್ಪಿಯಾಗಿ, ರಾಜ್ಯ ಗುಪ್ತವಾರ್ತೆ ಡಿವೈಎಸ್ಪಿಯಾಗಿದ್ದ ಎನ್. ಶ್ರೀನಿಧಿ ಅವರನ್ನು ಕರ್ನಾಟಕ ಲೋಕಾಯುಕ್ತ ಎಸ್ಪಿಯಾಗಿ, ಕೋಲಾರ ಡಿಸಿಆರ್‌ಇ ಡಿವೈಎಸ್ಪಿಯಾಗಿದ್ದ ಬಿ.ಕೆ. ಉಮೇಶ್ ಅವರನ್ನು ಕರ್ನಾಟಕ ಲೋಕಾಯುಕ್ತ ಎಸ್ಪಿಯಾಗಿ ಬಡ್ತಿ ನೀಡಿ ನಿಯೋಜಿಸಲಾಗಿದೆ.



ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಹೆಚ್.ಈ. ಶರೀಫ್

ಸುಂಟಿಕೊಪ್ಪ, ಏ.4- ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಹೆಚ್.ಈ. ಶರೀಫ್ ನೇಮಕಗೊಂಡಿದ್ದಾರೆ.



ಕೊಡಗು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಂ.ಗಣೇಶ್ ಅವರು ಹರದೂರು ನಿವಾಸಿ ಹೆಚ್.ಈ.ಶರೀಫ್ ಅವರನ್ನು ಜೆಡಿಎಸ್ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಳಿಸಿ ಆದೇಶ ಹೊರಡಿಸಿದ್ದಾರೆ.

ಬಿರುನಾಣಿಯಲ್ಲಿ ರಾಜ್ಯಮಟ್ಟದ ಶೂಟಿಂಗ್ ಸ್ಪರ್ಧೆ



ಶ್ರೀಮಂಗಲ, ಏ.4- ಮರೆನಾಡ್ ಶೂಟರ್ಸ್ ಕ್ಲಬ್‌ನಿಂದ ಬಿರುನಾಣಿಯ ಮರೆನಾಡ್ ಪ್ರೌಢಶಾಲಾ ಮೈದಾನದಲ್ಲಿ 2ನೇ ವರ್ಷದ ರಾಜ್ಯಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಮಹಿಳೆಯರು ಮಕ್ಕಳು ಸೇರಿದಂತೆ 200ಕ್ಕೂ ಅಧಿಕ ಸ್ಪರ್ಧಾರ್ಥಿಗಳು ಭಾಗವಹಿಸಿ ತೆಂಗಿನಕಾಯಿಗೆ ಗುಂಡು ಹೊಡೆಯುವ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಸ್ಪರ್ಧೆಯಲ್ಲಿ 12 ಬೋರ್ ಕೋವಿ ವಿಭಾಗದಲ್ಲಿ ನಾಪೋಕ್ಲುವಿನ ಅಜ್ಜೆಟ್ಟೀರ ಸೋಮಯ್ಯ(ಪ್ರಥಮ), ಬಾಡಗರಕೇರಿಯ ಕಳ್ಳಂಗಡ ನವೀನ್ ಚಂಗಪ್ಪ(ದ್ವಿತೀಯ), ಬಾಡಗರಕೇರಿಯ ಕುಪ್ಪುಡೀರ ಪೊನ್ನು ಮುತ್ತಪ್ಪ(ತೃತೀಯ)ಸ್ಥಾನ ಪಡೆದು ಅನುಕ್ರಮವಾಗಿ 25 ಸಾವಿರ ರೂ., 20 ಸಾವಿರ, 15 ಸಾವಿರ ರೂ.ನಗದು ಬಹುಮಾನವನ್ನು ಪ್ರಶಸ್ತಿ ಪತ್ರದೊಂದಿಗೆ ಪಡೆದರು.

ಪಾಯಿಂಟ್ 22 ಕೋವಿ ವಿಭಾಗದಲ್ಲಿ ವಿರಾಜಪೇಟೆಯ ಕಬ್ಬಚ್ಚೀರ ಶರತ್ (ಪ್ರಥಮ), ಕಾಂತೂರು ಮೂರ್ನಾಡು ವಿನ ಬಡುವಂಡ ದೇವಯ್ಯ(ದ್ವಿತೀಯ), ನಾಪೋಕ್ಲುವಿನ ಅಜ್ಜೆಟ್ಟೀರ ಸೋಮಯ್ಯ ರವರು(ತೃತೀಯ)ಸ್ಥಾನ ಪಡೆದು ಅನುಕ್ರಮವಾಗಿ 25 ಸಾವಿರ ರೂ., 20 ಸಾವಿರ, 15 ಸಾವಿರ ರೂ.ನಗದು ಬಹುಮಾನವನ್ನು ಪ್ರಶಸ್ತಿ ಪತ್ರದೊಂದಿಗೆ ಪಡೆದರು.

ಏರ್‌ರೈಫಲ್ ವಿಭಾಗದಲ್ಲಿ ಸುಂಟಿಕೊಪ್ಪದ ಕೇಚೀರ ಶಮನ್ ಬೆಳ್ಳಿಯಪ್ಪ(ಪ್ರಥಮ) ಕೇಚೀರ ಶಬ್ದ್ ಬೆಳ್ಳಿಯಪ್ಪ(ದ್ವಿತೀಯ), ಕಾಂತೂರು ಮೂರ್ನಾಡುವಿನ ಬಡುವಂಡ ತ್ರಿಶಾಲಿ ತಂಗಮ್ಮ(ತೃತೀಯ) ಸ್ಥಾನ ಪಡೆದರು. ಇವರು ಅನುಕ್ರಮವಾಗಿ 5 ಸಾವಿರ, 3 ಸಾವಿರ ರೂ. ನಗದು ಹಾಗೂ ಪ್ರಶಸ್ತಿಪತ್ರ ಪಡೆದರು. ಎಲ್ಲಾ ಟ್ರೋಫಿಗಳನ್ನು ಬೆಂಗಳೂರಿನ ಗುಂಬೀರ ಸಂತೋಷ್ ಪ್ರಾಯೋಜಿಸಿದ್ದರು.

ಉದ್ಘಾಟನಾ ಸಮಾರಂಭ ಕಾರ್ಯಕ್ರಮದ ಆರಂಭದಲ್ಲಿ ಬಾಡಗರಕೇರಿಯ ಹೈಕೋರ್ಟ್ ವಕೀಲ ಮಲ್ಲೇಂಗಡ ಗಗನ್ ಬೆಳ್ಳಿಯಪ್ಪ ತೆಂಗಿನಕಾಯಿಗೆ ಗುಂಡು ಹೊಡೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಕೊಡಗಿನ ಮೂಲ ನಿವಾಸಿಗಳು ಕೋವಿಯ ಹಕ್ಕು ಪಾರಂಪರಿಕವಾಗಿ ಪಡೆದುಕೊಂಡ ಬಗ್ಗೆ ವಿವರಿಸಿದರಲ್ಲದೆ, ಹೈಕೋರ್ಟಿನಲ್ಲಿ ಕಾನೂನು ಹೋರಾಟ ಮಾಡಿದ ನಮ್ಮ ಎಲ್ಲಾ ವಕೀಲರ ತಂಡ ಸುಪ್ರೀಂ ಕೋರ್ಟಿನಲ್ಲಿಯೂ ಸೂಕ್ತ ರೀತಿಯಲ್ಲಿ ಕೋವಿ ಹಕ್ಕಿನ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಮೂಲಕ ನ್ಯಾಯ ದೊರೆಯಲು ಶ್ರಮಿಸಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸನ್ಮಾನ: ಇದೇ ಸಂದರ್ಭ ಸ್ಥಳೀಯರಾಗಿ ನಾಡಿನ ಒಳಿತಿಗಾಗಿ ಶ್ರಮಿಸುತ್ತಿರುವ ಹೈಕೋರ್ಟ್ ವಕೀಲ ಮಲ್ಲೇಂಗಡ ಗಗನ್ ಬೆಳ್ಳಿಯಪ್ಪ, ಕೋವಿಡ್-19 ಸಾಂಕ್ರಾಮಿಕ ಸೋಂಕು ನಿಯಂತ್ರಣಾ ಜಾಗೃತಿ ಮತ್ತು ಲಸಿಕಾ ಕಾರ್ಯಕ್ರಮದಲ್ಲಿ ಅವಿಶ್ರಾಂತ ಸೇವೆ ಸಲ್ಲಿಸಿದ ಬಿರುನಾಣಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕಿ ಅಧಿಕಾರಿ ಕಳ್ಳೇಂಗಡ ನಳಿನಿ(ಮಮತಾ), ಆಶಾ ಕಾರ್ಯಕರ್ತೆಯರಾದ ಬಲ್ಯಮೀದೇರಿರ ಪ್ರೀತು, ಕಳಕಂಡ ವಿಷ್ಮಾ ಅವರನ್ನು ಸನ್ಮಾನಿಸಲಾಯಿತು.

ಮರೆನಾಡ್ ಶೂಟರ್ಸ್ ಕ್ಲಬ್‌ನ ಅಧ್ಯಕ್ಷ ಕುಪ್ಪುಡೀರ ಪೊನ್ನು ಮುತ್ತಪ್ಪ, ಕಾರ್ಯದರ್ಶಿ ನೆಲ್ಲೀರ ಧನಂಜಯ, ಖಜಾಂಚಿ ಕಳ್ಳೇಂಗಡ ನವೀನ್ ಚಂಗಪ್ಪ, ಸದಸ್ಯರಾದ ಚೇರಂಡ ಕಾರ್ಯಪ್ಪ, ಬಲ್ಯಮೀದೇರಿರ ಶರೀನ್, ಕಾಯಪಂಡ ಮೋಹನ್, ಕುಪ್ಪುಡೀರ ಪ್ರಖ್ಯಾತ್, ಕುಪ್ಪಣಮಾಡ ಮಂಜು, ನೆಲ್ಲೀರ ರಾಕೇಶ್, ಚೋನೀರ ಸೋಮಣ್ಣ, ಚೋನೀರ ಸಜನ್ ಉತ್ತಪ್ಪ, ಕಾಳಿಮಾಡ ಶರತ್, ಕರ್ತಮಾಡ ಸಜನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಇತರೆ ಸುದ್ದಿಗಳು..

ಶ್ರೀಲಂಕಾದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು: ಎಲ್ಲಾ ಸಚಿವರು ರಾಜೀನಾಮೆ

ಪ್ರಧಾನಿಯಾಗಿ ರಾಜಪಕ್ಸೆ ಮುಂದುವರಿಕೆ



ಕೊಲಂಬೊ, ಏ. 4- ತೀವ್ರಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾದಲ್ಲಿ ಭಾನುವಾರ ತಡರಾತ್ರಿ ಪ್ರಮುಖ ಬೆಳವಣಿಗೆಯೊಂದು ಸಂಭವಿಸಿದೆ. ಶ್ರೀಲಂಕಾದ ಸಂಸತ್ತಿನ ಎಲ್ಲಾ ಸಚಿವರುಗಳು ತಮ್ಮ ತಮ್ಮ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ನೀಡಿದ್ದಾರೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದವರಲ್ಲಿ ರಾಜಪಕ್ಸೆ ಅವರ ಪುತ್ರ ನಮಲ್ ರಾಜಪಕ್ಸ ಕೂಡ ಸೇರಿದ್ದಾರೆ.

ಮಹಿಂದ ರಾಜಪಕ್ಸೆ ಅವರ ರಾಜೀನಾಮೆಯ ವರದಿಗಳನ್ನು ಪ್ರಧಾನಿ ಕಚೇರಿ ನಿರಾಕರಿಸಿದ ಕೆಲವೇ ಗಂಟೆಗಳ ನಂತರ ಶ್ರೀಲಂಕಾದ ಸಂಸತ್ತಿನ ಎಲ್ಲಾ ಸಚಿವರುಗಳು ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ. ಆದರೆ, ಮಹಿಂದಾ ರಾಜಪಕ್ಸೆ ಪ್ರಧಾನಿಯಾಗಿ ಮುಂದುವರೆದಿದ್ದಾರೆ.

ನಿನ್ನೆ ತಡರಾತ್ರಿ ನಡೆದ ಸಭೆಯಲ್ಲಿ ಎಲ್ಲಾ ಸಚಿವರು ತಮ್ಮ ಸ್ಥಾನಗಳಿಗೆ ಸಾಮೂ ಹಿಕ ರಾಜೀನಾಮೆ ನೀಡಿದ್ದಾರೆಂದು ತಿಳಿದುಬಂದಿದೆ. ರಾಜಪಕ್ಸ ಅವರ ಪುತ್ರ ನಮಲ್ ರಾಜಪಕ್ಸ ಅವರು ಕ್ರೀಡಾ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.

ರಾಜೀನಾಮೆ ನೀಡಿದ ಬಳಿಕ ಟ್ವೀಟ್ ಮಾಡಿದ್ದ ನಮಲ್ ರಾಜಪಕ್ಸೆ ಅವರು, ಎಲ್ಲ ಖಾತೆಗಳಿಗೆ ನನ್ನ ರಾಜೀನಾಮೆಯನ್ನು ತಕ್ಷಣವೇ ಜಾರಿಗೆ ಬರುವಂತೆ ಅಧ್ಯಕ್ಷರಿಗೆ ತಿಳಿಸಿದ್ದೇನೆಂದು ಹೇಳಿದ್ದಾರೆ.

ನಿನ್ನೆ ಬೆಳಿಗ್ಗೆ ಆರ್ಥಿಕ ಬಿಕ್ಕಟ್ಟಿನ ವಿರುದ್ಧ ವಿದ್ಯಾರ್ಥಿಗಳು ರಾಡೆನಿಯಾ ವಿಶ್ವವಿದ್ಯಾಲಯದ ಹೊರಗೆ ಪ್ರತಿಭಟನೆ ನಡೆಸಿದ್ದರು. ಈ ವೇಳೆ ಸರ್ಕಾರದ ವಾರಾಂತ್ಯದ ಕರ್ಫ್ಯೂವನ್ನು ಧಿಕ್ಕರಿಸಿ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಲು ಅಶ್ರುವಾಯು ಹಾಗೂ ಫಿರಂಗಿಗಳನ್ನು ಬಳಸಿದ್ದರು.

ರಾಜಧಾನಿ ಕೊಲಂಬೊದಲ್ಲಿ ವಿರೋಧ ಪಕ್ಷದ ನಾಯಕರು ನಡೆಸಿದ ಮೆರವಣಿಗೆಯಲ್ಲಿ 100 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಅವರ ಮನೆಯ ಬಳಿ ಪ್ರತಿಭಟನಾಕಾರರು ಬರುತ್ತಿದ್ದಂತೆ ಪೊಲೀಸರು ಮತ್ತು ಸೈನಿಕರು ತಡೆದರು. ಈ ನಡುವೆ ಅಧ್ಯಕ್ಷ ಗೋಟಬಯ ರಾಜಪಕ್ಸೆ ವಿರುದ್ಧದ ಪ್ರತಿಭಟನೆಯನ್ನು ಹತ್ತಿಕ್ಕಲು ಶ್ರೀಲಂಕಾ ಸರ್ಕಾರ ಶನಿವಾರ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್, ವಾಟ್ಸಪ್ ಮತ್ತು ಯೂಟ್ಯೂಬ್ ಸೇರಿದಂತೆ ಎಲ್ಲಾ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಶನಿವಾರ ಸಂಜೆ 6 ಗಂಟೆಯಿಂದ ಸೋಮವಾರ ಬೆಳಿಗ್ಗೆ 6 ರವರೆಗೆ ಕರ್ಫ್ಯೂ ಅನ್ನು ವಿಧಿಸಲಾಗಿದೆ. ಕರ್ಫ್ಯೂ ಉಲ್ಲಂಘಿಸಿದ್ದಕ್ಕಾಗಿ ಕನಿಷ್ಠ 664 ಜನರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1948ರ ಸ್ವಾತಂತ್ರ್ಯದ ಬಳಿಕ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ಒದ್ದಾಡುತ್ತಿರುವ ಶ್ರೀಲಂಕಾ ಕಳೆದೊಂದು ವಾರದಿಂದ ವಿದ್ಯುತ್ ಕಡಿತದ ಜೊತೆಗೆ ಆಹಾರ, ಇಂಧನ ಮತ್ತು ಇತರ ಅಗತ್ಯ ವಸ್ತುಗಳ ತೀವ್ರ ಕೊರತೆಯನ್ನು ಎದುರಿಸುತ್ತಿದೆ.

ಸಿಬಿಐ ಪಂಜರದ ಗಿಳಿಯಲ್ಲ, ಅದು ಸ್ವತಂತ್ರ ಸಂಸ್ಥೆ

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು

ನವದೆಹಲಿ, ಏ. 4- ಸಿಬಿಐ ಇನ್ನು 'ಪಂಜರದ ಗಿಳಿ' ಅಲ್ಲ. ಅದು ಸ್ವತಂತ್ರ್ಯವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.



ಸಿಬಿಐ ಭಾರತದ ಅತ್ಯುನ್ನತ ಅಪರಾಧ ತನಿಖಾ ಸಂಸ್ಥೆಯಾಗಿ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದೆ. ಈ ಹಿಂದೆ ಸರ್ಕಾರದಲ್ಲಿದ್ದ ಜನರು ಕೆಲವೊಮ್ಮೆ ತನಿಖೆಯಲ್ಲಿ ತೊಡಕಾಗುತ್ತಿದ್ದರು. ಈ ಹಿಂದೆ ಕೆಲವು ಅಧಿಕಾರಿಗಳು ಎದುರಿಸಿದ್ದ ಸವಾಲುಗಳು ಈಗ ಅಸ್ತಿತ್ವದಲ್ಲಿಲ್ಲ ಎಂದು ಅವರು ಹೇಳಿದರು.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಸಿಬಿಐ ಇನ್ನು ಪಂಜರದ ಗಿಳಿಯಲ್ಲ. ಅದು ಅದರ ಕರ್ತವ್ಯವನ್ನು ನಿಷ್ಠೆಯಿಂದ ನಿಭಾಯಿಸುತ್ತಿದೆ ಎಂದು ಸಿಬಿಐನ ತನಿಖಾ ಅಧಿಕಾರಿಗಳ ಮೊದಲ ಸಮ್ಮೇಳನದಲ್ಲಿ ಶನಿವಾರ ತಮ್ಮ ಭಾಷಣದ ಕಿರು ವಿಡಿಯೊವನ್ನು ಅವರು ಹಂಚಿಕೊಂಡಿದ್ದಾರೆ. 'ಒಂದು ಕಾಲವಿತ್ತು, ಸರ್ಕಾರದಲ್ಲಿರುವ ಜನರು ಕೆಲವೊಮ್ಮೆ ತನಿಖೆಗೆ ತೊಂದರೆಯಾಗಿ ಪರಿಣಮಿಸುತ್ತಿದ್ದರು. ಅದಿನ್ನು ನನಗೆ ಚೆನ್ನಾಗಿ ನೆನಪಿದೆ. ಆದರೆ ಇಂದು ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಪ್ರಧಾನಿ ಇದ್ದಾರೆ. ಅಧಿಕಾರದಲ್ಲಿರುವ ಜನರು ಭ್ರಷ್ಟಾಚಾರ ದಲ್ಲಿ ತೊಡಗಿದಾಗ ಉಂಟಾಗುವ ತೊಂದರೆಗಳೇನು ಎಂಬುದು ನನಗೆ ಗೊತ್ತು. ಇದು ಸಿಬಿಐಗೆ ಕೂಡ ಕಷ್ಟ. ಈ ಸಂಬಂಧ ನ್ಯಾಯಾಂಗದಿಂದಲೂ ನಾವು ಹಿಂದೆ ಟೀಕೆಗಳನ್ನು ಎದುರಿಸಿದ್ದೇವೆ. ಇದೀಗ ಈ ಎಲ್ಲ ಅಡೆತಡೆಗಳನ್ನು ದಾಟಿ ನಿಂತಿದ್ದೇವೆ ಎಂದಿದ್ದಾರೆ. 2013ರ ಕಲ್ಲಿದ್ದಲು ಹಂಚಿಕೆ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್, ಸಿಬಿಐ 'ಪಂಜರದ ಗಿಳಿ' ಎಂದು ಹೇಳಿತ್ತು. ಏಪ್ರಿಲ್ 1 ರಂದು ಸಿಬಿಐನ 19ನೇ ಡಿಪಿ ಕೊಹ್ಲಿ ಸ್ಮಾರಕ ಉಪನ್ಯಾಸವನ್ನು ಉದ್ದೇಶಿಸಿ ಮಾತನಾಡಿದ್ದ ಭಾರತದ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ಕೆಲವು ಸಂದರ್ಭಗಳಲ್ಲಿ ಸಿಬಿಐನ ಕ್ರಮಗಳು ಮತ್ತು ನಿಷ್ಕ್ರಿಯತೆಗಳು ಪ್ರಶ್ನೆಗಳನ್ನು ಹುಟ್ಟುಹಾಕಿರುವುದರಿಂದ ಸಿಬಿಐನ ವಿಶ್ವಾಸಾರ್ಹತೆಯು ಕಾಲಾನಂತರದಲ್ಲಿ ಆಳವಾದ ಸಾರ್ವಜನಿಕ ಪರಿಶೀಲನೆಗೆ ಒಳಗಾಗಿದೆ.

ಶ್ರೀಲಂಕಾ ಸೆಂಟ್ರಲ್ ಬ್ಯಾಂಕ್ ಗವರ್ನರ್ ರಾಜೀನಾಮೆ

ಕೊಲಂಬೊ, ಏ. 4- ಶ್ರೀಲಂಕಾದಲ್ಲಿ ಭುಗಿಲೆದ್ದಿರುವ ಆರ್ಥಿಕ ಬಿಕ್ಕಟ್ಟು ಸಮಸ್ಯೆ ಇನ್ನಷ್ಟು ಉಲ್ಬಣಗೊಂಡಿದ್ದು, ಇದರ ನಡುವೆಯೇ ಶ್ರೀಲಂಕಾದ ಸೆಂಟ್ರಲ್ ಬ್ಯಾಂಕ್‌ನ ಗವರ್ನರ್ ರಾಜಿನಾಮೆ ನೀಡಿದ್ದಾರೆ. IMF ಬೇಲ್‌ಔಟ್‌ಗಾಗಿ ದ್ವೀಪ ರಾಷ್ಟ್ರಕ್ಕೆ ಹೆಚ್ಚುತ್ತಿರುವ ಕರೆಗಳನ್ನು ವಿರೋಧಿಸಿದ ಶ್ರೀಲಂಕಾದ ಸೆಂಟ್ರಲ್ ಬ್ಯಾಂಕ್ ಗವರ್ನರ್, ಹದಗೆಡುತ್ತಿರುವ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಪ್ರತಿಭಟನೆಗಳು ಉಲ್ಬಣಗೊಳ್ಳುತ್ತಿದ್ದಂತೆ ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದರು. ಅಧ್ಯಕ್ಷ ಗೋಟಬಯ ರಾಜಪಕ್ಸೆ ಮತ್ತು ಪ್ರಧಾನಿ ಮಹಿಂದಾ ರಾಜಪಕ್ಸೆ ಅವರನ್ನು ಹೊರತುಪಡಿಸಿ ಶ್ರೀಲಂಕಾದ ಕ್ಯಾಬಿನೆಟ್‌ನ ಪ್ರತಿಯೊಬ್ಬ ಸದಸ್ಯರು ಭಾನುವಾರ ತಡರಾತ್ರಿ ಬಿಕ್ಕಟ್ಟನ್ನು ನಿರ್ವಹಿಸಲು ಹೊಸ ಆಡಳಿತಕ್ಕೆ ದಾರಿ ಮಾಡಿಕೊಡಲು ಸಾಮೂಹಿಕವಾಗಿ ರಾಜೀನಾಮೆ ನೀಡಿದ ನಂತರ ಅವರು ಕೆಳಗಿಳಿದರು ಎಂದು ಅಜಿತ್ ಕ್ಯಾಬ್ರಾಲ್ ಹೇಳಿದರು.



ಆರ್.ಎನ್. ನಾಯಕ್ ಕೊಲೆ ಪ್ರಕರಣ; ಬನ್ನಂಜೆ ರಾಜಾ ಸೇರಿ ನಾಲ್ವರಿಗೆ ಜೀವಾವಧಿ ಶಿಕ್ಷೆ

ಬೆಳಗಾವಿ, ಏ. 4- ಭೂಗತ ಪಾತಕಿ ಬನ್ನಂಜೆ ರಾಜಾ ಸೇರಿ ನಾಲ್ವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಪ್ರಕಟಿಸಲಾಗಿದೆ. ಬೆಳಗಾವಿಯ ಕೋಕಾ ನ್ಯಾಯಾಲಯ ಇಂದು (ಏ.4, ಸೋಮವಾರ) ತೀರ್ಪು ಪ್ರಕಟಿಸಿದೆ. ಉತ್ತರ ಕನ್ನಡ ಜಿಲ್ಲೆ ಅಂಕೋಲಾದಲ್ಲಿ ಅದಿರು ಉದ್ಯಮಿ ಆರ್.ಎನ್. ನಾಯಕ್ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಪ್ರಕಟಿಸಲಾಗಿದ್ದು, 3 ಕೋಟಿ ಹಫ್ತಾ ನೀಡದಿದ್ದಕ್ಕೆ ಆರ್.ಎನ್. ನಾಯಕ್‌ರನ್ನು ಹತ್ಯೆ ಮಾಡಲಾಗಿತ್ತು. 2013ರ ಡಿಸೆಂಬರ್ 21ರಂದು ಉದ್ಯಮಿ ನಾಯಕ್ ಕೊಲೆಯಾಗಿತ್ತು. ಸುಪಾರಿ ನೀಡಿ ಕೊಲೆ ಮಾಡಿಸಿದ ಆರೋಪ ಸಾಬೀತಾದ ಹಿನ್ನೆಲೆ, ಬನ್ನಂಜೆ ರಾಜಾ ಸೇರಿ ನಾಲ್ಕು ಮಂದಿಗೆ ಜೀವಾವಧಿ ಶಿಕ್ಷೆ ಪ್ರಕಟವಾಗಿದೆ. 2013ರ ಡಿಸೆಂಬರ್ 21ರಂದು ಅಂಕೋಲಾದಲ್ಲಿ ನಡೆದ ಆರ್.ಎನ್. ನಾಯಕ್ ಕೊಲೆ ಪ್ರಕರಣ ಸಂಬಂಧ ಆರೋಪಿಗಳ ವಿರುದ್ಧ ಕೋಕಾ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿತ್ತು. 7 ವರ್ಷಗಳ ಸುದೀರ್ಘ ವಿಚಾರಣೆ ಬಳಿಕ ಬುಧವಾರ ತೀರ್ಪು ಹೊರಬಿದ್ದಿದೆ. ಜೀವಾವಧಿ ಶಿಕ್ಷೆಗೆ ಒಳಗಾದ ನಾಲ್ವರು ಅಪರಾಧಿಗಳ ಹೆಸರು ಎ-2 ಉತ್ತರ ಪ್ರದೇಶ ಮೂಲದ ಜಗದೀಶ್ ಪಟೇಲ್ ಎ-3 ಬೆಂಗಳೂರಿನ ಅಭಿ ಬಂಡಗಾರ್ ಎ-4 ಉಡುಪಿಯ ಗಣೇಶ್ ಭಜಂತ್ರಿ ಎ-9 ಉಡುಪಿಯ ಬನ್ನಂಜೆ ರಾಜಾ.



ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಆರೋಗ್ಯ ಇಲಾಖೆಯ ಖಾಲಿ ಹುದ್ದೆಗಳಿಗೆ ಕೊರೊನಾ ವಾರಿಯರ್ಸ್ ನೇಮಿಸಲು ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಏ.4– ಕೊರೊನಾ ವಾರಿಯರ್ಸ್‌ಗಳಾಗಿ ನೇಮಕವಾಗಿರುವ ಆರೋಗ್ಯ ಇಲಾಖೆಯ 6,463 ನೌಕರರನ್ನು ಇಲಾಖೆಯ ಖಾಲಿಯಿರುವ ಹುದ್ದೆಗಳಿಗೆ ನೇಮಕ ಮಾಡಬೇಕು ಎಂದು ಒತ್ತಾಯಿಸಿ ನಗರದಲ್ಲಿ ಸೋಮವಾರ ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘ ಹಾಗೂ ಎನ್‌ಎಸ್‌ಯುಐ ನೇತೃತ್ವದಲ್ಲಿ ಕೊರೊನಾ ವಾರಿಯರ್ಸ್‌ಗಳು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ, ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ, ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೊರೊನಾ ವಾರಿಯರ್ಸ್‌ಗಳಾಗಿ ಕೆಲಸ ಮಾಡಿರುವ ನಮ್ಮನ್ನು ಇಲಾಖೆಯ ಖಾಲಿ ಇರುವ ಹುದ್ದೆಗಳಿಗೆ ನೇಮಿಸಿ, ಕೆಲಸದಲ್ಲಿ ಮುಂದುವರಿಸಲು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕು. ಹಲವು ಜಿಲ್ಲೆಗಳಲ್ಲಿ ಬಾಕಿ ಉಳಿಸಿ ಕೊಂಡಿರುವ ವೇತನ ಹಾಗೂ ಸರ್ಕಾರ ಘೋಷಿಸಿದ ಕೋವಿಡ್ ವಿಶೇಷ ಪ್ರೋತ್ಸಾಹ ಧನವನ್ನು ತಕ್ಷಣವೇ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಕೋವಿಡ್–19 ಮಹಾಮಾರಿ ದೇಶವ್ಯಾಪಿ ಆವರಿಸಿಕೊಂಡು ಜನರಲ್ಲಿ ಆತಂಕ ಸೃಷ್ಟಿಯಾದಂತಹ ಸಂದರ್ಭದಲ್ಲಿ ಸರ್ಕಾರವು ಮುತುವರ್ಜಿವಹಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕರು, ಲ್ಯಾಬ್ ಟೆಕ್ನಿಷಿಯಲ್, ಅರವಳಿಕೆ ತಜ್ಞರು, ಫಾರ್ಮಾಸಿಸ್ಟ್, ಡೇಟಾ ಎಂಟ್ರಿ ಅಪರೇಟರ್, ಕಿರಿಯ ಮಹಿಳಾ/ ಪುರುಷ ಆರೋಗ್ಯ ಸಹಾಯಕರು ಮತ್ತು 'ಡಿ' ಗ್ರೂಪ್ ಹುದ್ದೆಗಳನ್ನು ನೇಮಕ ಮಾಡಲಾಗಿತ್ತು ಎಂದರು.

ಇದರೊಂದಿಗೆ ಸರ್ಕಾರದ ವಿವಿಧ ಆದೇಶಗಳ ಮೂಲಕ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಮುಂದಿನ ಖಾಯಂ ನೇಮಕಾತಿ ಆಗುವವರೆಗೂ ನಮ್ಮನ್ನು ನೇಮಕ ಮಾಡಿಕೊಳ್ಳಲಾಗಿತ್ತು ಇಲಾಖೆಗೆ ನೇಮಕಗೊಂಡ ನಾವು ಜೀವದ ಹಂಗು ತೊರೆದು ಕೆಲಸ ಮಾಡಿದ್ದೇವೆ. ಬಳಿಕ, ನಮ್ಮ ಸಂಘದ ಮೂಲಕ ಮಾರ್ಚ್‌ನಲ್ಲಿ ನಮ್ಮನ್ನು ಮುಂದುವರಿಸಬೇಕು ಎಂದು ಮನವಿ ಸಲ್ಲಿಸಿದಾಗ ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಇಲಾಖೆಯಿಂದ ಭರವಸೆ ನೀಡಲಾಗಿತ್ತು. ಆದರೆ, ಮಾ. 31ರಂದು ನಮ್ಮನ್ನು ಮುಂದುವರೆಸಲಾಗದು ಎಂಬ ಇಲಾಖೆ ಆದೇಶಿಸಿದ್ದು, ನಮಗೆ ಆಘಾತ ಉಂಟಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ನಾವು ಕೆಲಸದ ಮೇಲೆ ನಂಬಿಕೆಯಿಟ್ಟುಕೊಂಡು ಬದುಕು ಕಟ್ಟಿಕೊಂಡಿದ್ದೇವೆ. ಇಡೀ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ ಅಲ್ಲದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದು, ನಮ್ಮ ಸೇವೆಗಳನ್ನು ಪರಿಗಣಿಸಿ ನಮ್ಮನ್ನು ಸೇವೆಯಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್, ವಾರಿಯರ್ಸ್‌ಗಳಾದ ವಿಕಾಸ್, ಜೀವನ್ ಅರುಣ್, ಶಿವು, ಜೀವಿತ ದುಂಡುಶೆಟ್ಟಿ ರಜನ್, ರಶ್ಮಿ ರಾಧಿಕಾ, ಕನ್ಯಾಕುಮಾರಿ, ಜ್ಯೋತಿ, ಎಂ.ಸಿದ್ದರಾಜು, ಮಹದೇವಸ್ವಾಮಿ, ಅಶೋಕ್, ಸ್ವಾಮಿ, ಮಂಜುನಾಥ್ ಇತರರು ಪಾಲ್ಗೊಂಡಿದ್ದರು.

ಉಮ್ಮತ್ತೂರಿನಲ್ಲಿ ನಿಷೇಧಾಜ್ಞೆ

ಚಾಮರಾಜನಗರ, ಏ.4– ತಾಲೂಕಿನ ಉಮ್ಮತ್ತೂರು ಗ್ರಾಮದ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನವನ್ನು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 42 ಮತ್ತು 43ರನ್ವಯ ಘೋಷಿತ ಸಂಸ್ಥೆಯೆಂದು ಸರ್ಕಾರ ಆದೇಶ ಹೊರಡಿಸಿದೆ.

ಈ ಸಂಬಂಧ ಹೈ ಕೋರ್ಟ್ ಏ.1ರಂದು ಸರ್ಕಾರದ ಆದೇಶವನ್ನು ಯಥಾಸ್ಥಿತಿ ಮುಂದುವರೆಸಿಕೊಂಡು ಹೋಗಲು ಆದೇಶ ನೀಡಿರುವ ಹಿನ್ನೆಲೆಯಲ್ಲಿ ಉಮ್ಮತ್ತೂರು ಗ್ರಾಮದ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನದ ಸುತ್ತಲೂ ಹಾಗೂ ಉಮ್ಮತ್ತೂರು ಗ್ರಾಮದಲ್ಲಿ ಏ. 4ರ ಸಂಜೆ 6 ಗಂಟೆಯಿಂದ ಏ. 5ರ ರಾತ್ರಿ 10ಗಂಟೆವರೆಗೆ ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ ಅವರು ಆದೇಶಿಸಿದ್ದಾರೆ.

ಕೆರೆಯಲ್ಲಿ ಮುಳುಗಿ ಬಾಲಕ ಸಾವು

ಗುಂಡ್ಲುಪೇಟೆ, ಏ.4(ಸೋಮ್.ಜಿ)– ಕೈ, ಕಾಲು ತೊಳೆಯಲು ಕೆರೆಗೆ ಹೋಗಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಶಿವಪುರ ಸಮೀಪದ ಕಲ್ಲುಕಟ್ಟೆ ಕೆರೆಯಲ್ಲಿ ಸೋಮವಾರ ನಡೆದಿದೆ.



ಕೋಡಹಳ್ಳಿ ಗ್ರಾಮದ ನಿವಾಸಿ ಮೂರ್ತಿ ಅವರ ಪುತ್ರ ವೈಶಾಲ್(17) ಮೃತಪಟ್ಟ ಬಾಲಕ.

ಈತ ಸ್ನೇಹಿತರೊಂದಿಗೆ ಕೈ, ಕಾಲು ತೊಳೆಯಲು ಕಲ್ಲುಕಟ್ಟೆ ಕೆರೆಗೆ ಹೋಗಿದ್ದಾಗ ಕಾಲು ಜಾರಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಮೃತ ದೇಹವನ್ನು ಕೆರೆಯಿಂದ ಹೊರ ತೆಗೆದು ಪೋಷಕರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ಪೋಷಕರು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ.

ಶ್ರೀ ಪುಣ್ಯಾನಂದಪುರಿ ಶ್ರೀಗಳ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ



ಚಾಮರಾಜನಗರ, ಏ.4– ನಾಯಕ ಸಮುದಾಯದ ಅಭಿವೃದ್ಧಿ ಹರಿಕಾರರಾಗಿದ್ದ ಶ್ರೀವಾಲ್ಮೀಕಿ ಗುರುಪೀಠದ ಲಿಂಗೈಕ್ಯ ಶ್ರೀಪುಣ್ಯಾನಂದಪುರಿ ಸ್ವಾಮೀಜಿ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಹೇಳಿದರು.

ನಗರದ ಸಂತೇಮರಳ್ಳಿ ವೃತ್ತದಲ್ಲಿ ನಾಯಕ ಸಮಾಜದ ವತಿಯಿಂದ ನಡೆದ ಶ್ರೀ ಪುಣ್ಯಾನಂದಪುರಿ ಸ್ವಾಮೀಜಿ ಅವರ 15 ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಶ್ರೀಗಳು ಜನಾಂಗದ ಕಣ್ಮಣಿಗಳಾಗಿದ್ದರು. ಸಮುದಾಯದ ಹಿತಕ್ಕಾಗಿ ಶ್ರಮಿಸಿ, ಸಮಾಜಕ್ಕೆ ಬಹಳಷ್ಟು ಕೆಲಸ ಮಾಡುವ ಮೂಲಕ ಕೊಡುಗೆ ನೀಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯ ಶಿವರಾಜ್, ಯ.ರಾಜುನಾಯಕ, ರಂಗಸ್ವಾಮಿ ಮಮ್ಮಿ, ಶಂಕರ್, ಆಟೋ ರಘು, ಆಟೋ ಸುಬ್ಬು, ಚಂದ್ರು, ಬಸವರಾಜು, ಸಂತು, ಸತೀಶ್, ಮಣಿ, ಚೇತನ್, ಶ್ರೀನಿವಾಸ, ಯೋಗೇಶ್, ರಾಜು, ಮನು, ಇತರರು ಹಾಜರಿದ್ದರು.

ನಗರಸಭೆ ಕಾರ್ಯವೈಖರಿ ಬಗ್ಗೆ ಸಚಿವರಿಗೆ ದೂರು ಹಿನ್ನೆಲೆ ಸಚಿವರ ವಿಶೇಷ ಕರ್ತವ್ಯಾಧಿಕಾರಿ ನಗರಸಭೆಗೆ ಭೇಟಿ



ಚಾಮರಾಜನಗರ, ಏ.4(ಎಸ್‌ಎಸ್)– ಇಲ್ಲಿನ ನಗರಸಭೆಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ನಿಗದಿತ ಸಮಯಕ್ಕೆ ಆಗದ ಬಗ್ಗೆ ಸಾರ್ವಜನಿಕರು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎಂ.ಕೆ.ಸ್ವಾಮಿ ಅವರು ನಗರಸಭೆಗೆ ಸೋಮವಾರ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಬಳಿ ಇರುವ ನಗರಸಭೆ ಕಾರ್ಯಾಲಯಕ್ಕೆ ಭೇಟಿ ನೀಡಿದ ಅವರು, ಅಲ್ಲಿದ್ದ ನಾಗರಿಕರಿಂದ ನಗರಸಭೆ ಕಾರ್ಯವೈಖರಿ ಬಗ್ಗೆ ಮಾಹಿತಿ ಕಲೆ ಹಾಕಿದರು. ನಂತರ ಪೌರಾಯುಕ್ತ ಕರಿಬಸಯ್ಯ ಅವರನ್ನು ಭೇಟಿ ಮಾಡಿ, ನಗರಸಭೆಯ ಬಗ್ಗೆ ಸಾರ್ವಜನಿಕರು ದೂರುತ್ತಿರುವ ಬಗ್ಗೆ ವಿವರಿಸಿದರು.

ಇನ್ನೆರಡು– ಮೂರು ದಿನಗಳಲ್ಲಿ ದೂರುಗಳಿಗೆ ಕಡಿವಾಣ ಹಾಕಬೇಕು. ಸಾರ್ವಜನಿಕರ ಕೆಲಸಗಳು ನಿಗದಿತ ಅವಧಿಯೊಳಗೆ ಆಗಬೇಕು. ಮಹಿಳಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳೇ ನಗರಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ದೂರುಗಳು ಬಾರದಂತೆ ಕೆಲಸಗಳು ಆಗಬೇಕಿತ್ತು. ಸಾರ್ವಜನಿಕರಿಂದ ದೂರುಗಳು ಮತ್ತು ಸಾರ್ವಜನಿಕರನ್ನು ಅಲೆದಾಡಿಸುತ್ತಿರುವುದು ಇದೇ ರೀತಿ ಮುಂದುವರೆದರೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹಾಗೂ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಗೆ ನಗರಸಭೆಯ ವಸ್ತುಸ್ಥಿತಿಯ ಬಗ್ಗೆ ವರದಿ ಸಲ್ಲಿಸಲಾಗುವುದು ಎಂದು ಸ್ವಾಮಿ ಅವರು ತಿಳಿಸಿದ್ದಾರೆ.

ಏ.7ರಂದು ಬೃಹತ್ ಉದ್ಯೋಗ ಮೇಳ

ಚಾಮರಾಜನಗರ, ಏ.4– ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಇವರ ಆಶ್ರಯದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಏ.7 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಿದೆ.

ಭಾಗವಹಿಸುವವರು http://skillconnect.kaushalkar.com/app/student-jobfair ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು.

ಮಾಹಿತಿಗೆ ದೂ.ಸಂ.08226–224430, ಮೊ:8722399936, 7892190137 ಮತ್ತು 8884865299 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ

ಕೊಳ್ಳೇಗಾಲ, ಏ.4(ನಾಗೇಂದ್ರಸ್ವಾಮಿ)– ಅಖಿಲ ಭಾರತ ವೀರಶೈವ ಮಹಾಸಭೆಯ ತಾಲೂಕು ಯುವ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮವನ್ನು ಏ.6ರಂದು ಕೊಳ್ಳೇಗಾಲದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರಂಭವನ್ನು ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್.ಪರಮಶಿವಯ್ಯ ಉದ್ಘಾಟಿಸಲಿದ್ದಾರೆ. ಆಲಗಳ್ಳಿ ಮಠಾಧ್ಯಕ್ಷ ಶಿವಕುಮಾರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಅಬ್ಬಿಗೆರೆ, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಗುಂಡ್ಲುಪೇಟೆ ಶಾಸಕ ನಿರಂಜನ್‌ಕುಮಾರ್, ಡಾ.ಪ್ರೀತನ್ ನಾಗಪ್ಪ ಸೇರಿದಂತೆ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಕಾಮಗೆರೆ ಮಧು ತಿಳಿಸಿದ್ದಾರೆ



ಬೇಗೂರು ಸಮೀಪದ ಕಬ್ಬಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಸಿದ್ದರಾಮೇಶ್ವರ ದೇವರ ಉತ್ಸವ ಹಾಗೂ ಬಸವನನ್ನು ಅಲಂಕಾರಗೊಳಿಸಿ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಗ್ರಾಮಸ್ಥರು ಪಾಲ್ಗೊಂಡಿದ್ದರು.
ಚಿತ್ರ: ಕಿರಣ್‌ಬೇಗೂರು.

ಬದನಗುಪ್ಪೆ ಡೇರಿಗೆ ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆ



ಬದನಗುಪ್ಪೆ.ಏ.4(ಮಲ್ಲಣ್ಣ)– ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಶಿವಮಾದಪ್ಪ ಉಪಾಧ್ಯಕ್ಷರಾಗಿ ರೇವೇಗೌಡ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವಮಾದಪ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರೇವೇಗೌಡ ಅವರನ್ನು ಹೊರತುಪಡಿಸಿ, ಉಳಿದ ಯಾವೊಬ್ಬ ಸದಸ್ಯರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಎಂ.ಎಸ್. ದಯಾನಂದ್ ಅವರು ಅವಿರೋಧ ಆಯ್ಕೆ ಘೋಷಿಸಿದರು.

ಸಂಘದ ನೂತನ ನಿರ್ದೇಶಕರು, ಮಾಜಿ ಅಧ್ಯಕ್ಷರು, ನಿರ್ದೇಶಕರು, ಗ್ರಾಪಂ ಸದಸ್ಯರು, ಗ್ರಾಮಸ್ಥರು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು. ಈ ವೇಳೆ ಡೇರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಸವರಾಜು, ಸಿಬ್ಬಂದಿ, ಹಾಲು ಉತ್ಪಾದಕ ಸಂಘದ ಸದಸ್ಯರು ಹಾಜರಿದ್ದರು.

ಮೈಸೂರು ನಗರ ಸುದ್ದಿಗಳು..

ಕಿವಿಯೊಳಗೆ ಗುಂಯ್ ಶಬ್ದ', 'ತಲೆ ಸುತ್ತುವಿಕೆ'ಗೆ ಆಯಿಷ್‌ನಲ್ಲಿ ಸೂಕ್ತ ಚಿಕಿತ್ಸೆ



ಬದಲಾಗುತ್ತಿರುವ ಜೀವನ ಶೈಲಿಯಿಂದಾಗಿ ಕಿವಿಯೊಳಗೆ ಗುಂಯ್ ಗುಟ್ಟುವುದು, ತಲೆ ಸುತ್ತುವ ಸಮಸ್ಯೆ ಜನರಲ್ಲಿ ಹೆಚ್ಚಾಗುತ್ತಿದೆ. ಆದ್ದರಿಂದ ಪ್ರತ್ಯೇಕವಾಗಿ ಎರಡು ಸಮಸ್ಯೆಗಳಿಗೂ ವಿಶೇಷ ಚಿಕಿತ್ಸೆ ನೀಡಲಾಗುತ್ತಿದೆ. ತಜ್ಞ ವೈದ್ಯರಿಂದ ಚಿಕಿತ್ಸೆ ದೊರಕಲಿದ್ದು, ವ್ಯಾಯಾಮಗಳ ಮೂಲಕವೂ ಚಿಕಿತ್ಸೆ ನೀಡಲಾಗುತ್ತಿದೆ.
- ಡಾ.ಎಂ.ಪುಷ್ಪಾವತಿ, ನಿರ್ದೇಶಕಿ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ

ಮೈಸೂರು, ಏ.4(ಎಂಕೆ)– ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ(ಆಯಿಷ್)ಯಲ್ಲಿ ಕಿವಿಯೊಳಗೆ ಗುಂಯ್‌ಗುಟ್ಟುವುದು(ಕಿವಿಮೊರೆತ–Tinnitus) ಹಾಗೂ ತಲೆ ಸುತ್ತುವುದು (ತಲೆತಿರುಗುವಿಕೆ–Vertigo) ಕ್ಕೆ ಪ್ರತ್ಯೇಕವಾಗಿ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ.

ಶಾಶ್ವತ ಕಿವುಡುತನಕ್ಕೆ ಕಾರಣವಾಗುವ ಕಿವಿಮೊರೆತಕ್ಕೆ ಹಾಗೂ ನಿರಂತರ ತಲೆ ತಿರುಗುವುದರಿಂದ ಬೇಸತ್ತವರಿಗೆ ಸೂಕ್ತ ಚಿಕಿತ್ಸೆ ಮೂಲಕ ಗುಣಪಡಿಸಲಾಗುತ್ತಿದೆ. ಕಿವಿಯೊಳಗೆ ವಾಹನಗಳ ಶಬ್ದದ ಆಘಾತ, ಗುಂಯ್ ಎನ್ನುವ ಶಬ್ದ, ತಲೆಯನ್ನು ಮೇಲೆ, ಕೆಳಗೆ ಅಲುಗಾಡಿಸಿದರೆ ತಲೆ ಸುತ್ತುವುದು ಹಾಗೂ ಕಣ್ಣುಗಳು ಮಂಜಾದಂತಾಗುವುದಕ್ಕೆ ಪರಿಹಾರ ನೀಡಲಾಗುತ್ತದೆ.

100ರಲ್ಲಿ 20 ಮಂದಿಗೆ: ಕಿವಿಯೊಳಗೆ ಬಾರೀ ಶಬ್ದ, ಗುಂಯ್ ಎನ್ನುವುದು, ಗುಳುಗುಳು ಎಂದು ಕೇಳಿಸುವುದು ಶಾಶ್ವತ ಕಿವುಡುತನಕ್ಕೆ ಕಾರಣವಾಗುತ್ತದೆ. 100ರಲ್ಲಿ 20 ಜನರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸ್ನಾನ ಮಾಡುವಾಗ ಕಿವಿಯೊಳಗೆ ನೀರು ಹೋದಾಗ, ವಾಹನಗಳು, ಪಟಾಕಿ, ಕಾರ್ಖಾನೆಗಳ ಕರ್ಕಶ ಶಬ್ದಗಳಿಂದಲೂ ಈ ಸಮಸ್ಯೆ ಉಂಟಾಗುತ್ತದೆ. ಸಾಮಾನ್ಯವಾಗಿ ಎಲ್ಲರಲ್ಲೂ ಕಂಡುಬಂದರೂ ತಕ್ಷಣವೇ ಸರಿಯಾಗುತ್ತದೆ. ಆದರೆ ಈ ಸಮಸ್ಯೆ ನಿರಂತರವಾಗಿದ್ದರೆ ತಪ್ಪದೆ ಚಿಕಿತ್ಸೆ ಪಡೆದುಕೊಳ್ಳಬೇಕು. ನಿರ್ಲಕ್ಷ್ಯ ವಹಿಸಿದರೆ ಶಾಶ್ವತವಾಗಿ ಕಿಡುತನ ಉಂಟಾಗುತ್ತದೆ ಎಂದು ಆಯಿಷ್‌ನ ಶ್ರವಣ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಶ್ರೀರಾಜ್ ಎಚ್ಚರಿಸಿದರು.



ಕಿವಿಯೊಳಗೆ ಸದಾ ಗುಂಯ್‌ಗುಟ್ಟುತ್ತಿದ್ದರೆ ನೆಮ್ಮದಿಯೇ ಇಲ್ಲದಂತಾಗುತ್ತದೆ. ಕೆಲಸದಲ್ಲಿ ಏಕಾಗ್ರತೆ ಇಲ್ಲದಂತಾಗುತ್ತದೆ. ಮಾನಸಿಕವಾಗಿ ತೊಂದರೆಗೆ ಒಳಗಾಗಿ ಜೊತೆಗೆ ಆತ್ಮಹತ್ಯೆ ಮಾಡಿಕೊಳ್ಳಬಹುದು. ಕಿವಿಯೊಳಗಿನ ಜೀವಕೋಶಗಳಿಗೆ ತೊಂದರೆಯಾಗಿದ್ದರೆ, ಗೆಡ್ಡೆ ಇದ್ದರೆ ಈ ಸಮಸ್ಯೆ ಇನ್ನೂ ಹೆಚ್ಚಾಗಿ ಬಾಧಿಸುತ್ತದೆ ಎಂದರು.

ಸೂಕ್ತ ಚಿಕಿತ್ಸೆ ಟಿನ್ನಿಟಸ್ ರೀಟ್ರೈನಿಂಗ್ ಥೆರಪಿ (Tinnitus Retraining Therapy), ಅರಿವಿನ ವರ್ತನೆಯ ಚಿಕಿತ್ಸೆ(cognitive behavioral therapy) ಸೇರಿದಂತೆ ಅತ್ಯಾಧುನಿಕ ಸಲಕರಣೆ ಬಳಕೆ ಮೂಲಕ ಚಿಕಿತ್ಸೆ ನೀಡಲಾಗುವುದು. ಈಗಾಗಲೇ ಆಯಿಷ್‌ನಲ್ಲಿ ಪ್ರತಿ ತಿಂಗಳು 30–40 ಜನರು ಕಿವಿ ಗುಂಯ್ ಗುಟ್ಟುವ ಸಮಸ್ಯೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸದ್ಯದಲ್ಲಿಯೇ ಪ್ರತ್ಯೇಕ ಕೇಂದ್ರ ಸ್ಥಾಪನೆಯಾಗಲಿದೆ ಎಂದು ಮಾಹಿತಿ ನೀಡಿದರು.

ತಲೆತಿರುಗುವಿಕೆ: ತಮ್ಮ ಮುಂದಿರುವ ಸುತ್ತಲಿನ ಪ್ರದೇಶವೇ ಸುತ್ತುತ್ತಿರುವಂತೆ ಕಾಣುವ ತಲೆ ಸುತ್ತುವುದು (ತಲೆತಿರುಗುವಿಕೆ–Vertigo) ಸಮಸ್ಯೆ ಇತ್ತೀಚೆಗೆ ಜನರಲ್ಲಿ ಹೆಚ್ಚಾಗುತ್ತಿದೆ. ಆರೋಗ್ಯ ಸಮಸ್ಯೆಗಳಿದ್ದರೆ 10–30 ಸೆಕೆಂಡ್ ತಲೆ ಸುತ್ತುತ್ತಿದ್ದರೆ ನಿಯಂತ್ರಣ ಮಾಡುವುದು ಕಷ್ಟ. ದಿನ ದಿನ ತಲೆ ಸುತ್ತುವುದು ಹೆಚ್ಚಾಗುತ್ತಿದ್ದರೆ ಮನೆಯಿಂದ ಹೊರಗಡೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ ವಾಹನಗಳನ್ನು ಓಡಿಸಲು ಆಗುವುದಿಲ್ಲ ಎಂದು ಆಯಿಷ್‌ನ ಶ್ರವಣ ತಜ್ಞ ಡಾ.ಸುಜೀತ್ ಕುಮಾರ್ ತಿಳಿಸಿದರು.

ಬೆನಿಗ್ನ್ ಪರಾಕ್ಸಿಸ್ಮಲ್ ಪೊಸಿಷನಲ್ ವರ್ಟಿಗೋ(ಬಿಪಿಪಿವಿ) ಸಮಸ್ಯೆ ಹೆಚ್ಚಾಗಿ ಹಿರಿಯ ವಯಸ್ಕರಿಗೆ ಬರಲಿದ್ದು, ಬೆಳಗ್ಗೆ ಎದ್ದ ಕೂಡಲೇ ಎದುರಿಗಿರುವ ಎಲ್ಲವೂ ಸುತ್ತಿದಂತಾಗುತ್ತದೆ. ಪ್ರಪಂಚವು ತಮ್ಮ ಸುತ್ತಲೂ ಸುತ್ತುತ್ತಿದೆ ಎಂಬ ಭಾವನೆ ಮೂಡುವುದು. ತಲೆಯನ್ನು ಅಲುಗಾಡಿಸಿದಷ್ಟು ತಲೆತಿರುಗುವುದು ಹೆಚ್ಚಾಗುತ್ತದೆ. ಈ ವೇಳೆ ತಲೆ ಅಲುಗಾಡಿಸದೆ ಇರುವುದರಿಂದ ಕುತ್ತಿಗೆ ಸಮಸ್ಯೆಯೂ ಉಂಟಾಗಬಹುದು. ಸ್ನಾನ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಚಿಕಿತ್ಸೆ ಅತ್ಯಗತ್ಯವಾಗಿದ್ದು, ಪ್ರತ್ಯೇಕ ಚಿಕಿತ್ಸಾ ವ್ಯಾಯಾಮಗಳ ಮೂಲಕ ತಲೆ ಸುತ್ತುವುದನ್ನು ನಿಯಂತ್ರಿಸಿಕೊಳ್ಳಬಹುದಾಗಿದೆ.

ದುಗ್ಗಟ್ಟಿ ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷೆ ರಾಜೀನಾಮೆ



ಕೊಳ್ಳೇಗಾಲ, ಏ.4– ಯಳಂದೂರು ತಾಲೂಕಿನ ದುಗ್ಗಟ್ಟಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸೋಮವಾರ ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ಉಪವಿಭಾಗಾಧಿಕಾರಿಗಳಿಗೆ ನೀಡಿದ್ದಾರೆ.

ರಾಜಕೀಯ ನಾಯಕರು ಹಾಗೂ ಗ್ರಾಪಂ ಸದಸ್ಯರೊಂದಿಗಿನ ಒಪ್ಪದದಂತೆ ಅಧ್ಯಕ್ಷೆ ವಿಶಾಲಾಕ್ಷಿ, ಉಪಾಧ್ಯಕ್ಷೆ ಸಾವಿತ್ರಿ ಅವರು ಸ್ಥಾನಗಳಿಗೆ ಕಾರ್ಯದರ್ಶಿ ಶಿವಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಉಪವಿಭಾಗಾಧಿಕಾರಿ ಡಾ.ಗಿರೀಶ್ ದಿಲೀಪ್ ಬದೋಲೆ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಕೊಳ್ಳೇಗಾಲ, ಏ.4(ನಾಗೇಂದ್ರ ಸ್ವಾಮಿ) – ತಾಲೂಕಿನ ಆಲಹಳ್ಳಿ ಗ್ರಾಮದ ವ್ಯಕ್ತಿ ಯೋರ್ವ ಕಾಣೆಯಾಗಿರುವ ಕುರಿತು ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಗ್ರಾಮದ ಲೇಟ್ ರಾಚಾರಿ ಪುತ್ರ ಕೇಶವಮೂರ್ತಿ(42) ಕಾಣೆಯಾದ ವ್ಯಕ್ತಿ. ಈತ ಮಾ.25ರಂದು ಟಿ.ನರಸೀಪುರಕ್ಕೆ ಹೋಗಿ ಬರುವುದಾಗಿ ಹೇಳಿ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿರುವುದಿಲ್ಲ. ಈ ಸಂಬಂಧ ಅವರ ಪತ್ನಿ ಶೋಭಾ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ವ್ಯಕ್ತಿಯ ಸುಳಿವು ಪತ್ತೆಯಾದಲ್ಲಿ ಮಾಂಬಳ್ಳಿ ಪೊಲೀಸ್ ಠಾಣೆಯ ದೂ.ಸಂಖ್ಯೆ 9986146097, 9480804654 ಹಾಗೂ 08224 295176 ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕೇಜ್ರಿವಾಲ್ ಸಮ್ಮುಖದಲ್ಲಿ ನಿವೃತ್ತ ಎಡಿಜಿಪಿ ಭಾಸ್ಕರ್ ರಾವ್ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆ



ನವದೆಹಲಿ, ಏ. 4– ನಿವೃತ್ತ ಎಡಿಜಿಪಿ ಭಾಸ್ಕರ್ ರಾವ್ ಇಂದು ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆ ಗೊಂಡಿದ್ದಾರೆ. ಈ ಹಿಂದೆಯೇ ಅವರು ಆಪ್ ಪಕ್ಷಕ್ಕೆ ಸೇರುವ ಗುಮಾನಿಗಳು ಕೇಳಿಬಂದಿದ್ದವು. ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿರುವ ಎಎಪಿ ಕಚೇರಿಯಲ್ಲಿ ದೆಹಲಿ ಮುಖ್ಯಮಂತ್ರಿ ಮತ್ತು ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್ ಸಮ್ಮುಖದಲ್ಲಿ ಭಾಸ್ಕರ್ ರಾವ್ ಆಪ್ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಆಪ್ ನಾಯಕ ಪೃಥ್ವಿ ರೆಡ್ಡಿಯವರೂ ಉಪಸ್ಥಿತರಿದ್ದರು. ಭಾಸ್ಕರ್ ರಾವ್ ಭಾನುವಾರ ಪೊಲೀಸ್ ವೃತ್ತಿಯಿಂದ ಸ್ವಯಂ ನಿವೃತ್ತರಾಗಿದ್ದರು. ರೈಲ್ವೆ ಪೊಲೀಸ್ ಎಡಿಜಿಪಿ ಹುದ್ದೆಗೆ ಸ್ವಯಂ ನಿವೃತ್ತಿ ಕೋರಿ ಸೆಪ್ಟೆಂಬರ್ 2021ರಲ್ಲಿ ಭಾಸ್ಕರ್ ರಾವ್ ರಾಜೀನಾಮೆ ಸಲ್ಲಿಸಿದ್ದರು. ನಿರ್ಧಾರ ಪುನರ್ ಪರಿಶೀಲನೆಗೆ ಕೇಂದ್ರ ಗೃಹ ಸಚಿವಾಲಯ ಅವಕಾಶ ನೀಡಿತ್ತು. ಆದರೆ, ತಮ್ಮ ನಿರ್ಧಾರದಿಂದ ಭಾಸ್ಕರ್ ರಾವ್ ಹಿಂದೆ ಸರಿದಿರಲಿಲ್ಲ.

ಮೈಲ್ಯಾಕ್ ಎಂಪ್ಲಾಯಿಸ್ ಯೂನಿಯನ್ ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು, ಏ. 4– ಮೈಸೂರು ಪೈಂಟ್ಸ್ ಅಂಡ್ ವಾರ್ನಿಷ್ ಎಂಪ್ಲಾಯಿಸ್ ಯೂನಿಯನ್‌ನ ನೂತನ ಅಧ್ಯಕ್ಷರಾಗಿ ಬಿ.ವಿ. ರೇಣುಕುಮಾರ್ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಯೂನಿಯನ್‌ನ ಸರ್ವ ಸದಸ್ಯರ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಉಪಾಧ್ಯಕ್ಷರಾಗಿ ಡಿ.ಕೆ ಪುಟ್ಟೇಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಎನ್. ನಾಗೇಶ್, ಕಾರ್ಯದರ್ಶಿಯಾಗಿ ಜಿ. ಶ್ರೀನಿವಾಸ್, ಸಹ ಕಾರ್ಯದರ್ಶಿಯಾಗಿ ಅಬ್ದುಲ್ ಜಬ್ಬಾರ್, ಖಜಾಂಚಿಯಾಗಿ ಸುರೇಶ್ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶ್ರೀಮತಿ ಎನ್. ಲಲಿತಾ, ಸಲೀಂ ಪಾಷಾ, ಎಸ್. ಪುಟ್ಟಸ್ವಾಮಿ, ಹೆಚ್. ದೇವರಾಜ್, ಸೋಮು, ಪುರುಷೋತ್ತಮ, ಗೌರವ ಅಧ್ಯಕ್ಷರಾಗಿ ಎಚ್.ಎನ್. ಪ್ರಸನ್ನಕುಮಾರ್ ಮತ್ತು ಎಂ.ಸಿ. ಕುಮಾರ್, ಸಲಹೆಗಾರರಾಗಿ ಪುಟ್ಟಯ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸೇನಾ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ನವದೆಹಲಿ, ಏ. 4– ಪಠಾಣ್‌ಕೋಟ್ ಏರ್ ಬೇಸ್‌ಗೆ ತೆರಳುತ್ತಿದ್ದ ಸೇನಾ ಹೆಲಿಕಾಪ್ಟರ್ ತೆರೆದ ಬಯಲಲ್ಲಿ ತುರ್ತು ಭೂಸ್ಪರ್ಶ ಮಾಡಿರುವ ಘಟನೆ ಹಿಮಾಚಲ ಪ್ರದೇಶದಲ್ಲಿ ನಡೆದಿದ್ದು, ತಾಂತ್ರಿಕ ಸಮಸ್ಯೆಯಿಂದಾಗಿ ಉನಾದ ಗ್ಯಾಗ್ರೆಟ್ ವಿಧಾನಸಭಾ ಕ್ಷೇತ್ರದ ನಕಾರೊದಲ್ಲಿ ಹೆಲಿಕಾಪ್ಟರ್ ಇಳಿಸಲಾಗಿದೆ. ಪ್ರತ್ಯಕ್ಷದರ್ಶಿಗಳು ತಮ್ಮ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸೇನೆಯ ಹೆಲಿಕಾಪ್ಟರ್ ಆಕಾಶದಲ್ಲಿ ಸುತ್ತುತ್ತಿರುವುದು ಕಂಡುಬಂದಿತ್ತು. ಕೆಲವೇ ಕ್ಷಣಗಳಲ್ಲಿ ಸೇನಾ ಹೆಲಿಕಾಪ್ಟರ್ ಖಾಲಿ ಮೈದಾನದಲ್ಲಿ ಇಳಿಯಿತು ಎಂದು ತಿಳಿಸಿದ್ದಾರೆ.

ಕೇಂದ್ರ ಸಚಿವೆ ಸ್ಮೃತಿ ಇರಾನಿಗೆ ಸಿಎಂ ಪತ್ನಿಯಿಂದ ಸಾಂಪ್ರದಾಯಿಕ ಸ್ವಾಗತ



ಬೆಂಗಳೂರು, ಏ. 4– ಕೇಂದ್ರದ ಗೃಹ ಸಚಿವ ಅಮಿತ್ ಶಾ ಭೇಟಿ ಬೆನ್ನಲ್ಲೇ ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಸ್ಮೃತಿ ಇರಾನಿ ರಾಜ್ಯಕ್ಕೆ ಭೇಟಿ ಕೊಟ್ಟಿದ್ದಾರೆ. ಇಂದು ಮಧ್ಯಾಹ್ನ ಬೆಂಗಳೂರಿಗೆ ಆಗಮಿಸಿದ ಸ್ಮೃತಿ ಇರಾನಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ರೇಸ್‌ಕೋರ್ಸ್ ರಸ್ತೆಯ ಸರ್ಕಾರಿ ನಿವಾಸದಲ್ಲಿ ಔಪಚಾರಿಕವಾಗಿ ಭೇಟಿಯಾಗಿ ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಮುಖ್ಯಮಂತ್ರಿಯವರ ಪತ್ನಿ ಚೆನ್ನಮ್ಮ ಅವರು ಸಂಪ್ರದಾಯದಂತೆ ಅರಿಶಿನ ಕುಂಕುಮ ಹಾಗೂ ಉಡುಗೊರೆ ನೀಡಿ ಸತ್ಕರಿಸಿದರು. ಈ ವೇಳೆ ಕಂದಾಯ ಸಚಿವ ಆರ್.ಅಶೋಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್, ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ರಾಜ್ಯ ಸಚಿವ ಡಾ.ಮುಂಜ್ಪಾರಾ ಮಹೇಂದ್ರಭಾಯಿ ಕಾಲುಭಾಯಿ ಉಪಸ್ಥಿತರಿದ್ದರು.

ಅಡುಗೆ ಎಣ್ಣೆಯಿಂದ ತಯಾರಿಸಿದ ಇಂಧನದಲ್ಲಿ ಹಾರಾಡಿತು ವಿಮಾನ

ಪ್ಯಾರಿಸ್, ಏ. 4– ಇತ್ತೀಚೆಗೆ ಅಡುಗೆ ಎಣ್ಣೆಯಿಂದ ತಯಾರಿಸಲಾದ ಇಂಧನದಿಂದ ವಿಮಾನವೊಂದನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಈ ಇಂಧನದಿಂದ ವಿಮಾನ 3 ಗಂಟೆಗಳ ಕಾಲ ಪ್ರಾಯೋಗಿಕ ಹಾರಾಟ ನಡೆಸಿದೆ.

ಎ380 ಏರ್‌ಬಸ್ ವಿಮಾನ ಇತ್ತೀಚೆಗೆ ಫ್ರಾನ್ಸ್ ದೇಶದ ಬ್ಲಾಗ್ನಾಕ್ ವಿಮಾನ ನಿಲ್ದಾಣದಿಂದ ಪ್ರಾಯೋಗಿಕ ಹಾರಾಟವನ್ನು ನಡೆಸಿತು. ವಿಶೇಷವೆಂದರೆ ವಿಮಾನದಲ್ಲಿ ಅಡುಗೆ ಎಣ್ಣೆಯನ್ನು ಹೊರತುಪಡಿಸಿ ಬೇರೇನೂ ಬಳಸಲಾಗಿಲ್ಲ.

ಸಸ್ಟೆನೆಬಲ್ ಏವಿಯೇಷನ್ ಫ್ಯೂಯೆಲ್(ಎಸ್‌ಎಎಫ್) ಎಂದು ಕರೆಯಲಾಗುವ ಇಂಧನವನ್ನು ಈ ವಿಮಾನದಲ್ಲಿ ಬಳಸಲಾಗಿದ್ದು, ಇದು ಅಡುಗೆ ಎಣ್ಣೆ ಹಾಗೂ ತ್ಯಾಜ್ಯದಿಂದ ಮಾಡಲ್ಪಟ್ಟಿದೆ. ಕೇವಲ ಒಂದು ರೋಲ್ಸ್ ರಾಯ್ಸ್ ಟ್ರೆಂಟ್ 900 ಎಂಜಿನ್ ಮೂಲಕ ಈ ವಿಮಾನವನ್ನು ಹಾರಿಸಲಾಗಿದೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ: ಜನರನ್ನು ಲೂಟಿ ಮಾಡುತ್ತಿರುವ ಪ್ರಧಾನಿ

ನವದೆಹಲಿ, ಏ. 4– ದಿನದಿಂದ ದಿನಕ್ಕೆ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಹೆಚ್ಚಳವಾಗುತ್ತಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ನಿರಂತರವಾಗಿ ಪೆಟ್ರೋಲ್ ಹಾಗೂ ಡೀಸೆಲ್ ದರ ಹೆಚ್ಚಳವಾಗುತ್ತಿರುವುದನ್ನು ಪ್ರಧಾನ ಮಂತ್ರಿ ಜನ್ ಧನ್ ಲೂಟಿ ಯೋಜನೆ ಎಂದು ಕರೆದಿದ್ದಾರೆ.



ಮೇ 2014ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿದ್ದ ತೈಲ ಬೆಲೆ ಹಾಗೂ ಇಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ತೈಲ ಬೆಲೆಯ ಬಗ್ಗೆ ಅಂಕಿ ಅಂಶ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ನೀತಿಯನ್ನು ಟೀಕಿಸಿದ್ದಾರೆ. ಸೋಮವಾರ ಪ್ರತಿ ಲೀಟರ್ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ 40 ಪೈಸೆ ಏರಿಕೆಯೊಂದಿಗೆ ಕಳೆದ ಎರಡು ವಾರಗಳಲ್ಲಿ ಲೀಟರ್ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಒಟ್ಟು ರೂ. 8.40 ಪೈಸೆಯಷ್ಟು ಹೆಚ್ಚಳವಾಗಿದೆ.

ಒಂದನೇ ಪುಟದಿಂದ

ಲ್ಯಾಂಡ್ ಆಡಿಟ್

ಹಣ ಖರ್ಚು ಮಾಡುತ್ತಿದೆ. ಈ ಯೋಜನೆಗೆ 50 ಕೋಟಿ ರೂ. ಗಳನ್ನು ಜಲಜೀವನ್ ಮಿಷನ್‌ನಿಂದ ಭರಿಸಬೇಕೆಂದು ಉದ್ದೇಶಿಸಲಾಗಿತ್ತಾದರೂ, ಜಿಲ್ಲಾ ಉಸ್ತುವಾರಿ ಸಚಿವ, ನಗರಾಭಿವೃದ್ಧಿ ಸಚಿವರ ನಿರ್ದೇಶನದಂತೆ ಪೂರ್ಣ ಹಣವನ್ನು ಪ್ರಾಧಿಕಾರವೇ ಭರಿಸಲು ನಿರ್ಧರಿಸಲಾಗಿದೆ ಎಂದು ರಾಜೀವ್ ನುಡಿದರು.

ಜಲ ಸಂಗ್ರಹಾಗಾರ: ಹಳೇ ಉಂಡವಾಡಿ ಮತ್ತು ಬಿದರಗೂಡು ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಮುಡಾ ಬಡಾವಣೆಗಳಿಗೆ ನೀರು ವಿತರಣಾ ವ್ಯವಸ್ಥೆಗಾಗಿ 6 ಕಡೆ ಎಂಬಿಆರ್ ಜಲ ಸಂಗ್ರಹಾಗಾರಗಳನ್ನು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸಬ್ ಸ್ಟೇಷನ್ ನಿರ್ಮಾಣ: ಮುಡಾ ನಿರ್ಮಿಸಿರುವ ಆರ್.ಟಿ.ನಗರ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಬಡಾವಣೆಗಳಲ್ಲಿ ಕೆಪಿಟಿಸಿಎಲ್ ಮೂಲಕ ಉಪ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಪ್ರಸಕ್ತ ಸಾಲಿನಲ್ಲಿ ಪ್ರಾಧಿಕಾರವು ಅಗತ್ಯ ಅನುದಾನ ಮೀಸಲಿರಿಸಿದೆ ಎಂದು ಮುಡಾ ಅಧ್ಯಕ್ಷ ರಾಜೀವ್ ತಿಳಿಸಿದರು.

ಕೆರೆಗಳ ಅಭಿವೃದ್ಧಿ: ಮುಡಾ ವ್ಯಾಪ್ತಿಯಲ್ಲಿರುವ 8 ಕೆರೆಗಳನ್ನು 9 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಅವು ಮಲೀನವಾಗದಂತೆ ಸಂರಕ್ಷಿಸಲು ಉದ್ದೇಶಿಸಲಾಗಿದೆ. ಎಸ್‌ಟಿಪಿ ಸ್ಥಾಪಿಸುವುದು, ಒಳಚರಂಡಿ ನೀರು ಕೆರೆಗಳಿಗೆ ಸೇರದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು, ಪ್ರೋ ಬಯೋಟೆಕ್ ಎಂಜಿಮ್ ಟೋಜಿಂಗ್ ಟೆಕ್ನಾಲಜಿ ಮೂಲಕ ಕೆರೆ ನೀರಿನ ಶುದ್ಧೀಕರಣ ಮಾಡಲು 150 ಲಕ್ಷ ರೂ.ಗಳನ್ನು ಕಾಯ್ದಿರಿಸುವುದಾಗಿ ತಿಳಿಸಿದರು.

ಟಾಸ್ಕ್‌ಫೋರ್ಸ್: ನಿವೇಶನ, ಭೂಮಿ, ಕಟ್ಟಡದಂತಹ ಸ್ಥಿರಾಸ್ತಿಯನ್ನು ಅನಧಿಕೃತವಾಗಿ ಪಡೆದು ಸ್ವಾಧೀನಾನುಭವದಲ್ಲಿದ್ದರೆ, ಸಮಗ್ರವಾಗಿ ಪರಿಶೀಲಿಸಿ ವಶಪಡಿಸಿಕೊಳ್ಳಲು ಟಾಸ್ಕ್‌ಫೋರ್ಸ್ ರಚಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಅಗತ್ಯವಿರುವ ಸಿಬ್ಬಂದಿ, ಸಲಕರಣೆಗಳನ್ನು ಒದಗಿಸಲು ಸಹ ಮುಡಾ ತೀರ್ಮಾನಿಸಿದೆ ಎಂದು ತಿಳಿಸಿದರು. ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್, ಸದಸ್ಯರಾದ ನವೀನ್‌ಕುಮಾರ್, ಲಕ್ಷ್ಮೀದೇವಿ, ನಿಂಗಣ್ಣ, ಸೂಪರಿಂಟೆಂಡಿಂಗ್ ಇಂಜಿನಿಯರ್ ಶಂಕರ್, ನಗರ ಯೋಜಕ ಸದಸ್ಯ ಜಯಸಿಂಹ ಹಾಗೂ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಡಾ ಬಡಾವಣೆಗಳಲ್ಲಿ LED

ಸ್ಮಶಾನ ಮತ್ತು ಚಿತಾಗಾರಗಳಿಗೆ ಮೂಲ ಸೌಕರ್ಯ ಒದಗಿಸುವುದು, ಆರ್.ಟಿ.ನಗರದ ನ್ಯೂ ಕಾಂತರಾಜ ಅರಸ್ ರಸ್ತೆ ಹಾಗೂ ಅಕ್ಕ ಮಹಾದೇವಿ ರಸ್ತೆಗಳ ವಿಸ್ತರಣೆಯಂತಹ ಹಲವು ಅಭಿವೃದ್ಧಿ ಯೋಜನೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕೈಗೆತ್ತಿಕೊಂಡಿದೆ ಎಂದು ರಾಜೀವ್ ತಿಳಿಸಿದರು. ಆಕಾಂಕ್ಷಿಗಳ ಬೇಡಿಕೆಗೆ ಅನುಗುಣವಾಗಿ ಬಡಾವಣೆ ರಚಿಸಿ ನಿವೇಶನ ಹಂಚಿಕೆ ಮಾಡಲು 50:50ರ ಅನುಪಾತದಲ್ಲಿ ರೈತರ ಸಹಕಾರದಿಂದ ಪ್ರಯತ್ನಿಸಲಾಗುತ್ತಿದೆಯಲ್ಲದೇ, ಭೂ ಸ್ವಾಧೀನ ಪ್ರಕ್ರಿಯೆ ಕಷ್ಟವಾಗಿರುವುದರಿಂದ ಲಭ್ಯವಿರುವ ಮುಡಾ ಜಾಗದಲ್ಲಿಯೇ ಗುಂಪು ಮನೆ ಯೋಜನೆಯನ್ನು ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ನುಡಿದರು.

ತತ್ಕಾಲ್ ಸೇವೆ

ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ 'ಸಕಾಲ ದಶಮಾನೋತ್ಸವ' ಕಾರ್ಯಕ್ರಮದಲ್ಲಿ ನವೀಕೃತ ಸಕಾಲ ವೆಬ್‌ಸೈಟ್‌ಅನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರದ 99 ಇಲಾಖೆಗಳ 1,115 ಸೇವೆಗಳು ಸಕಾಲ ಸೇವೆಯಲ್ಲಿ ಲಭ್ಯವಿದೆ. ವಿವಿಧ ಇಲಾಖೆಗಳ ಒಂದೊಂದು ಸೇವೆಗೆ ಒಂದೊಂದು ಕಾಲಮಿತಿ ನಿಗದಿಪಡಿಸಲಾಗಿದೆ. ಸಕಾಲ ಯೋಜನೆ ಕಾರಣ ಅರ್ಜಿಗಳು ಕಾಲಮಿತಿಯಲ್ಲಿ ವಿಲೇವಾರಿ ಆಗುತ್ತಿವೆ. ಆದರೆ, ಕೆಲವು ಸಂದರ್ಭಗಳಲ್ಲಿ ಅರ್ಜಿದಾರರಿಗೆ ತುರ್ತಾಗಿ ಒಂದೆರಡು ದಿನಗಳಲ್ಲಿ ದಾಖಲೆಗಳು, ಪ್ರಮಾಣಪತ್ರಗಳು ಬೇಕಾಗುತ್ತವೆ. ಅಂತಹ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಸೇವೆ ಒದಗಿಸಲು ತತ್ಕಾಲ್ ಸೇವೆಯನ್ನು ಜಾರಿಗೆ ತರುವ ಚಿಂತನೆ ಇದೆ. ಈ ಕುರಿತು ಇಲಾಖೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗುವುದು ಎಂದರು. 2012ರ ಏಪ್ರಿಲ್ 2ರಿಂದ ಈ ವರ್ಷದ ಫೆಬ್ರವರಿ 28ರವರೆಗೆ 26.56 ಕೋಟಿ ಅರ್ಜಿಗಳು ಸ್ವೀಕೃತವಾಗಿದ್ದು, 26.41 ಕೋಟಿ ಅರ್ಜಿಗಳು ವಿಲೇವಾರಿಗೊಂಡಿವೆ. ಸಕಾಲ ಸೇವೆಯಡಿ ಕಾಲಮಿತಿಯಲ್ಲಿ ಸೇವೆ ಒದಗಿಸದ ಅಧಿಕಾರಿ ಅಥವಾ ಸಿಬ್ಬಂದಿಗೆ ದಂಡ ವಿಧಿಸಲು ಅವಕಾಶ ಇದೆ. ಆದರೆ, ಅದು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳು ಗಮನ ಹರಿಸಬೇಕಿದೆ ಎಂದರು.

ಹೆಚ್‌ಡಿ ಕುಮಾರಸ್ವಾಮಿಗೆ ಮುಸ್ಲಿಂ ಮತ ವಿಭಜನೆ ಸುಪಾರಿ

ಕಾಂಗ್ರೆಸ್ ಆರೋಪ



ಮೈಸೂರು,ಏ.4(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಮುಸ್ಲಿಂ ಸಮುದಾಯದ ಮತಗಳನ್ನು ವಿಭಜಿಸಲು ರಾಜ್ಯ ಬಿಜೆಪಿ ಘಟಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೀರ್ಘಾವಧಿ ಸುಪಾರಿ ನೀಡಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಯಾವಾಗ ಯಾರ ವಿರುದ್ಧ ಮಾತನಾಡುತ್ತಾರೆ ಎನ್ನುವುದು ತಿಳಿಯುವುದೇ ಇಲ್ಲ. ಇದೀಗ ಬಿಜೆಪಿ ನಾಯಕರ ವಿರುದ್ಧ ನಿರಂತರ ವಾಗ್ದಾಳಿ ನಡೆಸುವ ಮೂಲಕ ಮುಂಬರುವ ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳುವ ಪ್ರಯತ್ನ ಆರಂಭಿಸಿದ್ದಾರೆ. ಕುಮಾರಸ್ವಾಮಿ ಅವರಿಗೆ ಏಕಾಏಕಿ ಮುಸ್ಲಿಮರ ಮೇಲೆ ಕಳಕಳಿ ಬಂದಿದೆ. ಸಿಂಧಗಿ, ಹಾನಗಲ್ ಉಪ ಚುನಾವಣೆಯಲ್ಲಿ ಮುಸ್ಲಿಂ ಮತ ವಿಭಜಿಸಲು ಮುಂದಾಗಿ ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ಜೆಡಿಎಸ್ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡ ಬಳಿಕ ನಾಪತ್ತೆಯಾಗಿದ್ದರು. ಇದೀಗ ಮತ್ತೆ ಮುಸ್ಲಿಂ ಸಮುದಾಯದ ಓಲೈಕೆಗಾಗಿ ಮತ್ತೊಂದು ಪ್ರಯತ್ನಕ್ಕೆ ಮುಂದಾಗಿದ್ದಾರೆ. ಅವರ ಪ್ರಯತ್ನದ ಹಿಂದೆ ಬಿಜೆಪಿ ಕೈವಾಡವಿರುವುದು ಸ್ಪಷ್ಟವಾಗಿದೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ದುರಾಡಳಿತ, ಅನೀತಿಯಿಂದಾಗಿ ಅಲ್ಪಸಂಖ್ಯಾತರ ಮತಗಳು ಕಾಂಗ್ರೆಸ್‌ಗೆ ಒಲಿಯಬಹುದೆಂಬ ಲೆಕ್ಕಾಚಾರದಿಂದ ಬಿಜೆಪಿ ಕಂಗೆಟ್ಟಿದೆ. ಇದರಿಂದ ಬಿಜೆಪಿಯಿಂದ ಸುಪಾರಿ ಪಡೆದುಕೊಂಡು ಕುಮಾರಸ್ವಾಮಿ ಮಾತನಾಡಲು ಮುಂದಾಗಿದ್ದಾರೆ. ಚುನಾವಣೆ ಸಮೀಪಿಸುವವರೆಗೂ ಹೆಚ್‌ಡಿಕೆ ವಾಗ್ಬಾಣ ಮುಂದುವರೆಯುತ್ತಲೇ ಇರುತ್ತದೆ. ಅವರು ಯಾವಾಗ ಯಾರೊಂದಿಗೆ ಸಖ್ಯ ಬೆಳೆಸುತ್ತಾರೆ ಎನ್ನುವುದು ರಾಜ್ಯದ ಜನತೆಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ಜಾತ್ಯತೀತ ಶಕ್ತಿಗಳು ಒಂದಾಗಿ ಸಮಾಜವನ್ನು ಅಶಾಂತಿಯತ್ತ ದೂಡುತ್ತಿರುವ ಕೋಮುಶಕ್ತಿಗಳ ವಿರುದ್ಧ ಎಚ್ಚರಿಕೆಯಿಂದ ಇರಬೇಕು ಎಂದು ಮನವಿ ಮಾಡಿದರು.

ರಫ್ತು ಕುಸಿತ: ರಾಜಕೀಯ ಲಾಭಕ್ಕಾಗಿ ರಾಜ್ಯದಲ್ಲಿ ಬಿಜೆಪಿ ನಾಯಕರು ಹುಟ್ಟುಹಾಕುತ್ತಿರುವ ವಿವಾದದಿಂದಾಗಿ ರಾಜ್ಯಕ್ಕೆ ಭಾರೀ ಹಿನ್ನಡೆಯಾಗುತ್ತಿದೆ. ಹಿಜಾಬ್ ವಿಚಾರ, ಜಾತ್ರೆಗಳಲ್ಲಿ ಮುಸ್ಲಿಂರಿಗೆ ವ್ಯಾಪಾರ ನಿರ್ಬಂಧ, ಹಲಾಲ್ ಕಟ್ ವಿವಾದದಿಂದ ಕರ್ನಾಟಕವನ್ನು ಕೇವಲವಾಗಿ ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿಂದೆ ಮುಸ್ಲಿಂ ರಾಷ್ಟ್ರಗಳಿಗೆ 195.67 ಬಿಲಿಯನ್ ಡಾಲರ್ ಮೌಲ್ಯದ ವಸ್ತುಗಳನ್ನು ರಫ್ತು ಮಾಡಲಾಗುತ್ತಿತ್ತು. ವಿವಾದದ ಹಿನ್ನೆಲೆಯಲ್ಲಿ ಈಗ ರಫ್ತು ಪ್ರಮಾಣ 175 ಬಿಲಿಯನ್ ಡಾಲರ್‌ಗೆ ಕುಸಿದಿದೆ. ಪರಿಸ್ಥಿತಿ ತಿಳಿಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ನಷ್ಟವಾಗುವ ಸಾಧ್ಯತೆ ಹೆಚ್ಚಾಗಲಿದೆ. ಹಿಂದು–ಮುಸ್ಲಿಂ ಎಂದು ವಿಭಜಿಸುತ್ತ ಹೋದಲ್ಲಿ ಮುಂದೊಂದು ದಿನ ಅರಬ್ ದೇಶಗಳು ಭಾರತದ ರಫ್ತು ಬೇಡ ಅಂದರೆ ಪರಿಸ್ಥಿತಿ ಏನಾಗುತ್ತದೆ ಎಂದು ಎಲ್ಲರೂ ಊಹಿಸಿಕೊಳ್ಳಬೇಕು. ಮಾಂಸ, ಸಾಫ್ಟ್‌ವೇರ್ ಉತ್ಪನ್ನ ಸೇರಿದಂತೆ ಹಲವು ಉತ್ಪನ್ನಗಳನ್ನು ಅರಬ್ ದೇಶಗಳು ಭಾರತದಿಂದ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿ ಬೇರೆ ದೇಶಗಳ ಮೊರೆ ಹೋಗುತ್ತಿವೆ. ಆದರೆ, ಬಿಜೆಪಿ ಬೇರೆಯವರ ಸಮಾಧಿ ಮೇಲೆ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿದೆ ವಿಷಾದಿಸಿದರು.

ಗೋಮಾಂಸ ರಫ್ತು ಹೆಚ್ಚಳ: 2014ಕ್ಕೂ ಮೊದಲು 12 ಲಕ್ಷ ಮೆಟ್ರಿಕ್ ಟನ್ ಇದ್ದ ಗೋಮಾಂಸದ ರಫ್ತು, ಈಗ 25 ಲಕ್ಷ ಮೆಟ್ರಿಕ್ ಟನ್‌ಗೆ ಏರಿಕೆಯಾಗಿದೆ. ಟಾಪ್ 10 ಕಂಪನಿಗಳು ಬಿಜೆಪಿ ಬೆಂಬಲಿತ ಮಾಲೀಕತ್ವದಲ್ಲಿವೆ. ಇವರು ಹಲಾಲ್ ಬೀಫ್ ಮಾಂಸವನ್ನೇ ರಫ್ತು ಮಾಡುತ್ತಿದ್ದಾರೆ. ಇದನ್ನು ಸಿ.ಟಿ.ರವಿ ಅವರಿಂದ ತಡೆಯಲಾಗದೇ? ಎಂದು ಪ್ರಶ್ನಿಸಿದರು.

ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ ಆರ್ಥಿಕತೆ ಕುಸಿದಿದೆ. ಕಾಮಗಾರಿಗಳಲ್ಲಿ ಶೇ. 40 ಕಮಿಷನ್ ಪಡೆಯಲಾಗುತ್ತಿದೆ. ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಜನರ ದಿಕ್ಕು ತಪ್ಪಿಸಲು ಬಿಜೆಪಿ ಯತ್ನಿಸುತ್ತಿದೆ. ರಾಜ್ಯದ ಜನರು ಯಾರಿಗಾದರೂ ಮತ ನೀಡಿ ಬಿಜೆಪಿ ನಾಯಕರ ಪ್ರಚೋದನೆಗೆ ಒಳಗಾಗಬೇಡಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಇದ್ದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಿಪಿಎಂ ಪ್ರತಿಭಟನೆ



ಮೈಸೂರು,ಏ.4(ಎಂಟಿವೈ)– ತೈಲ, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಮೈಸೂರಲ್ಲಿ ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದ) ಪಕ್ಷ ಕಾರ್ಯಕರ್ತರು ಬೈಕ್ ಹಾಗೂ ಸಿಲಿಂಡರ್‌ಗೆ ಹಗ್ಗ ಕಟ್ಟಿ ಎಳೆದುಕೊಂಡು ಹೋಗುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಸಿಪಿಐ(ಎಂ) ಕಾರ್ಯಕರ್ತರು ಮಹಾತ್ಮ ಗಾಂಧಿ ವೃತ್ತದವರೆಗೂ ಹೋಗಿ ಧರಣಿ ನಡೆಸಿ, ಕೇಂದ್ರ ಸರ್ಕಾರದ ಜನ ವಿರೋಧಿ ನೀತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಂಚರಾಜ್ಯ ಚುನಾವಣೆಯ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಕೇಂದ್ರ ಸರ್ಕಾರ ಕಳೆದ 10 ದಿನದಿಂದ ತೈಲ ಬೆಲೆ, ಅಡುಗೆ ಅನಿಲದ ಬೆಲೆಯನ್ನು ಹೆಚ್ಚಳ ಮಾಡುತ್ತಲೇ ಇದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರು ಸಂಕಷ್ಟಕ್ಕೆ ತುತ್ತಾಗುವಂತಾಗಿದ್ದಾರೆ. ಕೊರೊನಾ ಹಾವಳಿ, ಲಾಕ್‌ಡೌನ್‌ನಿಂದಾಗಿ ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡು ಪರಿತಪಿಸುತ್ತಿದ್ದಾರೆ, ಲಕ್ಷಾಂತರ ವ್ಯಾಪಾರಿಗಳು ವಹಿವಾಟು ಕ್ಷೀಣಗೊಂಡಿರುವ ಕಾರಣ ಚೇತರಿಸಿಕೊಳ್ಳಲು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ತೈಲ ಬೆಲೆ, ಅಡುಗೆ ಅನಿಲ ಬೆಲೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಮಾಡುವ ಮೂಲಕ ಸರ್ಕಾರ ಬಡ ಜನರಿಗೆ ಗಾಯದ ಮೇಲೆ ಬರೆ ಎಳೆಯುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೇಂದ್ರದಲ್ಲಿ 2014ರಿಂದ 2022ರವರೆಗೆ ಮೋದಿ ನೇತೃತ್ವದ ಸರ್ಕಾರ ಪೆಟ್ರೋಲ್ ಎಕ್ಸೈಸ್ ಸುಂಕವನ್ನು 1.48ರಿಂದ 27.10 ರೂ.ಗೆ, ಡೀಸೆಲ್ ಎಕ್ಸೈಸ್ ಸುಂಕವನ್ನು 3.56 ರಿಂದ 21.80 ರೂ.ಗೆ ಹೆಚ್ಚಿಸಿದೆ. ಇದರೊಂದಿಗೆ ತೈಲ ಬೆಲೆ ಮಿತಿಮೀರಿದ ಪ್ರಮಾಣದಲ್ಲಿ ಹೆಚ್ಚಳ ಮಾಡಲಾಗುತ್ತಿದೆ. ಬಡ ಹಾಗೂ ಮಧ್ಯಮ ವರ್ಗದ ಜನರು ಜೀವನ ನಡೆಸುವುದೇ ದುಸ್ತರವಾಗಿದೆ. ತೈಲ ಬೆಲೆ ಹೆಚ್ಚಳದಿಂದಾಗಿ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಳವಾಗುತ್ತಿರು ವುದರಿಂದ ಬಡತನ ಹಾಗೂ ಹಸಿವು ಹೆಚ್ಚಾಗುತ್ತಿದೆ. ಔಷಧಿಗಳ ಬೆಲೆಯಲ್ಲೂ ಶೇ.10.07ರಷ್ಟು ಹೆಚ್ಚಳವಾಗಿದೆ. ಗೊಬ್ಬರದ ಬೆಲೆ, ಕಬ್ಬಿಣ, ಸಿಮೆಂಟ್ ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಬಳಸುವ ಎಲ್ಲಾ ವಸ್ತುಗಳ ಬೆಲೆಯೂ ಗಗನಕ್ಕೇರಿರುವುದರಿಂದ ಬಡವರು ಮನೆ ನಿರ್ಮಿಸಿಕೊಳ್ಳಲು ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ತೈಲ ಬೆಲೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಮುಖಂಡರಾದ ಜಗನ್ನಾಥ್, ಬಸವರಾಜ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೂಡಲಹುಂಡಿಯಲ್ಲಿ ವಿಜೃಂಭಣೆಯ ಬೀರೇಶ್ವರ, ಬನ್ನಿಮಹಾಕಾಳೇಶ್ವರಿ ಉತ್ಸವ



ಮೈಸೂರು,ಏ.4(ಎಂಟಿವೈ)– ಯುಗಾದಿ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದಲ್ಲಿ ಶ್ರೀ ಬೀರೇಶ್ವರ, ಶ್ರೀ ಬನ್ನಿಮಹಾಕಾಳೇಶ್ವರಿ ಹಾಗೂ ಶ್ರೀ ಬಸವೇಶ್ವರರ ಉತ್ಸವ ಮೂರ್ತಿಯ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ಪ್ರತಿವರ್ಷ ಯುಗಾದಿ ಹಿನ್ನೆಲೆಯಲ್ಲಿ ದೇವರ ಉತ್ಸವ ವಿಜೃಂಭಣೆಯಿಂದ ನಡೆಸುವ ಸಂಪ್ರದಾಯವಿದ್ದು, ಕೊರೊನಾ ಸೋಂಕಿನ ಆತಂಕದಿಂದಾಗಿ ಕಳೆದ ಎರಡು ವರ್ಷಗಳಿಂದ ದೇವರ ಉತ್ಸವ ಸರಳ ಹಾಗೂ ಸಾಂಪ್ರದಾಯಿಕವಾಗಿ ನಡೆಸಲಾಗಿತ್ತು. ಈ ಬಾರಿ ಕೊರೊನಾ ಸೋಂಕು ನಿಯಂತ್ರಣಕ್ಕೆ ಬಂದಿರುವುದರಿಂದ ಯುಗಾದಿ ಉತ್ಸವ ವಿಜೃಂಭಣೆಯಿಂದ ಗ್ರಾಮಸ್ಥರು ಆಚರಿಸಿದರು.

ತಿ.ನರಸೀಪುರದ ಸಂಗಮ ಕ್ಷೇತ್ರದಲ್ಲಿ ದೇವರ ಉತ್ಸವ ಮೂರ್ತಿಗೆ ಅಭಿಷೇಕ ಮಾಡಿದ ನಂತರ ವರಕೋಡು ಗ್ರಾಮದಲ್ಲಿ ರಾತ್ರಿಯಿಡಿ ಮೆರವಣಿಗೆ ನಡೆಸಲಾಯಿತು. ಸೋಮವಾರ ಬೆಳಗ್ಗೆ ಬಡಗಲ ಹುಂಡಿ, ಹೊಸಹುಂಡಿ, ಕೆಂಪೇಗೌಡನ ಹುಂಡಿ ಗ್ರಾಮದಲ್ಲಿ ಮೆರವಣಿಗೆ ನಡೆಸಿದ ಬಳಿಕ ಭಾನುವಾರ ರಾತ್ರಿ ಮೂಡಲುಹುಂಡಿ ಗ್ರಾಮದಲ್ಲಿ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯಲ್ಲಿ ಶ್ರೀ ಬೀರೇಶ್ವರ, ಶ್ರೀ ಬನ್ನಿಮಹಾಕಾಳೇಶ್ವರಿ ದೇವಿ ಹಾಗೂ ಬಸವೇಶ್ವರರ ಉತ್ಸವ ಮೂರ್ತಿಯೊಂದಿಗೆ ಮಂಗಳವಾದ್ಯ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಕೊಂಬು–ಕಹಳೆ ತಂಡಗಳು ಪಾಲ್ಗೊಂಡು ಮೆರಗು ನೀಡಿದವು. ಯುಗಾದಿ ಉತ್ಸವದಲ್ಲಿ ಐದು ಗ್ರಾಮಗಳ ಜನರು ಪಾಲ್ಗೊಂಡು ಯುಗಾದಿ ಹಬ್ಬವನ್ನು ಅರ್ಥ ಪೂರ್ಣವಾಗಿ ಆಚರಿಸಿದರು. ಮೂಡಲಹುಂಡಿಯಲ್ಲಿ ಮೆರವಣಿಗೆ ಮುಗಿದ ನಂತರ ವರಕೋಡು ಗ್ರಾಮದಲ್ಲಿರುವ ಬೀರೇಶ್ವರ ದೇವಾಲಯಕ್ಕೆ ಉತ್ಸವ ಮೂರ್ತಿಯನ್ನು ಕೊಂಡೊಯ್ದು ಉತ್ಸವಕ್ಕೆ ತೆರೆ ಎಳೆಯಲಾಯಿತು.

ಏ.7ರಂದು ಮಹಿಳಾ ಉದ್ಯಮಶೀಲತೆ ಉತ್ತೇಜಿಸುವ ಖುಷಿ ಉತ್ಸವ



ಮೈಸೂರು,ಏ.4(ಪಿಎಂ)–ಸಂಸ್ಕೃತಿ ವುಮೆನ್ ಸ್ಪಿಯರ್ ಮಹಿಳಾ ಸಂಸ್ಥೆ ವತಿಯಿಂದ ಏ.7ರಂದು ಖುಷಿ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಶ್ರೀದೇವಿ ಭೂಪಾಲಂ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ರಿಂದ ರಾತ್ರಿ 8 ಗಂಟೆಯವರೆಗೆ ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಈ ಉತ್ಸವ ನಡೆಯಲಿದೆ ಎಂದರು.

ಮಹಿಳಾ ಉದ್ಯಮಶೀಲತೆ ಉತ್ತೇಜಿಸುವ ಉದ್ದೇಶದಿಂದ ಏರ್ಪಡಿಸಿರುವ ಈ ಉತ್ಸವದಲ್ಲಿ 50ಕ್ಕೂ ಅಧಿಕ ಮಳಿಗೆಗಳು ಇರಲಿವೆ. ಇದರಲ್ಲಿ 10ಕ್ಕೂ ಹೆಚ್ಚು ಮಂದಿ ಹೊರ ಜಿಲ್ಲೆಯಿಂದ ಮಹಿಳೆಯರು ಬಂದು ತಮ್ಮ ಕರಕುಶಲ ವಸ್ತುಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಿದ್ದಾರೆ. ಉತ್ಸವದಲ್ಲಿ ಕಲಾ ಶಿಬಿರ, ಉಚಿತ ಆರೋಗ್ಯ ತಪಾಸಣೆ, ನೃತ್ಯ ಶಿಬಿರಗಳೂ ಇರಲಿವೆ ಎಂದು ತಿಳಿಸಿದರು.

ಅಂದು ಬೆಳಗ್ಗೆ 11ರಿಂದ 12ರವರೆಗೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಮಾಹಿತಿಗೆ ಮೊ.ಸಂ. 99860 49122 ಅನ್ನು ಸಂಪರ್ಕಿಸಬಹುದು. ಇದರ ಜೊತೆಗೆ ಬೆಂಕಿ ಇಲ್ಲದೇ ಅಡುಗೆ, ಬರವಣಿಗೆ ಸ್ಪರ್ಧೆ, ಲತಾ ಮಂಗೇಶ್ಕರ್ ಗೀತಗಾಯನ ಹಾಗೂ ಫ್ಯಾಷನ್ ಶೋಗಳನ್ನೂ ಏರ್ಪಡಿಸಲಾಗಿದೆ ಎಂದು ಹೇಳಿದರು.

ಟ್ರಯಥ್ಲಾನ್ ತರಬೇತುದಾರರು, ಐರನ್ ಮ್ಯಾನ್ ಬಿರುದು ಗಳಿಸಿರುವ ಈಜುಪಟು ಡಾ.ಉಷಾ ಹೆಗ್ಡೆ ಉದ್ಯಮಿ ನಿರ್ಮಿತಾ ಶೆಣೈ, ಮಹಿಳಾ ಅರ್ಚಕಿ ಮಹೇಶ್ವರಿ ಪುರೋಹಿತ್, ಉದ್ಯಮಿ ಖುಷಿ ವಿನು, ಅಂತಾರಾಷ್ಟ್ರೀಯ ಕರಾಟೆ ಪಟು ಕೆಆರ್.ರಶ್ಮಿ, ಉದ್ಯಮಿ ಪೂಜಾ ಜೋಷಿ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು ಎಂದರು.

ಉತ್ಸವಕ್ಕೆ ಯಾವುದೇ ಪ್ರವೇಶ ಶುಲ್ಕವಿಲ್ಲ. ವಿವರಗಳಿಗೆ ಮೊ.ಸಂ. 98452 32269 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಸಂಸ್ಥೆ ಉಪಾಧ್ಯಕ್ಷೆ ಪೂರ್ಣಿಮಾ ಸುನೀಲ್, ಖಜಾಂಚಿ ನಂದಾ ಲೋಕೇಶ್, ಕಾರ್ಯದರ್ಶಿ ಕೀರ್ತಿ ರಮೇಶ್ ಗೋಷ್ಠಿಯಲ್ಲಿದ್ದರು.


ಮಕ್ಕಳಿಗೆ ಶಟಲ್ ಬ್ಯಾಡ್ಮಿಟನ್ ಬೇಸಿಗೆ ಶಿಬಿರ

ಮೈಸೂರು,ಏ.4(ಪಿಎಂ)– ಬ್ಲ್ಯಾಕ್ ಕೋರ್ಟ್ ತಂಡ ಮತ್ತು ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್ ಜಂಟಿ ಆಶ್ರಯದಲ್ಲಿ ಇಂದಿನಿಂದ ಮೇ 31ರವರೆಗೆ 6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಶಟಲ್ ಬ್ಯಾಡ್ಮಿಂಟನ್ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ಬ್ಲ್ಯಾಕ್ ಕೋರ್ಟ್ ತಂಡದ ಉಪಾಧ್ಯಕ್ಷೆ ನಿಶಾ ಪೂರ್ವಜ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನಿಂದ ಪ್ರವೇಶಾತಿ ಪ್ರಾರಂಭಗೊಂಡಿದೆ. ಕೆಸಿ ಲೇಔಟ್‌ನ ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್‌ನಲ್ಲಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಮೊದಲ ಶಿಬಿರ ಏ.4ರಿಂದ ಮೇ 1ರವರೆಗೆ ನಡೆಯಲಿದೆ. ಎರಡನೇ ಶಿಬಿರ ಮೇ 2ರಿಂದ 31ರವರೆಗೆ ನಡೆಯಲಿದೆ. ಶಿಬಿರ ಒಂದಕ್ಕೆ ತಲಾ 4 ಸಾವಿರ ಶುಲ್ಕ ನಿಗದಿ ಮಾಡಲಾಗಿದೆ. ವಿವರಗಳಿಗೆ 81056 76724 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ತಂಡದ ಸದಸ್ಯರಾದ ಮೇಘಾರ್ಷ, ಶುಭಾ ಆಶಿಸ್, ಅಮೋಘ ವಿಶ್ವನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.



ಮಂಚೇಗೌಡನಕೊಪ್ಪಲು 'ಮಾದರಿ ಸರ್ಕಾರಿ ಶಾಲೆ'

ಸಾರ್ವಜನಿಕರ ಸಹಕಾರದಿಂದ ಸುಸಜ್ಜಿತವಾಗಿರುವ ಶಾಲಾ ಕಟ್ಟಡ





ಮೈಸೂರು, ಏ. 4(ಜಿಎ)– ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆ ಎಲ್ಲಾ ವಿಚಾರದಲ್ಲೂ ಒಂದು ಮಾದರಿ ಶಾಲೆಯಾಗಿದೆ.

ಶಿಕ್ಷಣ ಇಲಾಖೆಯ ಆಯಾಯ ಸಮಯದ ನಿಯಮ ಪಾಲನೆ, ಜೊತೆಗೆ ಬದ್ಧತೆಯುಳ್ಳ ಶಿಕ್ಷಕ ವೃಂದ, ಸಿಬ್ಬಂದಿ, ಎಸ್‌ಡಿಎಂಸಿ, ಹಳೆಯ ವಿದ್ಯಾರ್ಥಿಗಳು, ಗ್ರಾಮಸ್ಥರು, ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಹಕಾರದಿಂದ ಹಂತ ಹಂತವಾಗಿ ಶಾಲೆ ಸುಧಾರಣೆ ಕಂಡಿದೆ. ಸಾಂಘಿಕ ಪರಿಶ್ರಮದಿಂದ ಶಾಲೆ ಕಟ್ಟಡದಿಂದ ಹಿಡಿದು ಶೈಕ್ಷಣಿಕ ಸಾಧನೆಯಲ್ಲಿ ದಾಪುಗಾಲಿಟ್ಟಿದೆ. ಪೈಪೋಟಿಗಿಳಿದಿರುವ ಖಾಸಗಿ ಶಾಲೆಗಳ ಆಕರ್ಷಣೆ ನಡುವೆಯೂ ಸರ್ಕಾರಿ ಶಾಲೆಯನ್ನು ಉಳಿಸಿಕೊಳ್ಳುವುದರ ಜೊತೆಗೆ ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ. ಮಕ್ಕಳನ್ನು ದಾಖಲಿಸಲು ಪೋಷಕರು ದುಂಬಾಲು ಬೀಳುವಷ್ಟು ಮಟ್ಟಿಗೆ ಈ ಶಾಲೆ ಪ್ರಗತಿ ಸಾಧಿಸಿರುವುದು ಹೆಮ್ಮೆಯ ಸಂಗತಿ.

1956ರಲ್ಲಿ ಮಂಚೇಗೌಡನಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಒಂದು ಹೆಂಚಿನ ಮನೆಯಲ್ಲಿ ಆರಂಭವಾಯಿತು. ನಂತರ ಗ್ರಾಮಸ್ಥರ ಸಹಕಾರದಿಂದ ಮೂಲ ಸೌಕರ್ಯದಲ್ಲಿ ಹಂತ ಹಂತವಾಗಿ ಸುಧಾರಣೆ ಕಂಡಿದೆ. ಕಾಲಕ್ರಮೇಣ ಹಿರಿಯ ಪ್ರಾಥಮಿಕ ಶಾಲೆಯಾಗಿ ಮೇಲ್ದರ್ಜೆಗೇರಿತು. ಅಲ್ಲಿವರೆಗೆ ಇಲ್ಲಿನ ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಶಿಕ್ಷಣಕ್ಕಾಗಿ ಹಿನಕಲ್‌ಗೆ ಹೋಗಿಬರುವುದು ತಪ್ಪಿತು. ಮಕ್ಕಳಿಗೆ ಉತ್ತಮ ಶಿಕ್ಷಣ ಕಲ್ಪಿಸುವ ಮೂಲಕ ಅವರ ಭವಿಷ್ಯಕ್ಕೆ ಬುನಾದಿ ಹಾಕುತ್ತಿರುವ ಈ ಶಾಲೆ 2019–20ನೇ ಸಾಲಿನಿಂದ 'ಕರ್ನಾಟಕ ಪಬ್ಲಿಕ್ ಶಾಲೆ'ಯಾಗಿ ಪರಿವರ್ತನೆಗೊಂಡಿದೆ. ಇಲ್ಲಿ ಇಂಗ್ಲಿಷ್ ಮಾಧ್ಯಮವೂ ಆರಂಭವಾಗಿದೆ. ಹಾಗಾಗಿ ಪ್ರತಿ ವರ್ಷ ಕೇವಲ 30 ಮಂದಿಗೆ ಇಂಗ್ಲಿಷ್ ಮಾಧ್ಯಮ ದಾಖಲಾತಿಗೆ ಅವಕಾಶವಿದೆ. ಇಂಗ್ಲಿಷ್ ಮಾಧ್ಯಮಕ್ಕೆ ತಮ್ಮ ಮಕ್ಕಳನ್ನು ಸೇರಿಸಲೆಂದು ಅರ್ಜಿ ಹಾಕಿದ್ದ ನೂರಾರು ಪೋಷಕರು ನಿರಾಶರಾಗುತ್ತಿದ್ದಾರೆ. ಸಕಲ ಸೌಕರ್ಯವುಳ್ಳ ಈ ಶಾಲೆಯ ಉತ್ತಮ ಶಿಕ್ಷಣದ ಜೊತೆಗೆ ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡುವ ಮೂಲಕ ಭಾರೀ ಡಿಮ್ಯಾಂಡ್ ಸೃಷ್ಟಿ ಮಾಡಿದೆ.

> “ಮಂಚೇಗೌಡನಕೊಪ್ಪಲು ಗ್ರಾಮಸ್ಥರು, ವಿವಿಧ ಸಂಘ ಸಂಸ್ಥೆ, ಹಳೆ ವಿದ್ಯಾರ್ಥಿಗಳು ಮತ್ತು ಸ್ಥಳೀಯ ಜನ ಪ್ರತಿನಿಧಿಗಳ ಸಹಕಾರದಿಂದ ಶಾಲೆಯಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳಿದ್ದು, ಶಾಲೆಯ ಆಟದ ಮೈದಾನವೊಂದು ಶಾಲೆಯಿಂದ 500 ಮೀಟರ್ ದೂರವಿದೆ. ಅಲ್ಲಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಬರಲು ಸ್ವಲ್ಪ ಕಷ್ಟಕರವಾಗಿದೆ.
> -ರಾಜಯ್ಯ, ಮುಖ್ಯೋಪಾಧ್ಯಾಯರು
> ಕರ್ನಾಟಕ ಪಬ್ಲಿಕ್ ಶಾಲೆ, ಮಂಚೇಗೌಡನಕೊಪ್ಪಲು

ಶಿಕ್ಷಕರ ಶ್ರಮ: ಒಂದು ಶಾಲೆಯ ಶ್ರೇಯೋಭಿವೃದ್ಧಿಯಲ್ಲಿ ಶಿಕ್ಷಕ ವೃಂದದ ಪಾತ್ರ ಬಹಳ ಮುಖ್ಯವಾಗಿರುತ್ತದೆ. 1956 ರಿಂದ ಇಲ್ಲಿಯವರೆಗೂ ಶಾಲೆಯಲ್ಲಿ ಕಾರ್ಯ ನಿರ್ವಹಿಸಿರುವ ಎಲ್ಲಾ ಶಿಕ್ಷಕರ ಪರಿಶ್ರಮ ಸ್ಮರಿಸಿಕೊಳ್ಳಲೇಬೇಕು. ಜ್ಞಾನಾರ್ಜನೆಯೊಂದಿಗೆ ಮಕ್ಕಳಿಗೆ ಶಿಕ್ಷಣ ಧಾರೆ ಎರೆಯುವುದರ ಜೊತೆಗೆ ಎನ್‌ಜಿಓ ಪ್ರತಿನಿಧಿಗಳನ್ನು ಸಂಪರ್ಕ ಮಾಡಿ, ಶಾಲೆ ಅಭಿವೃದ್ಧಿಗೆ ಸಹಕಾರ ಪಡೆಯುವಲ್ಲೂ ಯಶಸ್ವಿಯಾಗಿದ್ದಾರೆ. ಗ್ರಾಮಸ್ಥರು, ಜನಪ್ರತಿನಿಧಿಗಳು, ಹಳೆ ವಿದ್ಯಾರ್ಥಿಗಳೂ ಶಾಲೆ ಉನ್ನತಿಗೆ ಕೈ ಜೋಡಿಸಿದ್ದಾರೆ. ಸದ್ಯ ಈ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಸೇರಿದಂತೆ ಮೂರನೇ ತರಗತಿವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಹಾಗೂ 1ರಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಸೇರಿ ಒಟ್ಟು 406 ವಿದ್ಯಾರ್ಥಿಗಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಆರೋಗ್ಯ ಕಾಳಜಿ: ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ಕಡ್ಲೇ ಮಿಠಾಯಿ, ಮೊಟ್ಟೆ ಅಥವಾ ಬಾಳೆ ಹಣ್ಣು, ಇಲ್ಲವೇ ಹೆಸರು ಬೇಳೆ–ಗೋಧಿ ಪಾಯಸ ನೀಡಲಾಗುತ್ತಿದೆ. 1ರಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಶನಿವಾರ ಬಾತ್ ಇತರೆ ದಿನಗಳಲ್ಲಿ ಅನ್ನ ಮತ್ತು ತರಕಾರಿ ಸಾಂಬರ್ ನೀಡಲಾಗುತ್ತದೆ. ಮಕ್ಕಳಿಗೆ ತಿನಿಸು ಹಾಗೂ ಬಿಸಿಯೂಟ ನೀಡುವ ಮೊದಲು ಶಿಕ್ಷಕರು ಸೇವಿಸಿ ಪರಿಶೀಲಿಸಿದ ನಂತರ ವಿತರಿಸಲಾಗುತ್ತದೆ.



1956ರಲ್ಲಿ ಮಂಚೇಗೌಡನಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

> “ಎಲ್ಲಾ ರೀತಿಯ ಮೂಲಸೌಕರ್ಯಗಳನ್ನು ಹೊಂದಿರುವ ಈ ಶಾಲೆ ಶೈಕ್ಷಣಿಕವಾಗಿ ಎಲ್ಲರ ಮೆಚ್ಚುಗೆ ಗಳಿಸಿದೆ. ಖಾಸಗಿ ಶಾಲೆಯ ವ್ಯಾಮೋಹ ಬಿಟ್ಟು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವಂತಹ ವಾತಾವರಣ ನಿರ್ಮಾಣವಾಗಬೇಕು.
> -ಶಶಿಕಲಾ, ಎಸ್‌ಡಿಎಂಸಿ ಸದಸ್ಯೆ

ಸಂಘ ಸಂಸ್ಥೆಗಳ ನೆರವು: ಶಾಲೆ ಅಭಿವೃದ್ಧಿಗೆ ವಿವಿಧ ಸಂಘ–ಸಂಸ್ಥೆಗಳು ನೆರವಾಗಿವೆ. ಇನ್ಫೋಸಿಸ್ ಫೌಂಡೇಷನ್ ವತಿಯಿಂದ ಪ್ರತಿವರ್ಷ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಗುತ್ತಿದೆ. ಸಂಕ್ರಾಂತಿ ವೃತ್ತದಲ್ಲಿರುವ ನಾರಾಯಣಾಮೃತ ಫೌಂಡೇಷನ್, ಮೈಕ್‌ಸೆಟ್, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಮಕ್ಕಳಿಗೆ ನಿತ್ಯ ಸಂಸ್ಕೃತ ವೇದ ಪಠಣ ಮಾಡಿಸುತ್ತಿದ್ದಾರೆ. ಲೂನಾರ್ಸ್ ಸಂಸ್ಥೆ ಪೀಠೋಪಕರಣಗಳ ಕೊಡುಗೆ ನೀಡಿದೆ. ಎಲ್ ಅಂಡ್ ಟಿ ಸಂಸ್ಥೆ ಶೌಚಾಲಯ ವ್ಯವಸ್ಥೆ ಮಾಡಿಕೊಟ್ಟಿದೆ. ಪ್ರಥಮ್ ಸಂಸ್ಥೆಯು ಇಲ್ಲಿರುವ ಮಕ್ಕಳಿಗೆ ಉಚಿತವಾಗಿ ಕಂಪ್ಯೂಟರ್ ಶಿಕ್ಷಣ ನೀಡುತ್ತಿದೆ. ಇತ್ತೀಚೆಗೆ ಆರ್‌ಬಿಐ ಸಂಸ್ಥೆಯೂ 37 ಲಕ್ಷ ರೂ. ವೆಚ್ಚದಲ್ಲಿ ಶಾಲೆಯ ಇಡೀ ಆವರಣಕ್ಕೆ ವಿಶಾಲ ಮೇಲ್ಚಾವಣಿ ನಿರ್ಮಿಸಿದೆ. ಇನ್ನೂ ಅನೇಕ ಸಂಘ ಸಂಸ್ಥೆಗಳು ಶಾಲೆಗೆ ನೆರವಾಗುತ್ತಿವೆ.

ಶಾಸಕನಾಗಿ ಒಂದಿಂಚು ಭೂಮಿ ಖರೀದಿಸಿಲ್ಲ, ಆಸ್ತಿ ಮಾಡಿಲ್ಲ

ಪ್ರತಿಪಕ್ಷಗಳ ಟೀಕೆಗಳಿಗೆ ಶಾಸಕ ಬಿ.ಹರ್ಷವರ್ಧನ್ ಟಾಂಗ್



ನಂಜನಗೂಡು, ಏ.4– ನಾನು ಶಾಸಕನಾದ ಬಳಿಕ ಒಂದಿಂಚು ಭೂಮಿ ಖರೀದಿಸಿಲ್ಲ, ಆಸ್ತಿ ಮಾಡಿಕೊಂಡಿಲ್ಲ, ಹಿಂದಿನ ಚುನಾವಣೆಯಲ್ಲಿ ಆಸ್ತಿ ಘೋಷಣೆ ಮಾಡಿಕೊಂಡಿದ್ದಷ್ಟೆ ಈಗಲೂ ಇದ್ದು ಯಾರು ಬೇಕಾದರೂ ಪರಿಶೀಲಿಸಬಹುದು ಎಂದು ಶಾಸಕ ಬಿ.ಹರ್ಷವರ್ಧನ್ ಪ್ರತಿಪಕ್ಷಗಳ ಟೀಕೆಗಳಿಗೆ ಟಾಂಗ್ ನೀಡಿದರು.

ಅವರು ಸೋಮವಾರ 1 ಕೋಟಿ 85 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ನಂತರ ತಾಲೂಕಿನ ಉಪ್ಪಿನಹಳ್ಳಿಯಲ್ಲಿ ನೂತನ ವಾಲ್ಮಿಕಿ ಭವನ ಉದ್ಘಾಟಿಸಿ ಮಾತನಾಡಿದರು.

ಹುರಾ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ ನೋಂದಣಿ ಕಾರ್ಯಕ್ರಮದಲ್ಲಿ ಪ್ರತಿಪಕ್ಷಗಳ ನಾಯಕರು, ಶಾಸಕರು ಯಾವ ಕೆಲಸಗಳನ್ನೂ ಪೂರ್ಣಗೊಳಿಸಿಲ್ಲ, ಬರೀ ಶಂಕುಸ್ಥಾಪನೆಗೆ ಮಾತ್ರ ಸೀಮಿತಗೊಂಡಿದ್ದಾರೆ. ಸಮುದಾಯ ಭವನಗಳು ಎಲ್ಲೂ ಪೂರ್ಣಗೊಂಡಿಲ್ಲ, ಯಾವ ಅಭಿವೃದ್ಧಿ ಕೆಲಸಗಳನ್ನೂ ಮಾಡಿಲ್ಲವೆಂದು ಇಲ್ಲಸಲ್ಲದ ಅಪಪ್ರಚಾರ ನಡೆಸುತ್ತಿದ್ದಾರೆ. ನಾನು ಬರೀ ಬೋರ್ಡ್ ನೆಟ್ಟು ಪ್ರದರ್ಶನಕ್ಕೆ ಸೀಮಿತವಾಗಿಲ್ಲ ಶಾಸಕನಾಗಿ ಆಯ್ಕೆಯಾದ ನಂತರ ಮಾಡಿರುವ ಕೆಲಸಗಳ ಮಾಹಿತಿಯನ್ನು ಆರ್‌ಟಿಐ ಮೂಲಕವೇ ಮಾಹಿತಿ ಪಡೆಯಲಿ ಸಭೆಯಲ್ಲಿ ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ ಎಂದು ಹೆಸರು ಪ್ರಸ್ತಾಪಿಸದೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್‌ರನ್ನು ಟೀಕಿಸಿದರು.

ನಗರದ ಗೌರಿಘಟ್ಟದ ಬೀದಿಯ ನಾಯಕ ಸಮುದಾಯ ಭವನಕ್ಕೆ ವಿ.ಶ್ರೀನಿವಾಸಪ್ರಸಾದ್ ಸಂಸದರಾಗಿದ್ದಾಗ 14 ಲಕ್ಷ ಕೊಟ್ಟಿದ್ದರು. ಹಲವು ವರ್ಷಗಳಿಂದ ಅದು ನೆನಗುದಿಗೆ ಬಿದ್ದಿತ್ತು ಅದನ್ನು ಪೂರ್ಣಗೊಳಿಸಲು 50 ಲಕ್ಷ ಶಾಸಕರ ನಿಧಿಯಿಂದ, ನಗರಸಭೆಯಿಂದಲೂ ಅನುದಾನ ನೀಡಿ ಪೂರ್ಣಗೊಳಿಸಿದ್ದೇನೆ. ಅಲ್ಲದೆ ವಾಲ್ಮಿಕಿ ಭವನ ಪೂರ್ಣಗೊಳಿಸಲು ಸಿಎಂ ಮನವೊಲಿಸಿ 75 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿದ್ದೇನೆ ಎಂದರು.

ಪ್ರತಿಪಕ್ಷಗಳೇ ದಿನಾಂಕ ನಿಗದಿಪಡಿಸಲಿ: ನುಗು ಏತ ನೀರಾವರಿ ಯೋಜನೆಗೆ ಸಿಎಂ ಒಪ್ಪಿಗೆ ಸೂಚಿಸಿದ್ದು, ಟೆಂಡರ್ ಪ್ರಕ್ರಿಯೆ ಕೂಡ ಮುಗಿದಿದೆ. ಆದರೆ ಈ ಯೋಜನೆಗೆ ಅನುಮತಿ ಸಿಕ್ಕಿಲ್ಲವೆಂದು ಅಪಪ್ರಚಾರ ನಡೆಸುತ್ತಾರೆ. ಶ್ರೀಕಂಠೇಶ್ವರ ದೇವಾಲಯದ 75 ಕೊಠಡಿ ನಿರ್ಮಿಸಲು ಪುರಾತತ್ವ ಇಲಾಖೆ ಅನುಮತಿ ಪತ್ರಕ್ಕಾಗಿ ಕಾಯುತ್ತಿದ್ದೇನೆ. ಮೇ ತಿಂಗಳಿನಲ್ಲಿ ಯಾವಾಗ ಬೇಕಾದರೂ ಸಹ ಪ್ರತಿಪಕ್ಷಗಳೇ ದಿನಾಂಕ ನಿಗದಿಪಡಿಸಲಿ ನಾನು ಮುಖ್ಯಮಂತ್ರಿಗಳನ್ನು ಕರೆತಂದು ಚಾಲನೆಗೊಳಿಸುವುದಲ್ಲದೆ 11 ತಿಂಗಳಲ್ಲಿ ಕೆಲಸ ಪೂರ್ಣಗೊಳಿಸಿ ತೋರಿಸುತ್ತೇನೆ ಎಂದು ಸವಾಲು ಎಸೆದರು.

ಸ್ಪರ್ಧಿಸುವುದು ಇಲ್ಲೇ, ಗೆಲ್ಲುವುದೂ ಇಲ್ಲೆ: ನಾನು ಪುಲಿಕೇಶಿ ನಗರಕ್ಕೆ ಹೋಗುವುದಾಗಿಯೂ ಗೊಂದಲ ಸೃಷ್ಟಿಸುತ್ತಿದ್ದಾರೆ. ನಾನು ಸ್ಪರ್ಧಿಸುವುದೂ ಕೂಡ ನಂಜನಗೂಡು ಕ್ಷೇತ್ರದಿಂದಲೇ ಗೆಲ್ಲುವುದೂ ಕೂಡ ಅಷ್ಟೆ ಗ್ಯಾರೆಂಟಿ ಎಂದರು.

ನಗರದ ದೇವಿರಮ್ಮನಹಳ್ಳಿ ಬಡಾವಣೆಯಲ್ಲಿ 25 ಲಕ್ಷ ವೆಚ್ಚದ ಸಿಸಿ ರಸ್ತೆ, ಚರಂಡಿ, ಕಳಲೆ ಗ್ರಾಮದಲ್ಲಿ 60 ಲಕ್ಷ ವೆಚ್ಚದ ನಾಲೆಗಳ ಅಭಿವೃದ್ಧಿ ಕಾಮಗಾರಿ, 1 ಕೋಟಿ ವೆಚ್ಚದ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ ಸೇರಿದಂತೆ ಒಟ್ಟು 1 ಕೋಟಿ 85 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಶೀಘ್ರ ಮುಕ್ತಾಯಗೊಂಡು ಜನರಿಗೆ ಅನುಕೂಲವಾಗಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವ ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ಎಪಿಎಂಸಿ ಸದಸ್ಯ ಗುರುಸ್ವಾಮಿ, ಮುಖಂಡರಾದ ಜಗದೀಶ್, ಮಣಿ, ನೀರಾವರಿ ಇಲಾಖೆ ಅಧಿಕಾರಿಗಳದ ಯೋಗೀಶ್, ಸೋಮಣ್ಣ, ಅಶೋಕ್ ನಗರಸಭಾ ಸದಸ್ಯರು ಮತ್ತು ಮುಖಂಡರಿದ್ದರು.

ಹಿಜಾಬ್, ಹಲಾಲ್ ಆಯ್ತು; ಈಗ ಅಜಾನ್ V/s ಭಜನೆ!

ಬೆಂಗಳೂರು,ಏ.4– ರಾಜ್ಯದಲ್ಲಿ ಹಿಜಾಬ್ ವಿವಾದ ತಣ್ಣಗಾದ ಬೆನ್ನಲ್ಲೇ ಹಲಾಲ್ ಕಟ್–ಜಟ್ಕಾ ಕಟ್ ಶುರುವಾಗಿದ್ದವು. ಯುಗಾದಿ ಹೊಸತೊಡಕು ಮುಗಿದ ಕೂಡಲೇ ಮಸೀದಿಗಳಲ್ಲಿ ಅಳವಡಿಸಿರುವ ಧ್ವನಿ ವರ್ಧಕಗಳ ತೆರವು ವಿಚಾರವಾಗಿ ಅಜಾನ್ ಹಾಗೂ ಭಜನೆ ವಿವಾದ ಹುಟ್ಟು ಹಾಕಲಾಗಿದೆ.

ಹೊಸ ಅಭಿಯಾನಕ್ಕೆ ಚಾಲನೆ: ಮಸೀದಿಗಳಲ್ಲಿ ಬೆಳಗಿನ ಜಾವ 5 ಗಂಟೆಗೆ ಧ್ವನಿವರ್ಧಕಗಳಲ್ಲಿ ಅಜಾನ್ ಪ್ರಾರ್ಥನೆ ಮಾಡಲಾಗುತ್ತದೆ. ಮಸೀದಿಗಳಲ್ಲಿ ಅಜಾನ್ ಕೂಗುವ ಸಮಯಕ್ಕೆ ಹಿಂದೂ ದೇವಾಲಯಗಳಲ್ಲಿ ದೇವರ ನಾಮ ಭಜನೆ ಪಠಿಸುವ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ. ಯಲಹಂಕದ ಆಂಜನೇಯ ಸ್ವಾಮಿ ದೇಗುಲದಲ್ಲಿ ಇದಕ್ಕೆ ಮಂಗಳವಾರ ಚಾಲನೆ ನೀಡಲಾಗುತ್ತಿದೆ.

ಹಿಜಾಬ್ ವಿವಾದ ದೊಡ್ಡ ಮಟ್ಟದ ಚರ್ಚೆಗೆ ನಾಂದಿ ಹಾಡಿತ್ತು ಅದು ತಣ್ಣಗಾಗುವಷ್ಟರಲ್ಲಿ ಮಂಗಳೂರು ಭಾಗದ ಹಿಂದೂ ದೇವರ ಜಾತ್ರೆಗಳಲ್ಲಿ ಮುಸ್ಲಿಂ ಸಮುದಾಯದವರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿತ್ತು ಆ ಬಳಿಕ ಮುಸ್ಲಿಂ ಸಮುದಾಯದ ಅಂಗಡಿಗಳಲ್ಲಿ ಯಾವುದೇ ವಸ್ತು ಖರೀದಿಸದಂತೆ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಇದು ಕೂಡ ರಾಜ್ಯದಲ್ಲಿ ದೊಡ್ಡ ಚರ್ಚೆಗೆ ನಾಂದಿ ಹಾಡಿತ್ತು. ಇವು ಮುಗಿಯುವಷ್ಟರಲ್ಲಿ ಹಲಾಲ್ ಕಟ್ ಮತ್ತು ಜಟ್ಕಾ ಕಟ್ ವಿವಾದ ಭುಗಿಲೆದ್ದಿತು. ಯುಗಾದಿ ಆಚರಣೆ ಹಿನ್ನೆಲೆಯಲ್ಲಿ ಮಾಂಸ ಮಾರಾಟ ವ್ಯವಹಾರ ಜೋರಾಗಿ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಹಿಂದೂಗಳು ಹಲಾಲ್ ಕಟ್ ಮಾಂಸ ಸೇವಿಸದಂತೆ ಕರೆ ಕೊಟ್ಟಿದ್ದವು. ಅದರ ಬದಲಿಗೆ ಜಟ್ಕಾ ಕಟ್, (ಹಿಂದೂ ದೇವರಿಗೆ ಅರ್ಪಣೆ) ಮಾಡಿದ ಮಾಂಸವನ್ನೇ ಖರೀದಿ ಮಾಡುವಂತೆ ಹಿಂದೂಪರ ಸಂಘಟನೆಗಳು ಕರೆ ಕೊಟ್ಟಿದ್ದವು. ಇದರ ಬೆನ್ನಲ್ಲೇ ಜಟ್ಕಾ ಕಟ್ ಅಂಗಡಿಗಳು ರಾತ್ರೋ ರಾತ್ರಿ ತಲೆಯೆತ್ತಿದ್ದವು. ಯುಗಾದಿ ಹಬ್ಬ ಆಚರಣೆ ಮುಗಿಯುತ್ತಿದ್ದಂತೆ ಅದರ ಸಾಲಿಗೆ ಮತ್ತೊಂದು ವಿವಾದ ಭುಗಿಲೆದ್ದಿದೆ.

ಲೌಡ್ ಸ್ಪೀಕರ್ ಅಭಿಯಾನ: ಈಗಾಗಲೇ ಮಸೀದಿಗಳಲ್ಲಿ ಅಳವಡಿಸಿರುವ ಧ್ವನಿ ವರ್ಧಕಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಬಳಕೆ ಕುರಿತು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದನ್ನು ಮುಂದಿಟ್ಟುಕೊಂಡು ಮಸೀದಿಗಳಲ್ಲಿ ಅಳವಡಿಸಿರುವ ಧ್ವನಿ ವರ್ಧಕಗಳನ್ನು ತೆಗೆಯಬೇಕು. ಇದರಿಂದ ಶಬ್ಧ ಮಾಲಿನ್ಯವಾಗುತ್ತಿದೆ ಎಂದು ಶ್ರೀರಾಮ ಸೇನೆ ಆರೋಪಿಸಿದೆ. ಮಸೀದಿಗಳ ಮೇಲಿನ ಧ್ವನಿವರ್ಧಕಗಳನ್ನು ತೆಗೆಸುವ ಶಕ್ತಿ ಈ ಸರ್ಕಾರಕ್ಕೆ ಇಲ್ಲ. ಈ ಕುರಿತು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ಕೊಟ್ಟಿದ್ದೇವೆ. ಆದರೂ ಧ್ವನಿ ವರ್ಧಕಗಳನ್ನು ತೆಗೆಸಿಲ್ಲ. ಇದರಿಂದ ಲಕ್ಷಾಂತರ ಜನರಿಗೆ ತೊಂದರೆ ಆಗುತ್ತಿದೆ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ.

ನಾವು ದೇವಾಲಯಗಳಲ್ಲಿ ಸ್ಪೀಕರ್ ಹಾಕುತ್ತೇವೆ. ರಾಮ ಭಜನೆ, ಶಿವರಾಮ, ಓಂಕಾರ ನಾಮಗಳನ್ನು ಹಾಕುತ್ತೇವೆ ಎಂದು ಪ್ರಮೋದ್ ಮುತಾಲಿಕ್ ಎಚ್ಚರಿಕೆ ನೀಡಿದ್ದು, ಅಂತೂ ರಾಜ್ಯದಲ್ಲಿ ಹಲಾಲ್ ಕಟ್ ಮುಗಿಯುತ್ತಿದ್ದಂತೆ ಇದೀಗ ಅಜಾನ್ ಮತ್ತು ಭಜನೆ ವಿವಾದ ಹುಟ್ಟಿಕೊಂಡಿದೆ. ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಇಂತಹ ವಿವಾದಗಳು ಹುಟ್ಟಿಕೊಳ್ಳುತ್ತಿರುವುದು ಭಾರೀ ಚರ್ಚೆಗೆ ನಾಂದಿ ಹಾಡಿದೆ. ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದ್ದು ಕೋಮು ದ್ವೇಷದ ವಾತಾವರಣ ನಿರ್ಮಾಣವಾಗುತ್ತಿದೆ. ಇದನ್ನು ಅರಿತು ನಿಯಂತ್ರಣ ಮಾಡಬೇಕಾದ ಸರ್ಕಾರ ಕೂಡ ಮೌನವಾಗಿದೆ. ರಾಜಕೀಯ ಲಾಭಕ್ಕಾಗಿಯೇ ವಿವಾದಗಳನ್ನು ಹುಟ್ಟು ಹಾಕಲಾಗಿದೆಯೇ ಎಂಬ ಅನುಮಾನ ಶುರುವಾಗಿದೆ.

ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ

ತಿ.ನರಸೀಪುರ, ಏ.4(ಎಸ್‌ಕೆ) ಪಟ್ಟಣದ 4ನೇ ವಾರ್ಡ್ ಸಂಪೂರ್ಣ ಅಭಿವೃದ್ಧಿಗೆ ಸಹಕಾರ ನೀಡುತ್ತೇನೆ ಎಂದು ಪುರಸಭಾಧ್ಯಕ್ಷ ಮದನ್ ರಾಜ್ ತಿಳಿಸಿದರು.



ಪಟ್ಟಣದ ಭೈರಾಪುರ 4ನೇ ವಾರ್ಡ್‌ನಲ್ಲಿ 2021–22ರ ಸಾಲಿನ 15ನೇ ಹಣಕಾಸು ಯೋಜನೆಯಡಿ 4.5 ಲಕ್ಷ ರೂ. ವೆಚ್ಚದ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಭೈರಾಪುರ ಗ್ರಾಮ ತೀರ ಹಿಂದುಳಿದಿದೆ. ಹೀಗಾಗಿ ವಾರ್ಡ್‌ನ ಸಂಪೂರ್ಣ ಅಭಿವೃದ್ಧಿಗೆ ಸಹಕಾರ ನೀಡುವ ಮೂಲಕ ಮಾದರಿ ವಾರ್ಡ್ ಮಾಡಲು ಶ್ರಮಿಸುತ್ತೇನೆ ಎಂದರು.

ಪುರಸಭೆ ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಚುನಾವಣೆ ಸಮಯ ಮತದಾರರಿಗೆ ನೀಡಿದ ಭರವಸೆಯನ್ನು ಹಂತ ಹಂತವಾಗಿ ಈಡೇರಿಸಲು ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದೇನೆ. ಸರ್ಕಾರದಿಂದ ಬರುವ ಸವಲತ್ತನ್ನು ಬಡವರಿಗೆ ತಲುಪಿಸುವ ಮೂಲಕ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ ಎಂದರು. ಈ ವೇಳೆ ಬಾಬು ಜಗಜೀವನ್ ರಾಮ್ ತಾಲೂಕು ಅಧ್ಯಕ್ಷ ಶಂಕರ್, ಖಜಾಂಚಿ ಬಿ.ಎಲ್.ಮಹದೇವ್, ಯಾಜಮಾನರಾದ ದಿಲೀಪ್ ಕುಮಾರ್, ಶಿವು, ಬಸವಯ್ಯ, ಸಿದ್ದರಾಜು, ಗೋಪಿ, ರಾಜು ಕಂಟ್ರಾಕ್ಟರ್ ಮಹದೇವಸ್ವಾಮಿ ಇತರರಿದ್ದರು.

ವಿಜೃಂಭಣೆಯ ಶ್ರೀಸಿದ್ದಪ್ಪಾಜಿ ಪೂಜಾ ಮಹೋತ್ಸವ

ಸರಗೂರು, ಏ.4(ನಾಗೇಶ್)– ಪಟ್ಟಣದ ಮಾದಿಗ ಸಮಾಜದಿಂದ ಶ್ರೀಸಿದ್ದಪ್ಪಾಜಿ ಯವರ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.




ಪೂಜಾ ಮಹೋತ್ಸವ ಅಂಗವಾಗಿ ದೇವಸ್ಥಾನವನ್ನು ತಳಿರು ತೋರಣ ಕಟ್ಟಿ, ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಅಲ್ಲದೇ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ಮಾಡಿ ಸಿದ್ದಪ್ಪಾಜಿ ಉತ್ಸವ ಮೂರ್ತಿಯನ್ನು ಪೂರ್ಣ ಕುಂಭ ಕಳಸದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸತ್ತಿಗೆಯೊಂದಿಗೆ ಮೆರವಣಿಗೆ ನಡೆಸಲಾಯಿತು. ಉತ್ಸವ ದೇವಾಲಯಕ್ಕೆ ತಲುಪಿದ ನಂತರ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಪಪಂ ಸದಸ್ಯೆ ಸಣ್ಣತಾಯಮ್ಮ, ಮಾದಿಗ ಸಮಾಜದ ಯಜಮಾನರಾದ ಪ್ರಕಾಶ್, ಮಾಜಿ ಯಜಮಾನರಾದ ಯಜ್ಜೂರಯ್ಯ, ವೆಂಕಟಪ್ಪ, ರಾಮಚಂದ್ರ, ಜವರಯ್ಯ, ಸ್ವಾಮಿ, ಶಿವರಾಜು, ಪುಟ್ಟಸ್ವಾಮಿ, ಶ್ರೀನಿವಾಸ, ಮುಖಂಡರಾದ ನಾಗಂಯ್ಯ, ಹೆಚ್.ಜಯರಾವ್, ಶಿವರಾಜು, ಸ್ವಾಮಿ, ಸೇಟು, ರಂಗಸ್ವಾಮಿ, ಅರ್ಚಕರಾದ ರಾಚಯ್ಯ, ಸೋಮಶೇಖರ್, ದಾಸಪ್ಪ ಹಾಗೂ ಯುವಕ ಸಂಘದವರು, ಕುಲಸ್ಥರು ಭಾಗಿಯಾಗಿದ್ದರು.

ಚಿಕ್ಕದೇವಮ್ಮ ಜಾತ್ರೆಯಲ್ಲಿ ಪ್ರಾಣಿಬಲಿ ತಡೆ ಸಂಪೂರ್ಣ ಯಶಸ್ವಿ

ಬಸವ ಧರ್ಮ ಜ್ಞಾನಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ



ಹೆಚ್.ಡಿ.ಕೋಟೆ, ಏ.4(ಮಂಜು)– ಚಿಕ್ಕದೇವಮ್ಮ ಜಾತ್ರೆಯಲ್ಲಿ ಪ್ರಾಣಿಬಲಿ ತಡೆ ಸಂಪೂರ್ಣ ಯಶಸ್ವಿಯಾಗಿದ್ದು, ಶತ–ಶತಮಾನಗಳ ಮೌಢ್ಯ–ಅಂಧ ಸಂಪ್ರದಾಯಕ್ಕೆ ಅಂತಿಮ ವಿದಾಯ ಹೇಳಲಾಗಿದ್ದು, ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಮತ್ತೊಂದು ಮೈಲಿಗಲ್ಲು ಎಂದು ವಿಶ್ವಪ್ರಾಣಿ ಕಲ್ಯಾಣ ಮಂಡಳಿ, ಪಶು ಪ್ರಾಣಿ ಬಲಿ ನಿರ್ಮೂಲನಾ ಜಾಗೃತಿ ಮಹಾಸಂಘ ಮತ್ತು ಬಸವ ಧರ್ಮ ಜ್ಞಾನಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ ತಿಳಿಸಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕದೇವಮ್ಮ ಬೆಟ್ಟದ ದೇವಾಲಯದ ಪರಿಸರ, ಪಾದಗಟ್ಟೆ ಹಾಗೂ ಹಾಲುಗಡ ಪರಿಸರದಲ್ಲಿ ಕಪಿಲಾ ನದಿ ತೀರದಲ್ಲಿ ಪ್ರಾಣಿಬಲಿ ತಡೆ ಸಂಪೂರ್ಣ ಯಶಸ್ವಿಯಾಗಿದೆ ಎಂದರು.

ಇಟ್ನಾ ಗ್ರಾಮದ ಕಪಿಲಾ ನದಿ ತೀರದಲ್ಲಿ ಸಾವಿರಾರು ಭಕ್ತರಿಗೆ ಶುದ್ಧ ಸಸ್ಯಾಹಾರ ಅನ್ನದಾನ ನೆರವೇರಿಸಲಾಯಿತು. ಸಾಗರೆ ಮಾರಮ್ಮದೇವಿ (ತ್ರಿಪುರ ಸುಂದರಿ ಲಲಿತಾ ದೇವಿ) ಜಾತ್ರೆಯಲ್ಲೂ ಪ್ರಾಣಿಬಲಿ ತಡೆ ಯಶಸ್ವಿಯಾಗಿದೆ ಎಂದರು. ಇದೇ ಏ.7, 8 ರಂದು ನಡೆಯುವ ತೆರಣಿಮುಂಟಿ ಮಾಂಕಾಳಮ್ಮ ದೇವಿ ಜಾತ್ರೆಯಲ್ಲಿ ಪ್ರಾಣಿಬಲಿ ತಡೆಯಲು ಸರ್ಕಾರ, ಜಿಲ್ಲಾಡಳಿತ, ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಗೆ ಮನವಿ ಮಾಡಲಾಗಿದೆ. ಪ್ರಾಣಿಬಲಿ ತ್ಯಜಿಸಿ ಅಹಿಂಸಾತ್ಮಕ ಪೂಜೆ ಸಲ್ಲಿಸಲು ಭಕ್ತರಲ್ಲಿ ವಿನಂತಿಸಲಾಗಿದೆ ಎಂದರು.

ಭಕ್ತರು ಪ್ರಾಣಿಬಲಿ ನೀಡದೆ ಬೂದು ಕುಂಬಳಕಾಯಿ, ತೆಂಗಿನಕಾಯಿ, ಅರಿಸಿನ–ಕುಂಕುಮ, ಧೂಪ–ದೀಪ, ಇತ್ಯಾದಿ ಮಂಗಳ ದ್ರವ್ಯಗಳಿಂದ ಪೂಜೆ ಸಲ್ಲಿಸಬೇಕೆಂದು ದಯಾನಂದ ಸ್ವಾಮೀಜಿ ಮನವಿ ಮಾಡಿದರು.

ಚಿಕ್ಕದೇವಮ್ಮ ತಾಯಿ ಉತ್ಸವಮೂರ್ತಿ ಬೆಟ್ಟದಿಂದ ಇಳಿದು ಹಾಲುಗಡಕ್ಕೆ ಬರುವ ಸಂದರ್ಭ ಬೆಟ್ಟದ ಪಾದಗಟ್ಟೆಯಲ್ಲಿ, ರಸ್ತೆಗಳಲ್ಲಿ, ರಸ್ತೆಗಳ ಅಕ್ಕಪಕ್ಕಗಳಲ್ಲಿ ಹಾಗೂ ಹಾಲುಗಡದ ಪರಿಸರದಲ್ಲಿ, ಕಪಿಲಾ ನದಿ ತೀರದಲ್ಲಿ ಸಾವಿರಾರು ಪ್ರಾಣಿಗಳ ಬಲಿ, ಪ್ರಾಣಿಗಳ ಸಾಮೂಹಿಕ ಹತ್ಯಾಕಾಂಡ, ರಕ್ತದೋಕುಳಿ ನಡೆಯುತ್ತಿದ್ದುದನ್ನು ಸುಮಾರು 10 ವರ್ಷಗಳಿಂದ 1959ರ ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಕಾನೂನು ಅಡಿಯಲ್ಲಿ ಪ್ರಾಣಿಬಲಿ ತಡೆ ಕುರಿತು ಜಾಗೃತಿ ಮೂಡಿಸುವ ಮುಖಾಂತರ ನಿಲ್ಲಿಸಲಾಗಿದೆ ಎಂದರು.

ಅನಾಗರಿಕ–ಅಮಾನುಷ, ಭೀಭತ್ಸ ಹಾಗೂ ದೈವ–ಧರ್ಮ ಮತ್ತು ಕಾನೂನು ವಿರೋಧಿಯಾದ ಪ್ರಾಣಿಬಲಿ ಪದ್ಧತಿಗೆ ಅಂತಿಮ ವಿದಾಯ ಹೇಳಲಾಯಿತು ಎಂದರು.

ಮಸೀದಿಗಳಲ್ಲಿ ಧ್ವನಿವರ್ಧಕಗಳ ನಿಷೇಧಕ್ಕೆ ಬಜರಂಗದಳ, ಶ್ರೀರಾಮ ಸೇನೆ ಆಗ್ರಹ

ಬೆಂಗಳೂರು, ಏ. 4– ಹಲಾಲ್ ಮಾಂಸ, ಹಿಜಾಬ್ ನಿರ್ಬಂಧಕ್ಕೆ ಅಭಿಯಾನ ಪ್ರಾರಂಭಿಸಿದ್ದ ಬಜರಂಗದಳ ಹಾಗೂ ಶ್ರೀರಾಮ ಸೇನೆ, ಈಗ ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ನಿರ್ಬಂಧಿಸುವಂತೆ ಒತ್ತಾಯಿಸಿದೆ. ಮಸೀದಿಗಳ ಧ್ವನಿವರ್ಧಕಗಳಲ್ಲಿ ಮೊಳಗುವ ಆಜಾನ್‌ಗೆ ಪ್ರತಿಭಟನೆ ವ್ಯಕ್ತಪಡಿಸಲು ಸಂಜೆ 5 ಗಂಟೆಯಿಂದ ಭಜನೆಗಳನ್ನು ಧ್ವನಿವರ್ಧಕಗಳಲ್ಲಿ ಹಾಕಲಾಗುವುದು ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಮುಖ್ಯಸ್ಥ ರಾಜ್ ಠಾಕ್ರೆ ಅವರ ಎಚ್ಚರಿಕೆಯನ್ನು ರಾಜ್ಯದಲ್ಲಿ ಬಜರಂಗದಳ ಹಾಗೂ ಶ್ರೀರಾಮ ಸೇನೆ ಸಂಘಟನೆಗಳು ಬೆಂಬಲಿಸಿವೆ.

ರಾಜ್ ಠಾಕ್ರೆ ಮಸೀದಿಗಳಲ್ಲಿನ ಧ್ವನಿವರ್ಧಕಗಳನ್ನು ತೆಗೆದುಹಾಕುವಂತೆ ಆಗ್ರಹಿಸಿದ್ದರು. "ಮಸೀದಿಗಳಲ್ಲಿ ಏಕೆ ಧ್ವನಿವರ್ಧಕಗಳಲ್ಲಿ ಅಷ್ಟು ದೊಡ್ಡದಾಗಿ ಆಜಾನ್ ಅಥವಾ ಪ್ರಾರ್ಥನೆಯನ್ನು ಕೂಗಲಾಗುತ್ತದೆ. ಇದನ್ನು ನಿಲ್ಲಿಸದೇ ಇದ್ದಲ್ಲಿ ಮಸೀದಿಗಳ ಹೊರಭಾಗದಲ್ಲಿ ಹನುಮಾನ್ ಚಾಲಿಸಾವನ್ನು ಏರುಧ್ವನಿಯಲ್ಲಿ ಹಾಕಲಾಗುವುದು" ಎಂದು ರಾಜ್ ಠಾಕ್ರೆ ಎಚ್ಚರಿಸಿದ್ದರು. ಈ ಬೆನ್ನಲ್ಲೇ ರಾಜ್ಯದಲ್ಲಿ ಶ್ರೀರಾಮ ಸೇನೆ ಸಂಚಾಲಕ ಪ್ರಮೋದ್ ಮುತಾಲಿಕ್ ಮಾತನಾಡಿದ್ದು, "ಮಸೀದಿಗಳಲ್ಲಿ ಧ್ವನಿವರ್ಧಕ ತೆಗೆದು ಹಾಕುವುದು ಹಾಗೂ ಶಬ್ದಮಾಲಿನ್ಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಆದೇಶವನ್ನು ಜಾರಿಗೊಳಿಸುವುದು ಹಿಂದೂ ಸಂಘಟನೆಗಳ ಒತ್ತಾಯವಾಗಿದೆ" ಎಂದು ಹೇಳಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಿಂದೂ ಸಂಘಟನೆಗಳು ಮನವಿ ಸಲ್ಲಿಸಿದೆ ಆದರೆ ಯಾರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಮುತಾಲಿಕ್ ಆರೋಪಿಸಿದ್ದಾರೆ.

ಕೆಎಸ್ ಈಶ್ವರಪ್ಪ ಮಾತನಾಡಿ, ಮುಸ್ಲಿಂ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ, ವಿದ್ಯಾರ್ಥಿಗಳು ಹಾಗೂ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವವರನ್ನು ಗಮನದಲ್ಲಿಟ್ಟುಕೊಂಡು, ವಿವಾದಕ್ಕೆ ಪರಿಹಾರ ಕಂಡು ಕೊಳ್ಳಬಹುದು ಎಂದು ಹೇಳಿದ್ದಾರೆ. ಮಸೀದಿಗಳ ಬಳಿ ಧ್ವನಿವರ್ಧಕಗಳಲ್ಲಿ ಹನುಮಾನ್ ಚಾಲಿಸಾ ಮೊಳಗಿಸುವ ಎಚ್ಚರಿಕೆ ಬಗ್ಗೆಯೂ ಈಶ್ವರಪ್ಪ ಮಾತನಾಡಿದ್ದು, ಇದು ಪೈಪೋಟಿಯಲ್ಲ. ಹೀಗೆಯೇ ಮುಂದುವರೆದರೆ ಸಮುದಾಯಗಳ ನಡುವೆ ಘರ್ಷಣೆ ಉಂಟಾಗಲಿದೆ. ಮುಸ್ಲಿಂ ನಾಯಕರು ಧ್ವನಿವರ್ಧಕಗಳನ್ನು ಯಾರಿಗೂ ಸಮಸ್ಯೆಯಾಗದಂತೆ ಸಾಧ್ಯವಾದಷ್ಟೂ ಪ್ರಾರ್ಥನಾ ಸ್ಥಳಗಳಿಗಷ್ಟೇ ಸೀಮಿತ ಗೊಳಿಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಯುವ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಜಯಪುರ ಗ್ರಾಪಂ ಉಪಾಧ್ಯಕ್ಷ ಮಾವಿನಹಳ್ಳಿ ಎಸ್.ಸಂದೀಪ್ ಅವರನ್ನು ಅರಸಿನಕೆರೆ ಗ್ರಾಮದ ಜೈಭೀಮ್ ಯುವ ಬಳಗದ ಸದಸ್ಯರು ಅಭಿನಂದಿಸಿದರು.



ಕಂಪಲಾಪುರದ ಶ್ರೀಕರಕಂಠೇಶ್ವರ ಗೆಳೆಯರ ಬಳಗ ಆಯೋಜಿಸಿದ್ದ ದ್ವಿತೀಯ ವರ್ಷದ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯನ್ನು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು. ಜೆಡಿಎಸ್ ಮುಖಂಡ ಕೆ.ಕುಮಾರ್, ಗ್ರಾಪಂ ಅಧ್ಯಕ್ಷೆ ಮಮತ, ಪಿಎಸಿಎಸ್ ಅಧ್ಯಕ್ಷ ಜಯಣ್ಣ, ಡೈರಿ ಅಧ್ಯಕ್ಷ ಕೃಷ್ಣೇಗೌಡ, ಸ್ವಾಮಿಗೌಡ, ನಾಗೇಗೌಡ, ಮಹೇಂದ್ರ ಸ್ವಾಮೀಜಿ, ಕೃಷ್ಣ, ನಾಗೇಂದ್ರ, ಚಂದ್ರು, ಸುನೀಲ್, ಬಸವರಾಜ್ ಮತ್ತಿತರರಿದ್ದರು.

ಪೌರ ಕಾರ್ಮಿಕರ ಆರೋಗ್ಯವೇ ನಗರದ ಆರೋಗ್ಯ: ಹೆಚ್‌ಪಿಎಂ

ಹುಣಸೂರು, ಏ.3(ಕೆಕೆ)– ಆರೋಗ್ಯವೇ ಭಾಗ್ಯ ಎಂಬಂತೆ ಪೌರ ಕಾರ್ಮಿಕರು ಆರೋಗ್ಯವಾಗಿದ್ದರೆ, ನಗರವೂ ಆರೋಗ್ಯವಾಗಿರುತ್ತದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.



ನಗರಸಭೆಯ ಪೌರ ಕಾರ್ಮಿಕರ ಉಪಾಹಾರ ಗೃಹದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಪೌರ ಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿಗೆ ಬೆಳಗಿನ ಉಪಹಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರದ ಆದೇಶದ ಮೇರೆಗೆ ನಗರಾಭಿವೃದ್ಧಿ ಇಲಾಖೆ ಸುತ್ತೋಲೆ ಪ್ರಕಾರ ಶೇ.24.10 ರಾಜ್ಯ ಹಣಕಾಸು ಯೋಜನೆ ಅನುದಾನದಡಿ 9.31 ಲಕ್ಷ ವೆಚ್ಚದಲ್ಲಿ ಪ್ರತಿ ಮಾಹೆ 105 ಸ್ವಚ್ಛತಾ ಸಿಬ್ಬಂದಿಗೆ ಬೆಳಗಿನ ಉಪಹಾರ ನೀಡಲು ಅಂದಾಜು 90 ಸಾವಿರದಿಂದ 1 ಲಕ್ಷದವರೆಗೆ ವೆಚ್ಚ ಭರಿಸಲಾಗುವುದು ಎಂದರು.

ನಿತ್ಯ ನಮ್ಮ ನಗರ ಸ್ವಚ್ಛಗೊಳಿಸುವ ದೈವ ಪುತ್ರರಿಗೆ ಪೌಷ್ಠಿಕ ಆಹಾರ ನೀಡಬೇಕು. ಊಟಕ್ಕೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ತಣ್ಣಗಿನ ಆಹಾರ ನೀಡುವ ಬದಲಿಗೆ ಹಬೆಯಲ್ಲಿ ಆಹಾರ ಇಟ್ಟುಕೊಡಿ, ಇದರ ಜೊತೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಹಾಗೂ ಪೌರ ಕಾರ್ಮಿಕರಲ್ಲಿ ಸ್ವಚ್ಛತಾ ಜಾಗೃತಿಗಾಗಿ ಸ್ವ–ಸಹಾಯ ಪದ್ಧತಿಯಲ್ಲಿ ಆಹಾರವನ್ನು ಅವರುಗಳೇ ಬಡಿಸಿಕೊಂಡು ಸ್ವಚ್ಛತೆ ಕಾಪಾಡಿಕೊಳ್ಳುವಂತೆ ನೋಡಿಕೊಳ್ಳ ಬೇಕೆಂದು ಪೌರಾಯುಕ್ತರಿಗೆ ಸೂಚನೆ ನೀಡಿದರು.

ಇದೇ ವೇಳೆ ಶಾಸಕರು ಪೌರ ಕಾರ್ಮಿಕರಿಗೆ ಉಪಹಾರ ಸೇವನೆಗೆ ಅನುಕೂಲವಾಗುವಂತೆ 100 ಸ್ಟೀಲ್ ತಟ್ಟೆಗಳನ್ನು ನೀಡಿ ಅವರುಗಳೇ ಸ್ವಚ್ಛತೆ ಮಾಡಿಕೊಂಡು ಶುಚಿಯಾಗಿ ಇಟ್ಟುಕೊಳ್ಳುವಂತೆ ಸೂಚಿಸಿದರು.

ನಗರಸಭಾಧ್ಯಕ್ಷೆ ಸಮೀನಾ ಫರ್ವಿನ್ ಮಾತನಾಡಿ, ಪೌರಾಡಳಿತ ನಿರ್ದೇಶನಾಲಯದ ಸೂಚನೆ ಮೇರೆಗೆ ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಾಣ, ಅವರುಗಳ ದಿನನಿತ್ಯ ಬಳಸುವ ಪರಿಕರ ಸಂಗ್ರಹಿಸಿಡಲು ವ್ಯವಸ್ಥೆ ಕಲ್ಪಿಸುವುದು, ಹೊರ ಗುತ್ತಿಗೆ ಪೌರ ಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಎಸ್‌ಬಿಐನಲ್ಲಿ ಗುಂಪು ವೈದ್ಯಕೀಯ ವಿಮೆ ಮಾಡಿಸಲು ಕ್ರಮವಹಿಸಲಾಗುದು ಎಂದರು. ಈ ಸಂದರ್ಭ ನಗರಸಭೆ ಉಪಾಧ್ಯಕ್ಷ ದೇವನಾಯಕ, ಸದಸ್ಯರಾದ ರಾಣಿ ಪೆರುಮಾಳ್, ರಂಜಿತ, ಸತೀಶ್ ಕುಮಾರ್, ಸ್ವಾಮಿಗೌಡ, ಮಾಜಿ ಅಧ್ಯಕ್ಷ ಲಕ್ಷ್ಮಣ್, ಮಾಜಿ ಸದಸ್ಯ ಜಾಕೀರ್ ಹುಸೇನ್, ಪೌರಾಯುಕ್ತ ಕೆ.ಪಿ.ರವಿಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರೂಪ. ಎಲ್. ಜೆ.ಇ.ಗಳಾದ ಲೋಕೇಶ. ದೀಪಕ್, ಆರೋಗ್ಯ ಶಾಖೆಯ ಹಿರಿಯ ಆರೋಗ್ಯ ನಿರೀಕ್ಷಕರಾದ ಸತೀಶ್, ಮೋಹನ್, ಕಿರಿಯ ನಿರೀಕ್ಷಕರಾದ ರಾಜೇಂದ್ರ, ಶಶಿಕುಮಾರ್ ಹಾಗೂ ನಗರ ಸಿಬ್ಬಂದಿ ಇತರರಿದ್ದರು.

60 ವರ್ಷ ಮೀರಿದ ಬಿಸಿಯೂಟ ಸಿಬ್ಬಂದಿಯ ಕೆಲಸಕ್ಕೆ ಕುತ್ತು

ಬೆಂಗಳೂರು, ಏ.4– ರಾಜ್ಯದಲ್ಲಿ ಅಕ್ಷರ ದಾಸೋಹ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಶಾಲಾ ಅಡುಗೆ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ 60 ವರ್ಷ ಮೇಲ್ಪಟ್ಟ ಅಡುಗೆ ಸಿಬ್ಬಂದಿಯ ಕಡ್ಡಾಯವಾಗಿ ಕರ್ತವ್ಯದಿಂದ ತೆಗೆಯುವಂತೆ ಸರ್ಕಾರ ಆದೇಶ ಹೊರಡಿಸಿದೆ.

2003–04ರಿಂದ ಅಂದರೆ ಬಿಸಿಯೂಟ ಯೋಜನೆ ಆರಂಭವಾದಾಗಿನಿಂದ 60 ವರ್ಷ ಮೀರಿದರೂ ಆರೋಗ್ಯವಾಗಿದ್ದರೆ ಮಾನವೀಯತೆ ದೃಷ್ಟಿಯಿಂದ ಕೆಲಸದಲ್ಲಿ ಮುಂದುವರಿಸಿಕೊಂಡು ಬರಲು ಅವಕಾಶ ನೀಡಿತ್ತು. ಸದ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಈ ಕುರಿತು ಅಧಿಕೃತ ಆದೇಶ ಹೊರಡಿಸಿದ್ದು, 60 ವರ್ಷ ಪೂರ್ಣಗೊಳಿಸಿದವರನ್ನು ಅಡುಗೆ ಕರ್ತವ್ಯದಿಂದ ತೆರವುಗೊಳಿಸುವಂತೆ ತಿಳಿಸಿದೆ.

24 ಗಂಟೆಯೂ 'ತುರ್ತು ವೈದ್ಯಕೀಯ ಸೇವೆ' ನೀಡುವಂತೆ ರಾಜ್ಯ ಆರೋಗ್ಯ ಇಲಾಖೆಯಿಂದ ಖಡಕ್ ಸೂಚನೆ

ಬೆಂಗಳೂರು, ಏ.4– ಸಮುದಾಯ ಆರೋಗ್ಯ ಹಾಗೂ ಅದರ ಮೇಲ್ದರ್ಜೆಯ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಗಳ ಕಾಲ ತುರ್ತು ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಸಮುದಾಯ ಆರೋಗ್ಯ ಹಾಗೂ ಅದರ ಮೇಲ್ದರ್ಜೆಯ ಆಸ್ಪತ್ರೆಗಳಲ್ಲಿನ ತುರ್ತು ಸೇವೆಗಳ ಸಿಬ್ಬಂದಿಗಳಾದ ವೈದ್ಯಾಧಿಕಾರಿಗಳು, ಶುಶ್ರೂಷಾಧಿಕಾರಿಗಳು ಹಾಗೂ ಗ್ರೂಪ್ ಡಿ ನೌಕರರು ಕರ್ತವ್ಯದಲ್ಲಿ ಹಾಜರಿರತಕ್ಕದ್ದು, ಕರ್ತವ್ಯದ ಪಾಳಿ ಮುಗಿದ ನಂತರ ಮತ್ತೊಬ್ಬ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಾಗುವವರೆಗೆ ಕರ್ತವ್ಯದಲ್ಲಿ ಮುಂದುವರೆಯುವಂತೆ ಹಾಗೂ ತುರ್ತು ಸೇವೆಗಳು ಲಭ್ಯವಿರುವಂತೆ ಅಗತ್ಯ ಕ್ರಮ ವಹಿಸುವುದು ಹಾಗೂ ಕಾರ್ಯ ವೇಳಾ ಪಟ್ಟಿಯನ್ನು ತಪ್ಪದೇ ಪಾಲಿಸತಕ್ಕದ್ದು ಎಂದು ಸೂಚನೆ ನೀಡಿದ್ದಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸತಕ್ಕದ್ದು, ಇಲ್ಲವಾದಲ್ಲಿ ಸಂಬಂಧಪಟ್ಟ ಆರೋಗ್ಯ ಸಂಸ್ಥೆಯ ಆಡಳಿತ ವೈದ್ಯಾಧಿಕಾರಿಯನ್ನೇ ನೇರಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮತ್ತೆ ಏರಿದ ತೈಲ ಬೆಲೆ

ನವದೆಹಲಿ, ಏ. 4– ದೇಶದಲ್ಲಿ ತೈಲ ಬೆಲೆ ಏರಿಕೆಯ ಪರ್ವ ಎಂದಿನಂತೆ ಮುಂದುವರೆದಿದ್ದು, ಸೋಮವಾರವೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 40 ಪೈಸೆ ಹೆಚ್ಚಿಸಲಾಗಿದೆ. ಈ ಮೂಲಕ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ ರೂ.110ಗಳತ್ತ ಸಾಗಿದೆ.

ಕಳೆದ 14 ದಿನಗಳಲ್ಲಿ 11 ಬಾರಿ ಬೆಲೆ ಏರಿಕೆ ಮಾಡುವ ಮೂಲಕ ಪೆಟ್ರೋಲ್ ಮತ್ತು ಡೀಸಲೆ ದರ ರೂ.8.40 ಏರಿಕೆಯಾಗಿದೆ. 14ನೇ ಬಾರಿಯ ಏರಿಕೆಯ ನಂತರ ದೆಹಲಿಯಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ ರೂ.103.81 ಮುಟ್ಟಿದೆ. ಲೀಟರ್ ಡೀಸೆಲ್ ಬೆಲೆ ರೂ.95.07 ತಲುಪಿದೆ.

ಮುಂಬೈನಲ್ಲಿ ಲೀಟರ್ ಪೆಟ್ರೋಲ್ ರೂ. 118.83, ಡೀಸೆಲ್ ರೂ. 103.07ಕ್ಕೆ ಮಾರಾಟವಾಗುತ್ತಿದೆ. ಅದೇ ರೀತಿ ಚೆನ್ನೈನಲ್ಲಿ ಲೀಟರ್ ಪೆಟ್ರೋಲ್ ದರ 109.34 ರೂಪಾಯಿ ಹಾಗೂ ಲೀಟರ್ ಡೀಸೆಲ್ ದರ 99.42 ರೂಪಾಯಿ ಇದೆ. ಕೋಲ್ಕತ್ತಾದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 113.03 ರೂ. ಡೀಸೆಲ್ ಬೆಲೆ ಲೀಟರ್‌ಗೆ 97.82 ರೂ. ಆಗಿದೆ. ಇನ್ನು ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ರೂ.108.99 ತಲುಪಿದ್ದು, ಡೀಸೆಲ್ ಬೆಲೆ 92.83 ರೂಪಾಯಿ ಏರಿಕೆಯಾಗಿದೆ.

ಕಾಂಗ್ರೆಸ್‌ನವರು ನಿಜವಾದ ಕೋಮುವಾದಿಗಳು

ಪುರಸಭಾ ಸದಸ್ಯ ಅರ್ಜುನ್ ಆರೋಪ



ತಿ.ನರಸೀಪುರ, ಏ.4– ಕಾಂಗ್ರೆಸ್‌ನವರು ದೇಶದ ನಿಜವಾದ ಕೋಮುವಾದಿಗಳು ಎಂದು ಪುರಸಭಾ ಸದಸ್ಯ ಅರ್ಜುನ್ ಆರೋಪಿಸಿದರು.

ಪಟ್ಟಣದ ಗೋಪಾಲಪುರದ ತಮ್ಮ ಜನ ಸಂಪರ್ಕ ಕೇಂದ್ರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಜಾಬ್, ಹಲಾಲ್ ಹಾಗೂ ಜಟ್ಕಾ ಕಟ್ ವಿವಾದ ಮುನ್ನಲೆಗೆ ಬಂದಿರುವ ಸಂದರ್ಭ ದಲ್ಲಿ ಮುಸ್ಲಿಂ ಸಮುದಾಯದ ಓಟ್ ಬ್ಯಾಂಕ್ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, ವಿವಾದಕ್ಕೆ ತುಪ್ಪ ಸುರಿಯುವ ಕೆಲಸ ಮಾಡಲು ಹೊರಟಿದೆ. ಬಹಳಷ್ಟು ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಮುಸಲ್ಮಾನರ ಪರ ಹೇಳಿಕೆ ನೀಡುತ್ತಿರುವುದು ಅವರ ಓಟಿಗಾಗಿಯೇ ಹೊರತು ಅವರ ಮೇಲಿರುವ ಪ್ರೀತಿಯಿಂದಲ್ಲ ಎಂದರು.

ಮಾತೆತ್ತಿದರೆ ಹಿಂದೂ–ಮುಸ್ಲಿಮರು ಮೊದಲಿನಿಂದಲೂ ಅಣ್ಣ ತಮ್ಮಂದಿರಂತೆ ಇದ್ದೆವು. ಬಿಜೆಪಿ ಬಂದ ಮೇಲೆ ನಮ್ಮ ನಡುವೆ ಒಡಕುಂಟು ಮಾಡುವ ಕೆಲಸ ಮಾಡುತ್ತಿದೆ ಎಂದು ಆರೋಪಿಸುವ ನೀವು ಅದಕ್ಕೆ ಯಾವುದಾದರೂ ಮೂಲ ಸಾಕ್ಷಿ ಒದಗಿಸಿದ್ದೀರಾ ಎಂದು ಪ್ರಶ್ನಿಸಿದ ಅವರು ಹಿಜಾಬ್ ವಿಷಯದಲ್ಲಿ ಸರ್ಕಾರದ ನಿರ್ಧಾರ ಸರಿಯಾಗಿದೆ ಎಂದರು.

ಶಾಲೆಯಲ್ಲಿ ಎಲ್ಲಾ ಧರ್ಮದವರೂ ಸರಿ ಸಮಾನರು ಎಂಬ ಕಾರಣಕ್ಕೆ ಸಮವಸ್ತ್ರ ಕಡ್ಡಾಯ ಗೊಳಿಸಿದರೆ ಅದು ತಪ್ಪು ಹೇಗಾಗುತ್ತದೆ ಎಂದು ಪ್ರಶ್ನಿಸಿದರು.

ಸಂವಿಧಾನದ ಬಗ್ಗೆ ಗೌರವ ಇಲ್ಲ: ಪಿಎಫ್ಐ ಸೇರಿದಂತೆ ಕೆಲ ಸಂಘಟನೆಗಳು ಹಿಜಾಬ್ ಹಾಗೂ ಹಲಾಲ್ ಕಟ್ ಬಗ್ಗೆ ಮುಸ್ಲಿಂ ಪರ ಹೇಳಿಕೆ ನೀಡುತ್ತಿದ್ದಾರೆ. ನಿಮಗೂ ಹಾಗೂ ಮುಸಲ್ಮಾನರಿಗೂ ಸಂವಿಧಾನದ ಬಗ್ಗೆ ಗೌರವ ಇದ್ದರೆ ಮೊದಲು ಸುಪ್ರೀಂ ಕೋರ್ಟ್ ಆದೇಶದಂತೆ ಮಸೀದಿಗಳಲ್ಲಿ ಮೈಕ್ ಹಾಕಿಸುವುದನ್ನು ನಿಲ್ಲಿಸಿ ಎಂದರು. ಕಾಂಗ್ರೆಸ್‌ನವರು ಓಟ್ ಬ್ಯಾಂಕ್‌ಗಾಗಿ ಅಲ್ಪ ಸಂಖ್ಯಾತರ ಓಲೈಕೆ ಮಾಡುವುದನ್ನು ಬಿಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಾಬು ಜನ ಜೀವನ ರಾಂ ಸಂಘದ ಅಧ್ಯಕ್ಷ ಮಲಿ ಯೂರು ಶಂಕರ್, ಸಿ.ಡಿ. ವೆಂಕಟೇಶ್, ಬಿ.ಎಲ್.ಮಹದೇವು ಹಾಜರಿದ್ದರು.

ಮತ್ತೆ ತಲೆ ಎತ್ತಿದ ಅಕ್ರಮ ಚಟುವಟಿಕೆ

ತಿ.ನರಸೀಪುರದಲ್ಲಿ ಮತ್ತೆ ಅಕ್ರಮ ಚಟುವಟಿಕೆಗಳು ತಲೆ ಎತ್ತಿದ್ದು, ಲೈಸೆನ್ಸ್ ಇಲ್ಲದ ವಾಣಿಜ್ಯ ಕಟ್ಟಡಗಳು, ಬಾರ್‌ಗಳು, ಕ್ಲಬ್‌ಗಳು ವ್ಯವಹಾರ ನಡೆಸುತ್ತಿದ್ದು ಇದರ ವಿರುದ್ಧ ಕೂಡಲೇ ಈ ಬಗ್ಗೆ ಕ್ರಮಕ್ಕೆ ಮುಂದಾಗಬೇಕು ಎಂದು ಪುರಸಭಾಧ್ಯಕ್ಷ ಮದನ್ ರಾಜ್ ಹಾಗೂ ಸಿಇಓ ಬಸವರಾಜು ಅವರನ್ನು ಅರ್ಜುನ್ ಒತ್ತಾಯಿಸಿದರು. ಅಭಿವೃದ್ಧಿ ಕಾರ್ಯಗಳಿಗೆ ಮೊದಲ ಆದ್ಯತೆ ಎನ್ನುವ ಅಧ್ಯಕ್ಷರು ಪಟ್ಟಣದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಅವರು ಒತ್ತಾಯಿಸಿದರು.

ಯಶಸ್ ಎಸ್.ಆರ್.ಗೆ ಪಿಎಚ್.ಡಿ ಪದವಿ



ಮೈಸೂರು, ಏ.4– ಡಾ. ಎಚ್.ಪಿ. ಶಿವರಾಜು ಅವರ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಯಶಸ್ ಎಸ್.ಆರ್. ಅವರು ಪರಿಸರ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ

ಬನ್ನೂರಲ್ಲಿ ಪೌರ ಕಾರ್ಮಿಕರ ಕುಂದು ಕೊರತೆ ಸಭೆ

ಪೌರ ಕಾರ್ಮಿಕರಿಂದ ಬರಿಗೈಯಲ್ಲಿ ಶೌಚಗುಂಡಿ ಸ್ವಚ್ಛಗೊಳಿಸಿದರೆ ಜೈಲು ಶಿಕ್ಷೆ

ಅಧಿಕಾರಿಗಳಿಗೆ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಎಚ್ಚರಿಕೆ

ತಿ.ನರಸೀಪುರ, ಏ.4(ಎಸ್‌ಕೆ)– ಪೌರ ಕಾರ್ಮಿಕರಿಂದ ಬರಿಗೈಯಲ್ಲಿ ಶೌಚಾಲಯದ ಗುಂಡಿ ಸ್ವಚ್ಛಗೊಳಿಸುವ ಪ್ರಕರಣ ಕಂಡು ಬಂದಲ್ಲಿ ಜೈಲು ಶಿಕ್ಷೆ ವಿಧಿಸುವ ಜೊತೆಗೆ ಲಕ್ಷಾಂತರ ರೂ. ದಂಡ ತೆರಬೇಕಾಗುತ್ತದೆ ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.



ತಾಲೂಕಿನ ಬನ್ನೂರು ಪುರಸಭೆ ಸಭಾಂಗಣದಲ್ಲಿ ನಡೆದ ಪೌರ ಕಾರ್ಮಿಕರ ಕುಂದು ಕೊರತೆ ಸಭೆಯಲ್ಲಿ ಭಾಗವಹಿಸಿ, ನಂತರ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಎಚ್ಚರಿಕೆ ನೀಡಿದ ಅವರು, ಎಲ್ಲರಿಗೂ ತಿಳಿದಿರುವಂತೆ ಶೌಚಾಲಯದ ಗುಂಡಿಯನ್ನು ಪೌರ ಕಾರ್ಮಿಕರಿಂದ ಬರಿಗೈನಲ್ಲಿ ಸ್ವಚ್ಛಗೊಳಿಸುವುದು ಅಪರಾಧ. ಹಾಗೊಂದು ವೇಳೆ ಅಂತಹ ಪ್ರಕರಣ ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು ನನಗೆ ಅಧಿಕಾರ ವಿದ್ದು, ಜೈಲು ಶಿಕ್ಷೆ ವಿಧಿಸಲೂ ಅವಕಾಶವಿದೆ. ಹಾಗಾಗಿ ಅದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು 10 ತಾರೀಖಿನೊಳಗೆ ವೇತನ ಪಾವತಿಸುವಂತೆ ಸೂಚಿಸಿದರು. ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಮಾಡಿಸುವ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಬೇಕು. ಆದರೆ ನೀವಿಲ್ಲಿ 3 ವರ್ಷಗಳಿಂದಲೂ ಯಾಕೆ ಆರೋಗ್ಯ ತಪಾಸಣೆ ಮಾಡಿಸಿಲ್ಲ ಎಂದು ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಇದಕ್ಕುತ್ತರಿಸಿದ ಅಧಿಕಾರಿ ಕೂಡಲೇ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಪ್ರತಿ ವರ್ಷಕ್ಕೆ 2 ಬಾರಿ ಕಾರ್ಮಿಕರಿಗೆ ಸಮವಸ್ತ್ರ ಕೊಡಬೇಕೆಂಬ ನಿಯಮವಿದೆ. ಆದರೆ ನೀವು ಮಾತ್ರ ಸಮವಸ್ತ್ರ ಕೊಟ್ಟಿಲ್ಲ. ಪೌರ ಕಾರ್ಮಿಕರು ಜೀವನ ಪೂರ್ತಿ ಕಸದ ಜೊತೆಯಲ್ಲೇ ಕೆಲಸ ಮಾಡುವುದರಿಂದ ವರದಿಯೊಂದು ಅವರು 40 ರಿಂದ 50 ವರ್ಷಗಳಷ್ಟೇ ಬದುಕುತ್ತಾರೆ ಎಂದು ತಿಳಿಸಿದೆ. ಹಾಗಾಗಿ ನೀವು ಅವರ ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸಬೇಕು. ಸಮವಸ್ತ್ರ, ಮಾಸ್ಕ್‌ಗಳನ್ನು ಅವಶ್ಯಕತೆಗೆ ಅನುಗುಣವಾಗಿ ನೀಡುವಂತೆ ಸೂಚಿಸಿದರು.

ಇಎಸ್‌ಐ ಹಾಗೂ ಪಿಎಫ್ ಕುರಿತಂತೆ ಮಾಹಿತಿ ಪಡೆದ ಅವರು ಫಲಾನುಭವಿಗಳ ಖಾತೆಗೆ ಈ ಹಣ ಹೋಗಿರುವ ಬಗ್ಗೆ ಖಾತರಿ ಪಡಿಸಿಕೊಂಡು 15 ರೊಳಗೆ ಹಣ ಕಳುಹಿಸುವಂತೆ ತಿಳಿಸಿದರು.

ಪಟ್ಟಣದಲ್ಲಿ ಪೌರ ಕಾರ್ಮಿಕರಿಗೆ ವಿಶಾಲವಾದ ವಿಶ್ರಾಂತಿ ಗೃಹ ನಿರ್ಮಾಣ ಮಾಡುವಂತೆ ಸೂಚಿಸಿದ ಅವರು, ಬಿ.ಕಾಂ, ಬಿಎಸ್ಸಿ ವ್ಯಾಸಾಂಗ ಮಾಡುತ್ತಿರುವ ಪೌರ ಕಾರ್ಮಿಕರ ಮಕ್ಕಳಿಗೆ ಫೀಸ್‌ನಲ್ಲಿ ಡಿಸ್ಕೌಂಟ್, ಲ್ಯಾಪ್‌ಟಾಪ್ ಕೊಡಲು ಅವಕಾಶ ಇದ್ದರೆ ಕೊಡುವಂತೆ ಸೂಚಿಸಿದರು. ರಾಜ್ಯಾದ್ಯಂತ ಪೌರ ಕಾರ್ಮಿಕರಿಗೆ ಏಕರೂಪ ಸಮವಸ್ತ್ರ ಜಾರಿಗೆ ತರಲು ಚಿಂತನೆ ನಡೆಸಲಾಗಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ಅಲ್ಲದೇ ರಾಜ್ಯಾದ್ಯಂತ ಪೌರ ಕಾರ್ಮಿಕರ ಗಣತಿ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪೌರ ಕಾರ್ಮಿಕರಿಗೆ ಬೆಳಗಿನ ಉಪಾಹಾರ ನೀಡದ ಕುರಿತಂತೆ ಸ್ಪಷ್ಟನೆ ಕೇಳಿದ ಶಿವಣ್ಣರಿಗೆ ಉತ್ತರಿಸಿದ ಅಧಿಕಾರಿ ಈಗಾಗಲೇ ಉಪಹಾರ ನೀಡಲು ಟೆಂಡರ್ ನೀಡಲಾಗಿದೆ ಎಂದರು. ಮೊದಲು ಪೌರ ಕಾರ್ಮಿಕರಿಗೆ ಉಪಾಹಾರ ಮುಖ್ಯವಾಗಿರುವುದರಿಂದ ಅದನ್ನು ಕೊಡಿಸಲು ವ್ಯವಸ್ಥೆ ಮಾಡಿ ಜನರಲ್ ಫಂಡ್‌ನಲ್ಲಿನ ಹಣವನ್ನು ಬಳಕೆ ಮಾಡಿಕೊಳ್ಳುವಂತೆ ಸೂಚಿಸಿದ ಶಿವಣ್ಣ 24.10 ಅನುದಾನವನ್ನು ಆರೋಗ್ಯ ಮತ್ತು ಶಿಕ್ಷಣಕ್ಕೆ ಮಾತ್ರ ಉಪಯೋಗಿಸಿ ಎಂದು ಸಲಹೆ ನೀಡಿದರು.

ಇದಕ್ಕೆ ಮೊದಲು ನಡೆದ ಪೌರ ಕಾರ್ಮಿಕರ ಕುಂದು ಕೊರತೆ ಸಭೆಯಲ್ಲಿ ಕಾರ್ಮಿಕರು ಅನೇಕ ದೂರುಗಳನ್ನು ಸಲ್ಲಿಸಿದರು. ಪೌರ ಕಾರ್ಮಿಕರ ಕಾಲೋನಿಯಲ್ಲಿ ತಿರುಗಾಡಲು ರಸ್ತೆ ಇಲ್ಲ, ಅಧಿಕಾರಿಗಳು ಪೌರ ಕಾರ್ಮಿಕರನ್ನು ಕಾಲ ಕಸದಂತೆ ಕಾಣುತ್ತಾರೆ, ಸರ್ಕಾರದ ಯಾವುದೇ ಸವಲತ್ತು ನಮಗೆ ತಲುಪುತ್ತಿಲ್ಲ, ಬೆಳಗಿನ ಉಪಾಹಾರ ಹಾಗೂ ವಿದ್ಯಾರ್ಥಿ ವೇತನ ನೀಡಲಾಗುತ್ತಿಲ್ಲ, ಪೌರ ಕಾರ್ಮಿಕರು ಮೃತ ಪಟ್ಟರೆ ಯಾವುದೇ ಅಧಿಕಾರಿ ಬಂದು ನೋಡುವುದಿಲ್ಲ ಎಂಬ ದೂರುಗಳ ಜೊತೆಗೆ ಪುರಸಭೆಯಲ್ಲಿ 20 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸುತ್ತಿರುವವರಿದ್ದು ಕೂಡಲೇ ಅವರನ್ನು ಎತ್ತಂಗಡಿ ಮಾಡುವಂತೆ ದೂರುಗಳು ಸಲ್ಲಿಕೆಯಾದವು.

ಪುರಸಭಾಧ್ಯಕ್ಷೆ ಭಾಗ್ಯಶ್ರೀ, ಉಪಾಧ್ಯಕ್ಷೆ ಭಾಗ್ಯ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಮುನಿ ರಾಜು, ಸಫಾಯಿ ಕರ್ಮಚಾರಿ ವಿಚಕ್ಷಣ ಸಮಿತಿ ಜಿಲ್ಲಾ ನಿರ್ದೇಶಕ ನಂಜಪ್ಪ, ತಹಸೀಲ್ದಾರ್ ಗಿರಿಜಾ, ತಾಪಂ ಇಓ ಕೃಷ್ಣ, ಆರೋಗ್ಯಾಧಿಕಾರಿ ರಮೇಶ್ ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ಮತ್ತಿತರರಿದ್ದರು.

ಪೌರ ಕಾರ್ಮಿಕರಿಗೆ ಗೃಹ ಭಾಗ್ಯ

19 ಮಂದಿ ಪೌರ ಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿ 6.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮನೆಗಳು ಅಂತಿಮ ಹಂತದಲ್ಲಿದ್ದು, ಮುಂದಿನ ತಿಂಗಳು ಪೌರ ಕಾರ್ಮಿಕರಿಗೆ ಹಸ್ತಾಂತರಿಸಲಾಗುವುದೆಂದು ಪುರಸಭಾ ಮುಖ್ಯಾಧಿಕಾರಿ ಮಹದೇವು ತಿಳಿಸಿದ ಹಿನ್ನೆಲೆಯಲ್ಲಿ ಕೂಡಲೇ ಮನೆಗಳ ಹಸ್ತಾಂತರ ಕಾರ್ಯಕ್ರಮ ಹಮ್ಮಿಕೊಳ್ಳಿ ನಾವು ಬರುತ್ತೇವೆ ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಸಾಲಬಾಧೆ: ರೈತ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಏ.4(ಮಂಜು)– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ತಾಲೂಕಿನ ರಾಜೇಗೌಡನ ಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ನಾಗೇಗೌಡ(58) ಆತ್ಮಹತ್ಯೆ ಮಾಡಿಕೊಂಡವರು. ಇವರು ತಮ್ಮ 2.20 ಎಕರೆ ಜಮೀನಿನಲ್ಲಿ ಹೊಗೆ ಸೊಪ್ಪು ಬೆಳೆದಿದ್ದರು. ಇದಕ್ಕಾಗಿ ಅಣ್ಣೂರು ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ 4.5 ಲಕ್ಷ ರೂ., ಕೈಸಾಲ4 ಲಕ್ಷ ರೂ. ಸೇರಿದಂತೆ ಒಟ್ಟು 8.5 ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರು. ಹೊಗೆಸೊಪ್ಪು ಮಾರಾಟ ಮಾಡಿದ್ದರೂ ನಿರೀಕ್ಷಿತ ಆದಾಯ ಸಿಗದ ಕಾರಣ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಇದರಿಂದ ತೀವ್ರ ಮನನೊಂದಿದ್ದ ನಾಗೇಗೌಡ ಮನೆಂಯವರೆಲ್ಲಾ ಜಮೀನಿನಲ್ಲಿ ಹೊಗೆ ಸೊಪ್ಪು ಪೈರು ನಾಟಿ ಮಾಡಲು ಹೋಗಿದ್ದ ಸಂದರ್ಭ ಮನೆ ಯಲ್ಲೇ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ. ಪಕ್ಕದ ಮನೆಯ ಚಂದ್ರಶೆಟ್ಟಿ ಎಂಬಾತ ನೋಡಲಾಗಿ ಪ್ರಕರಣ ಬೆಳಕಿಗೆ ಬಂದಿದ್ದು, ವಿಚಾರವನ್ನು ಮನೆಯವರಿಗೆ ತಿಳಿಸಿದ್ದಾರೆ. ವಿಷಂಯು ತಿಳಿದು ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮೃತದೇಹವನ್ನು ರವಾನಿಸಿ ಶವದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು.

ನೀರಿನಲ್ಲಿ ಮುಳುಗಿ ಯುವಕ ಸಾವು

ತಿ.ನರಸೀಪುರ, ಏ.4(ಎಸ್‌ಕೆ)– ನದಿಯಲ್ಲಿ ಸ್ನಾನ ಮಾಡಲು ಹೋದ ಯುವಕ ನೋರ್ವ ಸುಳಿಗೆ ಸಿಲುಕಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಹಳೇ ತಿರುಮಕೂಡಲು ರಾಘವೇಂದ್ರಸ್ವಾಮಿ ದೇವಸ್ಥಾನದ ಬಳಿ ಸಂಭವಿಸಿದೆ.



ಪಟ್ಟಣದ ವಿನಾಯಕ ಕಾಲೋನಿ ನಿವಾಸಿ ಫೋಟೋ ಬಸವರಾಜು ಎಂಬುವರ ಪುತ್ರ ಬಿ.ಪ್ರತೀಕ್(23) ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಯುವಕ. ಇಂದು ಬೆಳಗ್ಗೆ ಬಸವರಾಜು ಪತ್ನಿ ಸರೋಜಮ್ಮ, ಮಕ್ಕಳಾದ ಬಿ.ಪ್ರತೀಕ್, ಬಿ.ಕಾರ್ತಿಕ್ ಹಾಗೂ ತಮ್ಮನ ಮಗ ಪ್ರಕಾಶ್ ಎಂಬುವರೊಡನೆ ಬಟ್ಟೆ ತೊಳೆಯಲು ಹಳೇ ತಿರುಮಕೂಡಲಿನ ರಾಘವೇಂದ್ರಸ್ವಾಮಿ ದೇವಸ್ಥಾನದ ಕಾವೇರಿ ನದಿ ಬಳಿ ಹೋಗಿದ್ದರು. ಈ ವೇಳೆ ಬಿ.ಪ್ರತೀಕ್, ಬಿ.ಕಾರ್ತಿಕ್ ಹಾಗೂ ಪ್ರಕಾಶ್ ಸ್ನಾನ ಮಾಡಲು ನದಿಗೆ ಇಳಿದಾಗ ಸುಳಿಗೆ ಸಿಲುಕಿದ್ದಾರೆ ಎನ್ನಲಾಗಿದೆ. ಈ ವೇಳೆ ಪಕ್ಕದಲ್ಲೇ ಬೋಟ್ ನಡೆಸುತ್ತಿದ್ದವರು ಪ್ರಕಾಶ್ ಮತ್ತು ಕಾರ್ತಿಕ್‌ನನ್ನು ಕಾಪಾಡಿದ್ದಾರೆ. ಆದರೆ ಸಂಪೂರ್ಣ ಮುಳುಗಿದ ಪ್ರತೀಕ್‌ನನ್ನು ಕಾಪಾಡಲು ಅಗ್ನಿಶಾಮಕ ದಳದವರು ಪ್ರಯತ್ನ ಪಟ್ಟರಾದರೂ ಆತ ಅಷ್ಟರಲ್ಲಾಗಲೇ ಮೃತ ಪಟ್ಟಿದ್ದನೆಂದು ಪ್ರಕರಣ ದಾಖಲಿಸಿಕೊಂಡಿರುವ ಪೋಲೀಸರು ತಿಳಿಸಿದ್ದಾರೆ. ಮೃತನ ತಂದೆ ನೀಡಿರುವ ದೂರು ದಾಖಲಿಸಿಕೊಂಡಿರುವ ಮುಖ್ಯ ಪೇದೆ ರೇಖಾ ಮುಂದಿನ ಕ್ರಮ ಜರುಗಿಸಿದ್ದಾರೆ.

ಆಟೋ, ಬೈಕ್ ಮುಖಾಮುಖಿ ಡಿಕ್ಕಿ: ಸವಾರ ಸಾವು

ಹನಗೋಡು, ಏ.4(ಮಹೇಶ್)– ಆಟೋ, ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಕಡೆಮನುಗನಹಳ್ಳಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.



ಹನಗೋಡು ಹೋಬಳಿ ಸಿಂಡೇನಹಳ್ಳಿ ಗ್ರಾಮದ ನಿವಾಸಿ ರಮೇಶ್ (49) ಮೃತಪಟ್ಟವರು. ಇವರ ಪತ್ನಿ ಹೇಮಾ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈತ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಪತ್ನಿ ಹೇಮಾ ಅವರೊಂದಿಗೆ ಕಡೆಮನುಗನಹಳ್ಳಿಗೆ ತೆರಳಿ ಚಿಕ್ಕಮ್ಮನ ಮನೆಯಲ್ಲಿ ಹಬ್ಬದ ಊಟ ಮುಗಿಸಿಕೊಂಡು ಬೈಕ್‌ನಲ್ಲಿ ಸ್ವಗ್ರಾಮ ಸಿಂಡೇನಹಳ್ಳಿಗೆ ವಾಪಸ್ಸಾಗುತ್ತಿದ್ದ ವೇಳೆ ಎದುರಿಗೆ ಬಂದ ಆಟೋ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರಮೇಶ್ ರಕ್ತಸ್ರಾವವಾಗಿ ಹನಗೋಡು ಆಸ್ಪತ್ರೆಗೆ ಸಾಗಿಸುತ್ತಿದ್ದ ಮಾರ್ಗಮಧ್ಯೆ ಸಾವನ್ನಪ್ಪಿದ್ದು, ಪತ್ನಿ ಹೇಮಾ ಅವರಿಗೂ ಪೆಟ್ಟಾಗಿದ್ದು ಹನಗೋಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗರಹೊಳೆಯಲ್ಲಿ ಕಾಡುಪ್ರಾಣಿ ಬೇಟೆ: ಐವರ ಬಂಧನ



ಹುಣಸೂರು, ಏ.4(ಕೆಕೆ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು ವನ್ಯಜೀವಿ ವಲಯದ ದೊಡ್ಡಹರವೆ ಮೀಸಲು ಅರಣ್ಯವನ್ನು ಅಕ್ರಮವಾಗಿ ಪ್ರವೇಶಿಸಿ ಕಡವೆ ಮತ್ತು ಹೆಣ್ಣು ಕೂರೇ ಬೇಟೆಯಾಡಿದ್ದ ಐವರು ಆರೋಪಿಗಳನ್ನು ಹುಣಸೂರು ವನ್ಯಜೀವಿ ವಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು ದೊಡ್ಡಹರವೆ ಗ್ರಾಮದ 2ನೇ ಬ್ಲಾಕ್ ನಿವಾಸಿ ರವಿ, ನಾರಾಯಣ, ನವಿಲೂರು ಗ್ರಾಮದ ನಿವಾಸಿಗಳಾದ ಸ್ವಾಮಿ, ಸುದೀಪ್, ಪ್ರೇಮಕುಮಾರ್ ಬಂಧಿತ ಆರೋಪಿಗಳು. ಬಂಧಿತರಿಂದ ಕೃತ್ಯಕ್ಕೆ ಬಳಸಿದ್ದ 5 ದ್ವಿಚಕ್ರ ವಾಹನಗಳು, ಎರಡು ಸಿಂಗಲ್ ಬ್ಯಾರಲ್ ಬಂದೂಕುಗಳು, ಬ್ಯಾಟರಿಗಳು, ಕೃತ್ಯಕ್ಕೆ ಬಳಸಿದ್ದ ಪರಿಕರಗಳು ಹಾಗೂ ಕಡವೆ ಮಾಂಸ ಮತ್ತು ಹೆಣ್ಣು ಕೂರೆ (ಮೂಸಿಕ ಜಿಂಕೆ)ಯ ಕಳೇಬರವನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳು ಹುಣಸೂರು ವನ್ಯಜೀವಿ ವಲಯದ ದೊಡ್ಡಹರವೆ ಮೀಸಲು ಅರಣ್ಯ ಪ್ರವೇಶಿಸಿ ಕಡವೆ ಹಾಗೂ ಹೆಣ್ಣು ಕೂರೇ ಬೇಟೆಯಾಡಿ ಶುಂಠಿ ಜಮೀನಿನ ಶೆಡ್‌ನಲ್ಲಿ ಮಾಂಸ ಸಂಗ್ರಹಿಸಿಟ್ಟಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಹುಣಸೂರು ವನ್ಯಜೀವಿ ವಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ಐವರು ಆರೋಪಿಗಳನ್ನು ಬಂಧಿಸಿ, ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣ ಸಂಬಂಧಿಸಿದಂತೆ ಇನ್ನೂ 7 ಮಂದಿ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಬಲೆ ಬೀಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಹುಲಿಯೋಜನೆ ನಿರ್ದೇಶಕ ಮಹೇಶ್ ಅವರ ಮಾರ್ಗದರ್ಶನದಲ್ಲಿ ಸಹಾಯಕ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ವಲಯರಣ್ಯಾಧಿಕಾರಿ ಎಸ್.ಹನುಮಂತರಾಜು ನೇತೃತ್ವದಲ್ಲಿ ವಲಯರಣ್ಯಾಧಿಕಾರಿಗಳಾದ ಗಣರಾಜ್ ಪಟಗಾರ್, ಐಟಿಸಿ ವಿಭಾಗದ ಉಪ ವಲಯ ಅರಣ್ಯಾಧಿಕಾರಿಗಳಾದ ರಾಮು ಹೆಚ್.ಕೆ, ಪ್ರಸನ್ನ ಕುಮಾರ್.ಎನ್.ಕೆ, ಅರಣ್ಯ ರಕ್ಷಕರಾದ ಹೆಚ್.ಮಹೇಶ್ ಮತ್ತು ಇಲಾಖಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕುಡಿದ ಮತ್ತಿನಲ್ಲಿ ಮಾವುತನಿಂದ ಹಾಡಿ ಜನರ ಮೇಲೆ ಸುಳ್ಳು ದೂರು

ಹುಣಸೂರು, ಏ.4– ಕುಡಿದ ಅಮಲಿನಲ್ಲಿ ಆನೆ ಮಾವುತನೋರ್ವ ನಡೆಸಿದ ಅವಾಂತರದಿಂದ ಅರಣ್ಯ ಸಿಬ್ಬಂದಿ ಹೈರಾಣಾಗಿರುವ ಘಟನೆ ತಾಲೂಕಿನ ಚಿಕ್ಕ ಹೆಜ್ಜೂರಿನಲ್ಲಿ ಸೋಮವಾರ ನಡೆದಿದೆ.

ತಾಲೂಕಿನ ಚಿಕ್ಕ ಹೆಜ್ಜೂರು ಹಾಡಿಯ ರಾಜು ಎಂಬಾತನೇ ಈ ಅವಾಂತರ ಸೃಷ್ಟಿಸಿದ ವ್ಯಕ್ತಿ. ನಾಗರಹೊಳೆ ಉದ್ಯಾನದಲ್ಲಿ ಅಭಿಮನ್ಯು ಆನೆ ಮಾವುತನಾಗಿರುವ ಈತ ಯುಗಾದಿ ಹಬ್ಬಕ್ಕಾಗಿ ಸ್ವಗ್ರಾಮ ಚಿಕ್ಕ ಹೆಜ್ಜೂರಿಗೆ ಬಂದಿದ್ದ. ಕಂಠಪೂರ್ತಿ ಮದ್ಯ ಸೇವಿಸಿದ್ದ ರಾಜು, ವೀರನಹೊಸಹಳ್ಳಿ ವಲಯ ಅರಣ್ಯಾಧಿಕಾರಿ ನಮನ್ ನಾರಾಯಣ್ ನಾಯಕರಿಗೆ ಫೋನಾಯಿಸಿ ಚಿಕ್ಕ ಹೆಜ್ಜೂರು ಹಾಡಿ ಮಂದಿ ಆನೆ ದಂತವನ್ನು ಬಚ್ಚಿಟ್ಟಿದ್ದಾರೆಂದು ಮಾಹಿತಿ ನೀಡಿದ್ದಾನೆ. ಈ ಮಾಹಿತಿ ಮೇರೆಗೆ ಹಾಡಿಗೆ ದೌಡಾಯಿಸಿದ ಅರಣ್ಯ ಸಿಬ್ಬಂದಿ ಹಾಡಿಯಲ್ಲಿ ತನಿಖೆ ನಡೆಸಿದರೂ, ದಂತ ಪತ್ತೆಯಾಗದೆ ಬರಿಗೈಲಿ ವಾಪಸ್ಸಾಗಿದ್ದಾರೆ. ವಿನಾಕಾರಣ ಹಾಡಿಯವರ ಮೇಲೆ ದಂತ ಬಚ್ಚಿಟ್ಟಿರುವ ಬಗ್ಗೆ ದೂರು ನೀಡಿರುವ ರಾಜುವಿನ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹುಣಸೂರು ಗ್ರಾಮಾಂತರ ಪೊಲೀಸರಿಗೆ ಹಾಡಿ ಯಜಮಾನರು ದೂರು ನೀಡಿದ್ದಾರೆ.

ಗದ್ದುಗೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ

ಮಲ್ಲುಂಡಿ, ಏ.4(ಚನ್ನಪ್ಪ)– ಮಠದಲ್ಲಿ ಈ ಹಿಂದಿನಿಂದಲೂ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಲವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದು ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ದೇವನೂರು ಮಹದೇವಪ್ಪ ತಿಳಿಸಿದರು.



ನಂಜನಗೂಡು ತಾಲೂಕಿನ ಶಿರಮಳ್ಳಿಯಲ್ಲಿ ವಿರಕ್ತ ಮಠದ ಬಸವರಾಜ ಸ್ವಾಮಿಗಳ ಗದ್ದುಗೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಶ್ರೀಬಸವರಾಜ ಸ್ವಾಮೀಜಿಗಳ ಕಾಲದಲ್ಲಿ ಅಕ್ಕನ ಬಳಗ, ಬಸವ ಬಳಗ ಹೀಗೆ ಹಲವು ರೀತಿಯ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಅವರು 2008ರಲ್ಲಿ ಲಿಂಗೈಕ್ಯರಾದ ನಂತರ ಶ್ರೀಮಠವು ಅವರು ಬಿತ್ತಿ ಹೋದ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ. ಇದೀಗ ಅವರ ಗದ್ದುಗೆ ನಿರ್ಮಾಣ ಕಾರ್ಯಕ್ಕೆ ಎಲ್ಲ ಭಕ್ತರ ಸಹಕಾರ ಮುಖ್ಯ ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಮೂರ್ತಿ, ಮಹಾನಗರ ಪಾಲಿಕೆ ಸದಸ್ಯ ಜಯಶಂಕರ, ಮುಡಾ ಆಯುಕ್ತ ನಟೇಶ್, ಮುಖಂಡರಾದ ಹೆಚ್.ಎಂ.ಕೆಂಡಗಣ್ಣಪ್ಪ, ಪುಟ್ಟರಾಜಪ್ಪ, ಬಸವರಾಜಪ್ಪ, ಎಂಸಿಡಿಸಿಸಿ ಕೆಂಪಣ್ಣ ಭೋಗನಂಜಪ್ಪ ಶಿವಪಾದು ಪ್ರಮುಖರಿದ್ದರು.

ಮಹಿಳಾ, ಮಕ್ಕಳ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಕ್ರಮ: ಸಾರಾ

ಕೆ.ಆರ್.ನಗರ, ಏ.4(ಕೆಟಿಆರ್)– ತಾಲೂಕಿನ ಹೆಣ್ಣು ಮಕ್ಕಳು ಹೆರಿಗೆಗೆ ಜಿಲ್ಲೆ ಮತ್ತು ಹೊರ ಜಿಲ್ಲೆಗಳಿಗೆ ಹೋಗುವುದನ್ನು ತಪ್ಪಿಸಲು ಕೆ.ಆರ್.ನಗರದಲ್ಲೇ ಸುಸಜ್ಜಿತ ತಾಯಿ ಮತ್ತು ಮಕ್ಕಳ ಆಸ್ಪತ್ರೆ ತೆರೆದಿದ್ದು, ಈ ಆಸ್ಪತ್ರೆ ರಾಜ್ಯದಲ್ಲೇ 2ನೇ ಸ್ಥಾನದಲ್ಲಿದೆ ಎಂದು ಶಾಸಕ ಸಾ.ರಾ. ಮಹೇಶ್ ಪ್ರಶಂಸಿಸಿದರು.



ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ವೈದ್ಯರು ಮತ್ತು ರೋಗಿಗಳಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಜನತೆಗೆ ಉತ್ತಮ ಚಿಕಿತ್ಸೆ ದೊರೆಯುತ್ತಿದ್ದು, ಆಸ್ಪತ್ರೆ ಮೇಲ್ದರ್ಜೆಗೇರಿಸಿ ಇನ್ನಷ್ಟು ಗುಣಮಟ್ಟದ ಸೇವೆ ನೀಡಲು ಕ್ರಮ ವಹಿಸಲಾಗುವುದು. ತಿಂಗಳಿಗೆ ಕನಿಷ್ಠ 350 ಮಂದಿಗೆ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಲಾಗುತ್ತಿದ್ದು, ಇನ್ನಷ್ಟು ಅನುಕೂಲ ಕಲ್ಪಿಸಲು ಪ್ರಸಕ್ತ 30 ಹಾಸಿಗೆಗಳಿರುವುದನ್ನು 100ಕ್ಕೆ ಹೆಚ್ಚಿಸಲಾಗುತ್ತದೆ ಎಂದರು.

ಆಸ್ಪತ್ರೆಯಲ್ಲಿ ತಾಯಿ ಹಾಗೂ ಮಕ್ಕಳಿಗೆ ಐಸಿಯು ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರ ಈ ಸೇವೆಗಳು ಜನತೆಗೆ ದೊರೆಯಲಿವೆ ಎಂದರು.

ಪುಟ್ಟತಾಯಮ್ಮ ಹೆರಿಗೆ ಆಸ್ಪತ್ರೆಯಲ್ಲಿ ನರ್ಸಿಂಗ್ ಕಾಲೇಜು ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಲೇಜು ಆರಂಭದ ನಂತರ ತಾಲೂಕು ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ ನೀಗಿಸಲು ಸಾಧ್ಯವಾಗಲಿದೆ. ಈಗಿರುವ ವೈದ್ಯರ ಜತೆಗೆ ಹೆಚ್ಚುವರಿಯಾಗಿ ಇಬ್ಬರು ಪ್ರಸೂತಿ ತಜ್ಞರನ್ನು ನೇಮಿಸಲಾಗುವುದು ಎಂದರು.

ಸಾಲಿಗ್ರಾಮ ತಾಲೂಕು ಕೇಂದ್ರವಾಗಿದ್ದು, ಅಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಭೇರ್ಯಕ್ಕೆ ವರ್ಗಾಯಿಸಿ ಆ ಭಾಗದ ಜನತೆಗೆ ಅನುಕೂಲ ಕಲ್ಪಿಸುವ ಜತೆಗೆ ಸಾಲಿಗ್ರಾಮಕ್ಕೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಮಂಜೂರು ಮಾಡಿಸಲಾಗಿದೆ. ಮಿರ್ಲೆ ಗ್ರಾಮದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಹೈಟೆಕ್ ಸ್ಪರ್ಶ ಕೊಡಿಸಲಾಗುತ್ತದೆ ಎಂದರು.

ಈ ವೇಳೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪ್ರಶಾಂತ್, ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಡಾ.ಟಿ.ಶಿವಪ್ರಸಾದ್, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಎಂ.ಎಸ್. ನಾಗೇಂದ್ರ ವೈದ್ಯರಾದ ಡಾ.ಚಂದ್ರಕಲಾ, ಡಾ.ಭವಾನಿ, ಡಾ.ದಿವ್ಯತಾ, ಡಾ.ಚಂದ್ರಶೇಖರ್, ಪುರಸಭೆ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಸಂತೋಷ್ ಗೌಡ, ಮಾಜಿ ಸದಸ್ಯ ಎನ್.ಶಿವಕುಮಾರ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಆರೋಗ್ಯ ಶಿಕ್ಷಣಾಧಿಕಾರಿ ಸಿ.ಎಂ.ರೇಖಾ, ಹಿರಿಯ ಆರೋಗ್ಯ ಸಹಾಯಕ ಕೆ.ವಿ.ರಮೇಶ್ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಮಾರ್ಬಿಯಸ್ (ಇಂ): ಬೆ.10.45ಕ್ಕೆ, ರಾ.9.50ಕ್ಕೆ, ಜೇಮ್ಸ್ (ಕ): ಮ.1ಕ್ಕೆ, ಅಟ್ಯಾಕ್ (ಹಿಂ): ಮ.3.55ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಸಂ.6.20ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.45ಕ್ಕೆ, ತಲೆದಂಡ (ಕ): ಮ.1.20ಕ್ಕೆ, ಜೇಮ್ಸ್ (ಕ): ಸಂ.4ಕ್ಕೆ, ರಾ.7ಕ್ಕೆ, ಅಟ್ಯಾಕ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಹೋಂ ಮಿನಿಸ್ಟರ್ (ಕ): ಬೆ.10.35ಕ್ಕೆ, ಸಂ.4.15ಕ್ಕೆ, ಲೋಕಲ್ ಟ್ರೈನ್ (ಕ): ಮ.1.30ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6.45ಕ್ಕೆ, ಆರ್‌ಆರ್‌ಆರ್ (2ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಆರ್‌ಆರ್‌ಆರ್ (2ಡಿ)(ಕ): ಬೆ.10.55ಕ್ಕೆ, ಆರ್‌ಆರ್‌ಆರ್ (2ಡಿ)(ತೆ): ಮ.2.30ಕ್ಕೆ, ಸಂ.6.15ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆರ್‌ಆರ್‌ಆರ್ (ಹಿಂ): ಬೆ.9.30ಕ್ಕೆ, ಅಟ್ಯಾಕ್ (ಹಿಂ): ಮ.1.10ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಮ.3.55ಕ್ಕೆ, ಮಾರ್ಬಿಯಸ್ (ಇಂ): ರಾ.7.35ಕ್ಕೆ, ಆರ್‌ಆರ್‌ಆರ್ (3ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 2	ಮಾರ್ಬಿಯಸ್ (ಇಂ): ಬೆ.9.35ಕ್ಕೆ, ಆರ್‌ಆರ್‌ಆರ್ (ತೆ): ಬೆ.11.55ಕ್ಕೆ, ಸಂ.6.10ಕ್ಕೆ, ಬಾಡಿಗಾಡ್ (ಕ): ಮ.3.35ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಜೇಮ್ಸ್ (ಕ): ಬೆ.9.50ಕ್ಕೆ, ಮ.3.45ಕ್ಕೆ, ರಾ.9.40ಕ್ಕೆ, ಮಾರ್ಬಿಯಸ್ (ಇಂ): ಮ.1ಕ್ಕೆ, ಅಟ್ಯಾಕ್ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.10ಕ್ಕೆ, ಸಂ.6.45ಕ್ಕೆ, ತಲೆದಂಡ (ಕ): ಮ.3.55ಕ್ಕೆ, ಲೋಕಲ್ ಟ್ರೈನ್ (ಕ): ಮ.12.55ಕ್ಕೆ, ಆರ್‌ಆರ್‌ಆರ್ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಲೋಕಲ್ ಟ್ರೈನ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಜೇಮ್ಸ್ (ಕ): ಮ.1.15ಕ್ಕೆ, ಅಟ್ಯಾಕ್ (ಹಿಂ): ರಾ.7ಕ್ಕೆ, ಆರ್‌ಆರ್‌ಆರ್ (2ಡಿ) (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.30ಕ್ಕೆ, ಆರ್‌ಆರ್‌ಆರ್ (ತೆ): ಮ.12.40ಕ್ಕೆ, ಹೋಂ ಮಿನಿಸ್ಟರ್ (ಕ): ಸಂ.4.05ಕ್ಕೆ, ಜೇಮ್ಸ್ (ಕ): ಸಂ.6.35ಕ್ಕೆ, ಅಟ್ಯಾಕ್ (ಹಿಂ): ರಾ.9.30ಕ್ಕೆ
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಬೆ.10.30ಕ್ಕೆ, ಹೋಂ ಮಿನಿಸ್ಟರ್ (ಕ): ಮ.2ಕ್ಕೆ, ಮಾರ್ಬಿಯಸ್ (ಇಂ): ಸಂ.4.30ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ಸಂ.6.35ಕ್ಕೆ,
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.30ಕ್ಕೆ, ತಲೆದಂಡ (ಕ): ಮ.1ಕ್ಕೆ, ಮನ್ಮಥ ಲೀಲೈ(ತ): ಮ.3.45ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6ಕ್ಕೆ, ಜೇಮ್ಸ್ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಮತ್ತೆ ಮುಗ್ಗರಿಸಿದ ಎಸ್‌ಆರ್‌ಹೆಚ್: ಲಖನೌಗೆ 2ನೇ ಜಯ

ಮುಂಬೈ, ಏ.4– ನಾಯಕ ಕೆ.ಎಲ್.ರಾಹುಲ್, ದೀಪಕ್ ಹೂಡಾ ಅವರ ಅರ್ಧಶತಕ ಹಾಗೂ ಆವೇಶ್ ಖಾನ್, ಜೇಸನ್ ಹೋಲ್ಡರ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ 12 ರನ್‌ಗಳ ಜಯ ಸಾಧಿಸಿದೆ. ಈ ಮೂಲಕ ಟೂರ್ನಿಯಲ್ಲಿ ಲಖನೌ 2ನೇ ಜಯ ಸಾಧಿಸಿದರೇ, ಎಸ್‌ಆರ್‌ಹೆಚ್ ಮತ್ತೆ ಮುಗ್ಗರಿಸಿದೆ.




ಇಲ್ಲಿನ ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಖನೌ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 169ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ತಂಡದ ಪರ ನಾಯಕ ಕೆ.ಎಲ್.ರಾಹುಲ್ 50 ಎಸೆತಗಳಲ್ಲಿ 1 ಸಿಕ್ಸರ್, 6 ಬೌಂಡರಿ ಒಳಗೊಂಡ 68 ರನ್ ಸಿಡಿಸಿದರೇ, ದೀಪಕ್ ಹೂಡ 33 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 51 ರನ್ ಸಿಡಿಸಿದ್ದು ಬಿಟ್ಟರೇ, ಉಳಿದವರಿಂದ ಬೃಹತ್ ಮೊತ್ತ ದಾಖಲಾಗಲಿಲ್ಲ. ಉಳಿದಂತೆ ಆಯುಷ್ ಬದೋನಿ 19, ಮನೀಶ್ ಪಾಂಡೆ 11 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಬೌಲಿಂಗ್‌ನಲ್ಲಿ ವಾಷಿಂಗ್‌ಟನ್ ಸುಂದರ್, ರೋಮೆರಿಯೋ ಶೆಫರ್ಡ್ ಹಾಗೂ ಟಿ.ನಟರಾಜನ್ ತಲಾ 2 ವಿಕೆಟ್ ಕಬಳಿಸಿದರು.

ಲಖನೌ ನೀಡಿದ 170 ರನ್‌ಗಳ ಸವಾಲಿನ ಮೊತ್ತ ಬೆನ್ನತ್ತಿದ ಹೈದರಾಬಾದ್ ಆವೇಶ್ ಖಾನ್ ಹಾಗೂ ಜೇಸನ್ ಹೋಲ್ಡರ್ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 157 ರನ್‌ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ಅಭಿಷೇಕ್ ಶರ್ಮಾ 13, ನಾಯಕ ಕೇನ್ ವಿಲಿಯಮ್ಸನ್ 16, ರಾಹುಲ್ ತ್ರಿಪಾಠಿ 44, ಏಡನ್ ಮರ್ಕರಂ 12, ನಿಕೋಲಸ್ ಪೂರನ್ 34, ವಾಷಿಂಗ್‌ಟನ್ ಸುಂದರ್ 18 ರನ್ ಗಳಿಸಿದರು. ಲಖನೌ ಪರ ಆವೇಶ್ ಖಾನ್ 4, ಜೇಸನ್ ಹೋಲ್ಡರ್ 3, ಕೃನಾಲ್ ಪಾಂಡ್ಯ 2 ವಿಕೆಟ್ ಉರುಳಿಸಿದರು. ಆವೇಶ್ ಖಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ದಾರಿದೀಪ ಚಾರಿಟೇಬಲ್ ಟ್ರಸ್ಟ್ (ರಿ), ಮೈಸೂರು
ಎಲ್ಲರಿಗೂ ಹೊಸ ಸಂವತ್ಸರದ
ಯುಗಾದಿ ಹಬ್ಬದ ಶುಭಾಶಯಗಳು
ದಾರಿದೀಪ ಜನ ಸೇವಾ ಕೇಂದ್ರ, ಮೈಸೂರು
ಉದ್ಘಾಟನಾ ಸಮಾರಂಭ
ದಿನಾಂಕ:
08.04.2022 ಶುಕ್ರವಾರ,
ಸಂಜೆ 5 ಗಂಟೆಗೆ
ಸ್ಥಳ:
ಆದಿಚುಂಚನಗಿರಿ ರಸ್ತೆ, ಅರವಿಂದ ಆಸ್ಪತ್ರೆ
ಮುಂಭಾಗ, ಅರವಿಂದನಗರ, ಮೈಸೂರು
ಸರ್ವರಿಗೂ ಆತ್ಮೀಯ ಆಮಂತ್ರಣ
ಎಂ. ಪ್ರದೀಪ್ ಕುಮಾರ್.ಎಂ.ಬಿ.ಎ, ಮಾಜಿ ನಗರಪಾಲಿಕೆ ಸದಸ್ಯರು,
ಕಾಂಗ್ರೆಸ್ ಮುಖಂಡರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಅಧ್ಯಕ್ಷರು: ದಾರಿ ದೀಪ ಚಾರಿಟೇಬಲ್ ಟ್ರಸ್ಟ್(ರಿ), ಮೊ: 9886041227



ಕೆ.ಪಿ.ಸಿ.ಸಿ. ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಬಡವರ ಬಂಧು, ಯುವಕರ ಕಣ್ಮಣಿ, ಸ್ನೇಹಜೀವಿ ಸದಾ ಹಸನ್ಮುಖಿಯಾದ
ಸನ್ಮಾನ್ಯ ಶ್ರೀ ಸಿ. ನರೇಂದ್ರಣ್ಣ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಹಿನಕಲ್ ಮಂಜು
ಉಪಾಧ್ಯಕ್ಷರು
ಯುವ ಕಾಂಗ್ರೆಸ್ ಸಮಿತಿ
ಧನಗಳ್ಳಿ ಪ್ರವೀಣ್
ಪ್ರಧಾನ ಕಾರ್ಯದರ್ಶಿ
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಬಿಳಿಕೆರೆ ಸ್ವಾಮಿ
ಪ್ರಧಾನ ಕಾರ್ಯದರ್ಶಿ
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ವಿನೋದ್ ಎಸ್.ಆರ್.ಎಸ್.
ಅಧ್ಯಕ್ಷರು
ಚಾಮುಂಡೇಶ್ವರಿ ಬ್ಲಾಕ್
ಯುವ ಕಾಂಗ್ರೆಸ್ ಸಮಿತಿ
ಪೈ॥ ನವೀನ್ ಕುಮಾರ್
ಪ್ರಧಾನ ಕಾರ್ಯದರ್ಶಿ
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಹೊಸಕೋಟೆ ಗಿರೀಶ್
ಅಧ್ಯಕ್ಷರು
ವರುಣಾ ಬ್ಲಾಕ್
ಯುವ ಕಾಂಗ್ರೆಸ್ ಸಮಿತಿ
ಸಂತೋಷ್ ಕುಮಾರ್
ಅಧ್ಯಕ್ಷರು
ಇಲವಾಲ ಬ್ಲಾಕ್
ಯುವ ಕಾಂಗ್ರೆಸ್ ಸಮಿತಿ
ಮಹದೇವಸ್ವಾಮಿ
ಅಧ್ಯಕ್ಷರು
ಗ್ರಾಮ ಪಂಚಾಯಿತಿ
ಪಡುವಾರಹಳ್ಳಿ ಹರೀಶ್
ಉದ್ಯಮಿ
ಚೇತನ್
ಯುವ ಮುಖಂಡರು
ಕೋಟೆ ಸುರೇಶ್
ಯುವ ಮುಖಂಡರು
ಪ್ರಕಟಣೆ : ಹಿನಕಲ್ ಮಂಜು ಮತ್ತು ಸಿ. ನರೇಂದ್ರಣ್ಣ ಅಭಿಮಾನಿಗಳ ಬಳಗ, ಮೈಸೂರು